ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 85,213 | ನಿಫ್ಟಿ 26,027 | $/₹ 90.78 | ಚಿನ್ನ (Std. 10g) ₹1,38,770 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,99,500 (ಬೆಂಗಳೂರು)



ಪ್ರತಿಭಟನೆ
ಕಲಬುರಗಿಯ ಎಸ್‌ವಿಪಿ ವೃತ್ತದಿಂದ ಸಮಾಜ ಕಲ್ಯಾಣ ಇಲಾಖೆ ಕಚೇರಿವರೆಗೆ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ಸದಸ್ಯರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು

ನರೇಗಾ ಸ್ವರೂಪ ಬದಲಿಗೆ ಮಸೂದೆ

ವಿಕಸಿತ ಭಾರತಕ್ಕೆ 'ಜಿ ರಾಮ್ ಜಿ ಯೋಜನೆ ● ರಾಜ್ಯಗಳಿಗೂ ಹೊರೆ

ನವದೆಹಲಿ: ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು 2005ರಲ್ಲಿ ಜಾರಿಗೆ ತಂದಿದ್ದ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯ (ನರೇಗಾ) ಹೆಸರನ್ನೂ ಸೇರಿದಂತೆ ಕಾಯ್ದೆಯಲ್ಲಿನ ಹಲವು ಪ್ರಮುಖ ಅಂಶಗಳಿಗೆ ಬದಲಾವಣೆ ತರಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ. ಹೆಸರನ್ನು ಮಾತ್ರವಲ್ಲ ಕಾಯ್ದೆಯ ಮೂಲ ಸ್ವರೂಪವನ್ನೇ ಬದಲಾಯಿಸಲಾಗುತ್ತಿದೆ ಎನ್ನುವುದು ವಿರೋಧ ಪಕ್ಷಗಳ ಆರೋಪ. ನರೇಗಾ ಬದಲಿಗೆ 'ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಮಸೂದೆ, 2025'ಅನ್ನು ಮಂಡಿಸಲು ಕೇಂದ್ರ ಸರ್ಕಾರವು ಮುಂದಾಗಿದೆ.

ಮಸೂದೆ ಹೇಳುವುದೇನು?

125 ಕೆಲಸದ ದಿನಗಳು
ನರೇಗಾದಲ್ಲಿ ಒಂದು ಆರ್ಥಿಕ ವರ್ಷದಲ್ಲಿ 100 ಕೆಲಸ ದಿನಗಳಿದ್ದವು. ಹೊಸ ಮಸೂದೆಯಲ್ಲಿ ಇದನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ

ಕೃಷಿ ಋತು: ಕೆಲಸ ಇಲ್ಲ
ಒಂದು ಆರ್ಥಿಕ ವರ್ಷದಲ್ಲಿ ನಾಟಿ ಮತ್ತು ಕಟಾವಿನ ವೇಳೆ 60 ದಿನಗಳವರೆಗೆ ಉದ್ಯೋಗ ಖಾತರಿ ಕೆಲಸವನ್ನು ಮಾಡಿಸುವಂತಿಲ್ಲ

ಪ್ರದೇಶವಾರು ದಿನಗೂಲಿ ನಿಗದಿ
ಬೇರೆ ಬೇರೆ ಪ್ರದೇಶಗಳಿಗೆ ಅನುಸಾರವಾಗಿ ಕೇಂದ್ರವು ಕಾರ್ಮಿಕರಿಗೆ ದಿನಗೂಲಿ ನಿಗದಿ ಮಾಡಬಹುದು. ಆದರೆ, ನರೇಗಾದಲ್ಲಿ ನೀಡಲಾಗುತ್ತಿದ್ದ ದಿನಗೂಲಿ ಪ್ರಮಾಣಕ್ಕಿಂತ ಕಡಿಮೆ ನೀಡುವಂತಿಲ್ಲ. ಮಸೂದೆ ಅಂಗೀಕಾರಗೊಂಡು, ದಿನಗೂಲಿ ನಿಗದಿ ಮಾಡುವವರೆಗೂ ನರೇಗಾ ಅಡಿ ನೀಡಲಾಗುತ್ತಿದ್ದ ದಿನಗೂಲಿಯನ್ನೇ ನೀಡಲಾಗುವುದು

ಅನುದಾನ: ರಾಜ್ಯಗಳಿಗೆ ಶೇ 40ರಷ್ಟು ಹೊರೆ
ನರೇಗಾ ಯೋಜನೆಗೆ ಬೇಕಾದ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿತ್ತು. ಆದರೆ, ಈಗ ರಾಜ್ಯ ಸರ್ಕಾರಗಳೂ ಹಣ ಭರಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಶೇ 60ರಷ್ಟು ಹಣವನ್ನು, ರಾಜ್ಯ ಸರ್ಕಾರವು ಶೇ 40ರಷ್ಟು ಹಣವನ್ನು ಭರಿಸಬೇಕಾಗುತ್ತದೆ (ಎಲ್ಲ ರಾಜ್ಯ ಸರ್ಕಾರಗಳು ಮತ್ತು ವಿಧಾನಸಭೆ ಇರುವ ಕೇಂದ್ರಾಡಳಿತ ಪ್ರದೇಶಗಳು). ಈಶಾನ್ಯ ರಾಜ್ಯಗಳು, ಹಿಮಾಲಯದ ತಪ್ಪಲಿನ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ (ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅನುದಾನ ಹಂಚಿಕೆ ಅನುಪಾತವು ಶೇ 90:10ರಷ್ಟಿರುತ್ತದೆ. ವಿಧಾನಸಭೆ ಇಲ್ಲದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರವೇ ಪೂರ್ತಿ ಹಣ ಭರಿಸುತ್ತದೆ.


8

ಗರಿಷ್ಠ ಮಿತಿ ನಿಗದಿ
ಕೇಂದ್ರ ಸರ್ಕಾರವು ಮೊದಲೇ ನಿಗದಿಪಡಿಸಿದ ನಿಯಮಾನುಸಾರ ಗರಿಷ್ಠ ಮಿತಿಗೆ ಒಳಪಟ್ಟು ರಾಜ್ಯ ಸರ್ಕಾರಗಳಿಗೆ ಹಣ ಮಂಜೂರು ಮಾಡುತ್ತದೆ. ಹಂಚಿಕೆ ಮಾಡಿದ ಅನುದಾನಕ್ಕಿಂತ ಹೆಚ್ಚುವರಿ ಕೆಲಸ ದಿನಗಳನ್ನು ಮಾಡಿಸಿದರೆ ರಾಜ್ಯ ಸರ್ಕಾರವೇ ಹೆಚ್ಚುವರಿ ಹಣವನ್ನು ಭರಿಸಬೇಕಾಗುತ್ತದೆ.

ಬಯೊಮೆಟ್ರಿಕ್ ಕಡ್ಡಾಯ
- ಕಾರ್ಮಿಕರು, ಅಧಿಕಾರಿಗಳಿಗೆ ಬಯೊಮೆಟ್ರಿಕ್ ದೃಢೀಕರಣ ಕಡ್ಡಾಯ
- ಕೆಲಸದ ಮೇಲೆ ನಿಗಾ ಇರಿಸಲು, ಕೆಲಸದ ಸ್ಥಳದ ಡಿಜಿಟಲ್ ಮ್ಯಾಪಿಂಗ್, ಉಪಗ್ರಹ ಚಿತ್ರಗಳು ಸೇರಿದಂತೆ ಇತರೆ ಜಿಯೊಸ್ಪೇಷಿಯಲ್ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು
- ಕೆಲಸಕ್ಕಾಗಿ ಮೊಬೈಲ್‌ನಲ್ಲಿ ಅರ್ಜಿ ಸಲ್ಲಿಸಬೇಕು, ಯಾವ ಕೆಲಸವಾಗಬೇಕು, ಎಷ್ಟು ಜನ ಕೆಲಸಕ್ಕೆ ಬಂದಿದ್ದಾರೆ ಎಂಬುದನ್ನು ದಾಖಲಿಸಬೇಕು, ದಿನಗೂಲಿ ನೀಡಿಕೆ, ಕೆಲಸದ ಪ್ರಗತಿ ಮೇಲೆ ನಿಗಾ ಇಡುವುದಕ್ಕೆ ಡ್ಯಾಶ್‌ಬೋರ್ಡ್ ಮೂಲಕ ಮೇಲ್ವಿಚಾರಣೆ ನಡೆಸಬೇಕು
- ಕೆಲಸದ ಪ್ರಗತಿ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಡಿಜಿಟಲ್ ವೇದಿಕೆ ಮೂಲಕವೂ ಮಾಹಿತಿ ನೀಡಬೇಕು. ತಪಾಸಣೆ ಕೈಗೊಂಡ ಬಗ್ಗೆ, ಹಣ ಪಾವತಿಯಾದ ಬಗ್ಗೆ, ಸಂಬಂಧಪಟ್ಟ ಅಧಿಕಾರಿಗಳ ಹೆಸರು ಸೇರಿ ಎಲ್ಲ ಮಾಹಿತಿಯನ್ನು ನೀಡಬೇಕು

ಪಹಲ್ಗಾಮ್: ದೋಷಾರೋಪ ಸಲ್ಲಿಕೆ
ಶ್ರೀನಗರ: ಏಪ್ರಿಲ್ 22ರಂದು ನಡೆದ ಪಹಲ್ಗಾಮ್ ದಾಳಿಯ ತನಿಖೆ ನಡೆಸಿರುವ ಎನ್‌ಐಎ ಮಂಗಳವಾರ 1,597 ಪುಟಗಳ ದೋಷಾರೋಪ ಪಟ್ಟಿಯನ್ನು ಜಮ್ಮುವಿನಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದೆ.

9



ಚಿನಕುರುಳಿ ಪ್ರಕಾಶ್ ಶೆಟ್ಟಿ



ಅಪಘಾತ ತಡೆಗೆ ಮಾರ್ಗಸೂಚಿ ರೂಪಿಸಲು 'ಸುಪ್ರೀಂ' ಚಿಂತನೆ



ನವದೆಹಲಿ (ಪಿಟಿಐ): ಎಕ್ಸ್‌ಪ್ರೆಸ್ ವೇಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಗಟ್ಟಲಿಕ್ಕಾಗಿ ದೇಶದಾದ್ಯಂತ ಅನ್ವಯವಾಗುವ ಮಾರ್ಗಸೂಚಿ-ಗಳನ್ನು ರೂಪಿಸುವ ಬಗ್ಗೆ ಸುಪ್ರೀಂ ಕೋರ್ಟ್ ಚಿಂತನೆ ನಡೆಸಿದೆ.

ರಾಜಸ್ಥಾನದ ಫಲೋದಿಯಲ್ಲಿ ನ. 2ರಂದು ನಡೆದಿದ್ದ ಅಪಘಾತಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ವಿಜಯ್ ಬಿಷ್ಣೋಯಿ ಅವರ ಪೀಠವು, ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಎಕ್ಸ್‌ಪ್ರೆಸ್ ವೇಗಳ ಎರಡೂ ಬದಿಗಳಲ್ಲಿ ಅಕ್ರಮವಾಗಿ ತಲೆಎತ್ತಿರುವ ಢಾಬಾಗಳು ಅಪಘಾತಗಳಿಗೆ ಕಾರಣ ಆಗಿರಲೂಬಹುದು ಎಂದು ಸೋಮವಾರ ಹೇಳಿತು.

ಇಂತಹ ಢಾಬಾಗಳ ವಿರುದ್ಧ ಕ್ರಮ-ಕೈಗೊಳ್ಳಲು ಲಭ್ಯವಿರುವ ನಿಯಮಗಳ ವಿವರ ಸಲ್ಲಿಸುವಂತೆ ಪೀಠವು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು.

7

ಖರ್ಗೆ, ರಾಹುಲ್ ಕ್ಷಮೆಗೆ ಪಟ್ಟು

ನವದೆಹಲಿ: ಕಾಂಗ್ರೆಸ್ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೆದರಿಕೆ ಹಾಕುವ ರೀತಿಯಲ್ಲಿ ಘೋಷಣೆಗಳನ್ನು ಕೂಗಲಾಗಿದೆ ಎಂಬ ಆರೋಪವು ಸೋಮವಾರ ಸಂಸತ್ತಿನ ಉಭಯ ಸದನಗಳಲ್ಲಿ ಗದ್ದಲಕ್ಕೆ ಕಾರಣವಾಯಿತು.

ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಕ್ಷಮೆಯಾಚಿಸಬೇಕು ಎಂದು ಬಿಜೆಪಿ ಪಟ್ಟು ಹಿಡಿಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಪರಸ್ಪರ ಮಾತಿನ ಚಕಮಕಿ ನಡೆಸಿದ್ದರಿಂದ ಲೋಕಸಭೆ ಕಲಾಪವನ್ನು ಬೆಳಿಗ್ಗೆ ಎರಡು ಸಲ ಮುಂದೂಡಲಾಯಿತು.

ಭಾನುವಾರ ಇಲ್ಲಿನ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತನೊಬ್ಬ 'ಮೋದಿ ಅವರ ಸಮಾಧಿ ತೋಡುತ್ತೇವೆ' (ಮೋದಿ ತೇರಿ ಕಬರ್ ಖುದೇಗೀ) ಎಂಬ ಘೋಷಣೆ ಕೂಗಿದ್ದಾಗಿ ಆರೋಪಿಸಲಾಗಿದೆ. ಬೆಳಿಗ್ಗೆ 11ಕ್ಕೆ ಲೋಕಸಭೆ ಕಲಾಪ ಆರಂಭ-ವಾಗುತ್ತಿದ್ದಂತೆಯೇ ಈ ವಿಷಯ ಪ್ರಸ್ತಾಪಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ನಾವು ರಾಜಕೀಯ ವಿರೋಧಿಗಳೇ ಹೊರತು ಶತ್ರುಗಳಲ್ಲ. ಪ್ರಧಾನಿಯವರ ಸಮಾಧಿ ತೋಡುವುದಾಗಿ ಕಾಂಗ್ರೆಸ್ ರ‍್ಯಾಲಿಯಲ್ಲಿ ಕಾರ್ಯಕರ್ತರು ಬೆದರಿಕೆ ಹಾಕಿದ್ದಾರೆ. ಇದು ದುರದೃಷ್ಟಕರ' ಎಂದರು.

12




ಶ್ರೀ ಎಂ. ಕೃಷ್ಣಪ್ಪ
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಡಾ|| ಮಂಜುನಾಥ್
ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಶ್ರೀ ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್
ನಾಡಿನ ರೈತ ಬಂಧು, ರೈತರ ಸಾಲ ಮನ್ನ ಹರಿಕಾರರು, ಬದ್ಧತೆ, ನಂಬಿಕೆ,
ಮಾತೃ ಹೃದಯದ ಅಮ್ಮನ ಮಡಿಲಿನ ಆಸರೆಯ ಹೃದಯವಂತರು
ವೈಶಾಲ್ಯತೆಯ ಮೇರು ವ್ಯಕ್ತಿತ್ವ ಹೊಂದಿರುವಕರುನಾಡಿನ
ಸನ್ಮಾನ್ಯ ಶ್ರೀ ಹೆಚ್. ಡಿ. ಕುಮಾರಸ್ವಾಮಿ ರವರಿಗೆ
ಜನಪ್ರಿಯ ಮಾಜಿ ಮುಖ್ಯಮಂತ್ರಿಗಳು ಮಂಡ್ಯ ಲೋಕಸಭಾ ಸಂಸದರು
ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ
ಜನ್ಮದಿನದ
ಶುಭಾಷಯಗಳು
16-12-2025
ಮಂಗಳವಾರ
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು
ನಾಮನಿರ್ದೇಶಿತ ಸದಸ್ಯರು, ಕರ್ನಾಟಕ ಸರ್ಕಾರ
ಬೆಂಗಳೂರು ದಕ್ಷಿಣ ತಾಲ್ಲೂಕು ಮಾಜಿ ತಾಲೂಕು ಪಂಚಾಯಿತಿ &
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಗೊಟ್ಟಿಗೆರೆ
ಮಾಜಿ ಕಾರ್ಯಾಧ್ಯಕ್ಷ ಉತ್ತರಹಳ್ಳಿ, ವಿಧಾನಸಭಾ ಕ್ಷೇತ್ರ
ಜನರೊಂದಿಗೆ ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
ಶುಭ ಕೋರುವವರು:
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
Give a missed call to the number to register your JDS membership : 9964002028

veenaworld.com

ವೀಣಾ ವರ್ಲ್ಡ್ ನಿಮಗಾಗಿ ತಂದಿದೆ, ಈ ಭೂಮಿಯ ಮೇಲಿನ ಅತ್ಯಂತ ಅಪರೂಪದ ಪ್ರವಾಸಗಳಲ್ಲಿ ಒಂದನ್ನು
- ಈ ಪ್ಲಾನೆಟ್‌ನಲ್ಲಿ ಕೆಲವೇ ಕೆಲವರು ಮಾತ್ರ ಅನುಭವಿಸಬಹುದಾದ ಒಂದು ಅಪೂರ್ವ ಪ್ರವಾಸ.

ಅಂಟಾರ್ಕ್ಟಿಕಾ

ದ ಸೆವೆಂಥ್ ಕಾಂಟಿನೆಂಟ್

ಸ್ವಾನ್ ಹೆಲೆನಿಕ್ ಲಗ್ಷುರಿ ಎಕ್ಸ್‌ಪೆಡಿಶನ್ ಕ್ರೂಝ್,
ವೀಣಾ ವರ್ಲ್ಡ್‌ನಿಂದ
ಕ್ಯುರೇಟೆಡ್ ಮತ್ತು ಅವರ ಒಡನಾಟದಲ್ಲಿ



ಉಶುವಾಯಿಯಾ, ಬ್ವೇನೊಸ್ ಐರೀಝ್
ಅಂಟಾರ್ಕ್ಟಿಕ್ ಪೆನಿನ್ಸುಲಾ
ಅಂಟಾರ್ಕ್ಟಿಕಾ - 13 Days
ಫೆಬ್ರವರಿ 3
₹ 13,25,000
(Mumbai-Mumbai)
₹ 11,25,000
(J&L, ex-ಬ್ವೇನೊಸ್ ಐರೀಝ್)

ನಾವು ಅನೇಕ ಪ್ರವಾಸಗಳನ್ನು ಕೈಗೊಳ್ಳುತ್ತೇವೆ... ಆದರೆ, ಕೆಲವೊಂದು ಪ್ರವಾಸಗಳು ನಮ್ಮ ಜೀವನಕ್ಕೆ ಹೊಸ ಅರ್ಥ ನೀಡುತ್ತವೆ.
ಅಂಟಾರ್ಕ್ಟಿಕಾ ಒಂದು ಸಾಧನೆಯಾಗಿದೆ - ಇದು ಯಾರೂ ಹೆಚ್ಚು ಸ್ಪರ್ಶಿಸದ ಭೂಮಿಯಾಗಿದೆ, ಅತ್ಯಂತ ನಿರ್ಮಲ ಹಾಗೂ ಪರಿಶುದ್ಧವಾಗಿದೆ;
ಕೆಲವೇ ಕೆಲವರು ಮಾತ್ರ ಭೇಟಿ ನೀಡಬಹುದಾದ ಅಮೋಘ ತಾಣವಾಗಿದೆ.
ನೀವು ಪದೇ ಪದೇ ಸೆವೆಂಥ್ ಕಾಂಟಿನೆಂಟ್‌ನ ಕನಸು ಕಾಣುತ್ತಿದ್ದರೆ, ಅದನ್ನು ನನಸಾಗಿಸುವ ಕ್ಷಣ ಇದೋ ಸಮೀಪಿಸಿದೆ.

- ಭೂಮಿಯ ಕಟ್ಟಕಡೆಯ ಪರಿಶುದ್ಧ-ನಿರ್ಮಲ ಗಡಿ ಪ್ರದೇಶಕ್ಕೆ, ಜೀವಮಾನದ ಎಕ್ಸ್‌ಪೆಡಿಶನ್
- ಪರಿಣಿತ ಪ್ರಕೃತಿಶಾಸ್ತ್ರಜ್ಞರೊಂದಿಗೆ, ವರ್ಲ್ಡ್-ಕ್ಲಾಸ್ ಎಕ್ಸ್‌ಪೆಡಿಶನ್
- ಝೊಡಿಯಾಕ್ ರೈಡ್ಸ್ , ಮಂಜುಗಡ್ಡೆಯ ತೀರಗಳಲ್ಲಿ ಗೈಡೆಡ್ ಲ್ಯಾಂಡಿಂಗ್ಸ್, ಉಪನ್ಯಾಸಗಳು ಮತ್ತು ವನ್ಯಜೀವಿಗಳ ಸಂಧಿಸುವಿಕೆ
- ಪೆಂಗ್ವಿನ್‌ಗಳು ಮತ್ತು ಬೃಹತ್ ಹಿಮನದಿಗಳ ನಡುವೆ ನಡೆದಾಡುವಿಕೆ
- ವೀಣಾ ವರ್ಲ್ಡ್‌ನ ಕಾಳಜಿಯೊಂದಿಗೆ ಆರಾಮದಾಯಕ, ಆಲ್-ಇನ್‌ಕ್ಲೂಸಿವ್ ಟೂರ್
- ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್‌ನೊಂದಿಗೆ ಪೂರ್ತಿ ಪ್ರಯಾಣ

ಈಗ ಅಲ್ಲದಿದ್ದರೆ... ಮತ್ತೆ ಯಾವಾಗ?

ಫೆಬ್ರವರಿಯಲ್ಲಿ ನಿರ್ಗಮನ. ಸೀಮಿತ ಎಕ್ಸ್‌ಪೆಡಿಶನ್ ನೌಕಾಯಾನಗಳು.







ತ್ವರೆಮಾಡಿ, ಇಂದೇ ಬುಕ್ ಮಾಡಿ; ಕಾನ್ಸುಲೇಟ್‌ಗಳಲ್ಲಿ ಜನದಟ್ಟಣೆಯಾಗುವ ಮೊದಲೇ ನಿಮ್ಮ ವೀಸಾ ಪ್ರಕ್ರಿಯೆ ಆರಂಭಿಸಿರಿ.
118 ವೀಸಾ ಎಕ್ಸಿಕ್ಯೂಟಿವ್ಸ್‌ನ ನಮ್ಮ ಟೀಮ್ ನಿಮ್ಮ ಸಹಾಯಕ್ಕಿದೆ!

ಫುಲ್ ಪೇಮೆಂಟ್‌ನ ಪ್ರಯೋಜನ
ಟೂರ್‌ಗಿಂತ ಕನಿಷ್ಠ ಮೂರು ತಿಂಗಳು ಮೊದಲು ಫುಲ್ ಪೇಮೆಂಟ್ ಮಾಡಿ, ₹ 3,000ದಿಂದ ₹ 15,000 pp ವರೆಗೆ ಉಳಿತಾಯ ಮಾಡಿ

£ $ € ಮೇಲೇರುತ್ತಿವೆ!
ಬೆಲೆಗಳು ಶೀಘ್ರದಲ್ಲೇ ಹೆಚ್ಚಾಗಲಿವೆ.
ಇಂದೇ ಬುಕ್ ಮಾಡಿ ಮತ್ತು ಪೂರ್ಣ ಟೂರ್ ಪ್ರೈಸ್‌ಅನ್ನು ಭಾರತೀಯ ರೂಪಾಯಿಗಳಲ್ಲಿ ಪಾವತಿಸುವ ಮೂಲಕ ನಿಮ್ಮ ಟೂರ್ ಪ್ರೈಸ್‌ಅನ್ನು ಲಾಕ್‌ಮಾಡಿ

ಪೋಸ್ಟ್-ಟೂರ್ ಹಾಲಿಡೇ
ವೀಣಾ ವರ್ಲ್ಡ್‌ನ ಪ್ರಿ-ಟೂರ್ ಆ್ಯಂಡ್ ಪೋಸ್ಟ್-ಟೂರ್ ಹಾಲಿಡೇ ಪ್ಯಾಕೇಜಸ್ ಬಳಸಿಕೊಂಡು ನಿಮ್ಮ ಟೂರ್‌ನ ಸಂಪೂರ್ಣ ಆನಂದ ಪಡೆಯಿರಿ.

ಬುಕಿಂಗ್ಸ್ ಭರದಿಂದ ಸಾಗಿವೆ
ಚೆರ್ರಿ ಬ್ಲಾಸಮ್ ಜಪಾನ್
ಟ್ಯೂಲಿಪ್ ಗಾರ್ಡನ್ಸ್ ಯುರೋಪ್
ಅಮೆರಿಕಾ 2026
ತ್ವರೆಮಾಡಿ!

Join Veena World for an informative online interaction on Antarctica
on Zoom, Tue, 16th Dec @ 6PM
Thu, 18th Dec @ 6PM | Fri, 19th Dec @ 5PM
Call: 887 997 2223

veenaworld.comನಲ್ಲಿ ಭಾರತಾದ್ಯಂತ ಮತ್ತು ವಿಶ್ವಾದ್ಯಂತದ ವೀಣಾ ವರ್ಲ್ಡ್ಸ್ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟೂರ್ಸ್ ಅನ್ವೇಷಿಸಿರಿ.

Ex-Mumbai/Bengaluru ನಿರ್ಗಮನಗಳಿಂದ ಇಲ್ಲವೇ ಭಾರತದ ಯಾವುದೇ ನಗರದಿಂದ ಅಥವಾ ವಿದೇಶದಿಂದ ಜಾಯ್ನಿಂಗ್ ಆ್ಯಂಡ್ ಲೀವಿಂಗ್ (J&L) ಟೂರ್ಸ್‌ನಿಂದ ಆಯ್ಕೆಮಾಡಿ. ಈ ಕೆಳಗಿನ ಬೆಲೆ ಪಟ್ಟಿಯಲ್ಲಿವೆ: • Ex-Mumbai/Bengaluru ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿವೆ). • J&L ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿಲ್ಲ). ನಿಮ್ಮ J&L ಟ್ರಾವೆಲ್‌ಗೆ ಸಹಾಯ ಬೇಕೇ? ಫ್ಲೈಟ್ಸ್, ವೀಸಾಗಳು ಮತ್ತು ಇನ್ನಿತರ ವಿಷಯಗಳಿಗಾಗಿ ನಿಮಗೆ ಸಹಾಯ ಮಾಡಲು ನಮ್ಮ ಟೀಮ್ ಸಿದ್ಧವಿದೆ.

Until April, all **Veena World** sales offices will remain open on **Sundays** as well.

ನಾರ್ಥ್ ಅಮೆರಿಕಾ, ಸೌಥ್ ಅಮೆರಿಕಾ

ಟೂರ್ ನೇಮ್	Ex-Mumbai	J&L
ಅಂಟಾರ್ಕ್ಟಿಕಾ (13D) Feb 3	1325000	1125000
ಸೌಥ್‌ಅಮೆರಿಕಾ ವಿಥ್ ರಿಯೊ ಕಾರ್ನಿವಲ್ (21D) Feb 20	1290000	985000
ಬೆಸ್ಟ್ ಆಫ್ ಬ್ರೆಝಿಲ್ (8D)	--	415000
ಪೆರು ಬೊಲಿವಿಯಾ ಚಿಲಿ ಅರ್ಜೆಂಟೀನಾ (14D)	--	715000
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಒರ್ಲ್ಯಾಂಡೊ ಆ್ಯಂಡ್ ಬಹಾಮಾಸ್ ಕ್ರೂಝ್ (19D)	740K-765K	615K-640K
USA+ಡೆತ್ ವ್ಯಾಲಿ-ಯೋಸೆಮಿಟಿ (16D/18D)	675K-725K	550K-600K
USA ಕ್ಯಾಲಿಫೋರ್ನಿಯಾ ಕಾರ್ನಿವಲ್+ಡೆತ್ ವ್ಯಾಲಿ ಆ್ಯಂಡ್ ಯೋಸೆಮಿಟಿ (10D)	425K-450K	300K-325K
USA ಈಸ್ಟ್ ಕೋಸ್ಟ್/ಚಿಕಾಗೊ (7D/9D)	275K-330K	175K-230K
USA ನ್ಯೂಯಾರ್ಕ್ ವಾಶಿಂಗ್ಟನ್ ಫಿಲಡೆಲ್ಫಿಯಾ ವಿಥ್ ಲೂರೇ ಆ್ಯಂಡ್ ಶೆನಾಂಡೊವ (6D)	200K-225K	125K-150K
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಒರ್ಲ್ಯಾಂಡೊ ಡಿಸ್ನಿಲ್ಯಾಂಡ್ ಆ್ಯಂಡ್ ನಾಸಾ (15D)	575K-600K	450K-475K
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಚಿಕಾಗೊ (13D)	535K-560K	410K-435K
ಚಿಕಾಗೊ ವಿಥ್ ನ್ಯಾಶನಲ್ ಪಾರ್ಕ್ಸ್ (10D)	--	310K-335K
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಚಿಕಾಗೊ ಆ್ಯಂಡ್ ನ್ಯಾಶನಲ್ ಪಾರ್ಕ್ಸ್ (22D)	800K-825K	675K-700K
USA ವೆಸ್ಟ್ ಕೋಸ್ಟ್ (7D)	--	225K-250K
ಕೆನಡಾ ಅಲಾಸ್ಕಾ (18D)	850K-875K	650K-675K
ಬೆಸ್ಟ್ ಆಫ್ ಅಲಾಸ್ಕಾ (9D)	--	290K-410K
ಬೆಸ್ಟ್ ಆಫ್ ಕೆನಡಾ (11D)	--	290K-315K
ಹವಾಯಿ ಮೆಕ್ಸಿಕೊ (11D)	950000	675000

ಫಾರ್ ಈಸ್ಟ್ ಆಸ್ಟ್ರೇಲಿಯಾ ಆಫ್ರಿಕಾ

ಟೂರ್ ನೇಮ್	Ex-Mumbai	J&L
ಜಪಾನ್ (5D/7D/9D/11D)	175K-410K	120K-355K
ಜಪಾನ್ (13D/15D/17D)	470K-650K	415K-595K
ಜಪಾನ್ ಆಲ್ಪೈನ್ ರೂಟ್ (10D)	375K-400K	320K-345K
ಜಪಾನ್ ಕೊರಿಯಾ (10D)	350K-375K	295K-320K
ಜಪಾನ್ ಚೀನಾ (13D)	400K-425K	345K-370K
ಜಪಾನ್ ತೈವಾನ್ (10D)	375K-395K	320K-340K
ಚೀನಾ ಕೊರಿಯಾ (10D)	300K-325K	245K-270K
ಕೊರಿಯಾ ತೈವಾನ್ (8D)	285K-310K	230K-255K
ಚೀನಾ ಕೊರಿಯಾ ತೈವಾನ್ (14D)	375K-400K	320K-345K
ಜಪಾನ್ ಚೀನಾ ಕೊರಿಯಾ ತೈವಾನ್ (20D)	585K-610K	530K-555K
ಬೆಸ್ಟ್ ಆಫ್ ಚೀನಾ (9D)	175K-225K	120K-170K
ಬೆಸ್ಟ್ ಆಫ್ ಕೊರಿಯಾ (6D)	225K-250K	170K-195K
ಬೆಸ್ಟ್ ಆಫ್ ತೈವಾನ್ (5D)	150K-170K	95K-115K
ಫಿಲಿಪೈನ್ಸ್ ಮನಿಲಾ ಸೀಬೂ (8D)	200K-210K	---
ಆಸ್ಟ್ರೇಲಿಯಾ (7D/9/10/11/13/15)	225K-515K	150K-440K
ನ್ಯೂಜಿಲ್ಯಾಂಡ್ (10D/15D)	290K-495K	200K-400K
ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ (11/17D)	350K-565K	250K-465K
ಸೌಥ್ ಆಫ್ರಿಕಾ ಕೆನ್ಯಾ ವಿಕ್ಟೋರಿಯಾ ಫಾಲ್ಸ್ (15D)	450K-460K	---
ಸೌಥ್ ಆಫ್ರಿಕಾ + ಕ್ರೂಗ ನ್ಯಾಶನಲ್ ಪಾರ್ಕ್ (13D)	340K-365K	290K-315K
ಬೆಸ್ಟ್ ಆಫ್ ಮಾರಿಶಸ್ (6D)	125K-135K	95K-105K
ಮಾರಿಶಸ್ ಸೀಶೆಲ್ಸ್ (8D)	225K-235K	---

ಸೌಥ್ ಈಸ್ಟ್/ಮಿಡ್ಲ್ ಈಸ್ಟ್/ಶ್ರೀಲಂಕಾ

ಟೂರ್ ನೇಮ್	Ex-Mumbai	J&L
ಸಿಂಗಾಪುರ ಥೈಲ್ಯಾಂಡ್ ಮಲೇಷ್ಯಾ ಹಾಂಗ್‌ಕಾಂಗ್ (13D)	245K-255K	--
ಸಿಂಗಾಪುರ ಥಾಯ್ ಮಲೇಷ್ಯಾ (10D)	170K-185K	135K-150K
ಸಿಂಗಾಪುರ ಮಲೇಷ್ಯಾ (7D)	145K-155K	115K-125K
ಸಿಂಗಾಪುರ ಥೈಲ್ಯಾಂಡ್ (8D)	147K-157K	--
ಸಿಂಗಾಪುರ ಬಾಲಿ (8D)	180K-190K	
ಸಿಂಗಾಪುರ ಮಲೇಷ್ಯಾ ವಿಥ್ ಕ್ರೂಝ್ (9D)	185K-196K	160K-170K
ಸಿಂಗಾಪುರ ವಿಥ್ ಬಿಂಟನ್ (5D)	125K-135K	102K-112K
ಬೆಸ್ಟ್ ಆಫ್ ಬಾಲಿ (7D)	125K-135K	90K-100K
ಮಲೇಷ್ಯಾ ಪೆನಾಂಗ್ ಲಂಕಾವಿ (7D)	142K-152K	
ಥೈಲ್ಯಾಂಡ್ (4D/6D/8D/15D)	50K-175K	30K-65K
ಫೂಕೆಟ್ ಕ್ರಾಬೀ (5D)	85K-95K	60K-70K
ಚಿಯಾಂಗ್ ಮಾಯ್ ಚಿಯಾಂಗ್ ರಾಯ್ ಫೂಕೆಟ್ ಕ್ರಾಬೀ (9D)	155K-165K	--
ಹಾಂಗ್‌ಕಾಂಗ್ ಮಕಾವು ಶೆನ್ಜೆನ್ (7D)	170K-180K	129K-145K
ಹಾಂಗ್‌ಕಾಂಗ್ ಮಕಾವು ಸಿಂಗಾಪುರ (8D)	210K-220K	--
ವಿಯೆಟ್ನಾಂ (5D/8D/13D)	100K-225K	
ವಿಯೆಟ್ನಾಂ ಸಾಪಾ ಫೂ ಕ್ವಾಕ್ (7D)	125K-135K	--
ವಿಯೆಟ್ನಾಂ ಬಾಲಿ (12D)	200K-210K	--
ವಿಯೆಟ್ನಾಂ ಕಾಂಬೋಡಿಯಾ (11D)	195K-205K	--
ದುಬೈ ಅಬುಧಾಬಿ (5D/7D)	95K-140K	60K-115K
ಶ್ರೀಲಂಕಾ (5D/7D/9D/11D/13D)	75-170K	145K-170K
ಭೂತಾನ್ (7D/9D/12D/15D)	75-150K	55K-120K
ನೇಪಾಳ (5D/6D/8D/9D/11D/13D)	55-150K	35K-130K

ಯುರೋಪ್ ವೆಸ್ಟರ್ನ್, ಈಸ್ಟರ್ನ್,ನಾರ್ದರ್ನ್, ಮೆಡಿಟರೇನಿಯನ್

ಟೂರ್ ನೇಮ್	Ex-Mumbai	J&L
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ ಜರ್ಮನಿ (6D)	150K-180K	85K-95K
ಯುರೋಪಿಯನ್ ಸ್ಪ್ಲೆಂಡರ್ಸ್ (10D)	275K-285K	205K-215K
ಇಮೇಜಸ್ ಆಫ್ ಯುರೋಪ್ (10D)	275K-285K	205K-215K
ಯುರೋಪಿಯನ್ ಹೈಲೈಟ್ಸ್ (11D)	300K-310K	220K-230K
ಯುರೋಪಿಯನ್ ವಂಡರ್ಸ್ (13D)	335K-345K	265K-275K
ಯುರೋಪಿಯನ್ ಜ್ಯುವೆಲ್ಸ್ ವಿಥ್ ವೆರ್ಸಾಯಿ/ಡಿಸ್ನಿಲ್ಯಾಂಡ್ (15D)	395K-410K	315K-330K
ಯುರೋಪಿಯನ್ ಚಾರ್ಮ್ (15D)	425K-450K	355K-380K
ಯುರೋಪ್ ಮಲ್ಟಿ ಕಂಟ್ರಿ (17D-27D)	455K-675K	375K-595K
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D)	285K-295K	205K-215K
ಸ್ವಿಸ್ ಪ್ಯಾರಿಸ್ ಆಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (11D)	335K-345K	265K-275K
ಸ್ವಿಸ್ ಪ್ಯಾರಿಸ್ (8D)	280K-290K	210K- 220K
ಸ್ವಿಸ್ ಪ್ಯಾರಿಸ್ ಲಂಡನ್ (11D)	375K-385K	295K-315K
ಸ್ವಿಸ್ ಪ್ಯಾರಿಸ್ ಇಟಲಿ (11D)	310K-320K	240K-250K
ಸ್ವಿಸ್ ಆಸ್ಟ್ರಿಯಾ ಇಟಲಿ (11D)	325K-335K	255K-265K
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D)	330K-340K	260K-270K
ಸ್ವಿಸ್ ಆಸ್ಟ್ರಿಯಾ (8D)	275K-285K	205K-215K
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ (10D)	315K-325K	245K-255K
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಐರ್‌ಲ್ಯಾಂಡ್ ವೇಲ್ಸ್ ಲಂಡನ್ (15D)	430K-455K	355K-380K
ಸ್ವಿಟ್ಜರ್‌ಲ್ಯಾಂಡ್ (7D/10D)	275K-360K	205K-290K
ಇಟಲಿ (10D/15D)	260K-490K	190K-420K
ಬೆಸ್ಟ್ ಆಫ್ ಆಸ್ಟ್ರಿಯಾ (8D)	275K-285K	205K- 215K
ಬೆಸ್ಟ್ ಆಫ್ ಫ್ರಾನ್ಸ್ (11D)	300K-310K	230K- 240K

ಟೂರ್ ನೇಮ್	Ex-Mumbai	J&L
ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯಾ (10D)	3350K-360K	250K-275K
ಆಲ್ ಆಫ್ ಸ್ಕ್ಯಾಂಡಿನೇವಿಯಾ (15D)	475K-500K	385K-400K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ (15D)	565K-590K	480K-505K
ಸ್ಕ್ಯಾಂಡಿನೇವಿಯಾ ರಷ್ಯಾ (17D)	525K-550K	440K-465K
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (9D)	400K-425K	305K-330K
ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (10D)	515K-545K	440K-465K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (16D)		
ಕ್ರೊಯೇಶಿಯಾ ಸ್ಲೋವೇನಿಯಾ ಸ್ಲೊವಾಕಿಯಾ ಹಂಗೆರಿ (12D)		
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ (8D)		
ಆಲ್ ಆಫ್ ಈಸ್ಟರ್ನ್ ಯುರೋಪ್ (17D)		
ಸ್ಪೇನ್ ಪೋರ್ಚುಗಲ್ ಮೊರಕ್ಕೊ (16D)		
ಸ್ಪೇನ್ (10D/15D)		
ಗ್ರೀಸ್ ಟರ್ಕಿ/ ಈಜಿಪ್ಟ್ (12D/15D)		
ಈಜಿಪ್ಟ್ ಮೊರಕ್ಕೊ / ಜೋರ್ಡಾನ್ ಮೊರಕ್ಕೊ (8D/11D)		
ಗ್ರೀಸ್ (5D/7D/9D/15D)		
ಉಜ್ಬೆಕಿಸ್ತಾನ್ ಕಝಾಕಿಸ್ತಾನ್ ಕಿರ್ಗಿಜ್‌ಸ್ತಾನ್ (9D)		
ಬೆಸ್ಟ್ ಆಫ್ ಈಜಿಪ್ಟ್ (9D)		
ರಷ್ಯಾ ನಾರ್ದರ್ನ್ ಲೈಟ್ಸ್ (10D)		
ಬಾಲ್ಟಿಕ್ ಯುರೋಪ್ ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D)		
ಜಾರ್ಜಿಯಾ ಆರ್ಮೇನಿಯಾ ಅಜರ್‌ಬೈಜಾನ್ (10D)		



ಮೈ ಹೂಂ ನ!
ವೀಣಾ ವರ್ಲ್ಡ್ ಟೂರ್‌ನೊಂದಿಗೆ ಸಮಸ್ಯಾ ರಹಿತವಾಗಿ ಪ್ರಯಾಣಿಸಿರಿ; ಟೂರ್‌ನಲ್ಲಿ ಮ್ಯಾನೇಜರ್ ನಿಮ್ಮ ಸೇವೆಯಲ್ಲಿ.

Travel Now Pay Later!
EMI options available (3 months to 24 months) subject to EMI partner approval. T&C apply

Group tour price includes return airfare (Ex-Mumbai/Bengaluru), transport, accommodation, all meals: breakfast, lunch, dinner, sightseeing with entrance fees, driver-guide tips, services of a Tour Manager, VISA fee (except for Free Visa Countries & USA) and travel insurance*. J&L tours exclude airfare, visa & insurance. USA tours are for valid USA visa holders. The full payment benefit is valid only for a limited period* and does not apply to promotional tours EUGP, EUGV, EUHJ, EUGD, AMGP, ASPJ, ASZL... or their speciality tours.

Jayanagar: Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 997 2217
Indiranagar: 2005, 100 feet Road, HAL 2nd Stage, Indiranagar, Bengaluru 560038, Call: 887 997 9500

Veena World Sales Partners: Karnataka: Belgaum-College Road 9980428880 • Malleshwaram 9663920469 • Belgaum-Goaves Circle 7338685500 • Bengaluru-Vijayanagar 9036610005 • Bijapur 9980857595 • Dharwad 9036715969 • Hubli 7204411007 • Chikodi 9448627771 • **Tamil Nadu**: Coimbatore 9994666522

Applications invited for Sales Partners/ Agents across Southern India WhatsApp on 887 997 9733

Mysore, Udupi, Mangaluru • Call: 865 575 5281

Book Online 24x7 from anywhere on veenaworld.com
Call: 1800 313 5555 | Monday-Sunday 10 to 7

VEENA WORLD
Travel. Explore. Celebrate Life.

Mumbai Online 887 997 2221 • New Delhi 887 997 2700 • Noida 887 997 4100 • Gurugram 8879 974 300 • Hyderabad 887 997 9700
Kolkata 887 997 2288 • Bengaluru Jayanagar 887 997 2217 • Bengaluru Indiranagar 887 997 9500 • Ahmedabad 887 997 7200 • Indore 887 997 9800

Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ವರಿಷ್ಠರ ಜತೆ ಡಿಕೆಶಿ ಸಮಾಲೋಚನೆ

ಬೆಳಗಾವಿಯ ಔತಣಕೂಟ ರಾಜಕೀಯದ ಮಧ್ಯೆಯೇ ದೆಹಲಿಯಲ್ಲಿ ಮಾತುಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ನಾಯಕತ್ವ ಜಟಾಪಟಿ, ಬೆಳಗಾವಿಯಲ್ಲಿನ ಔತಣಕೂಟದ ರಾಜಕೀಯದ ನಡುವೆಯೇ ಇಲ್ಲಿಗೆ ಬಂದಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ತಮ್ಮ ಕನಸು ಸಾಕಾರಗೊಳಿಸಿಕೊಳ್ಳುವ ಯತ್ನವನ್ನು ಮುಂದುವರಿಸಿದರು.

ಮತಕಳವು ವಿರೋಧಿಸಿ ಎಐಸಿಸಿ ಇಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ತಮ್ಮ ದಂಡಿನೊಂದಿಗೆ ಬಂದಿದ್ದ ಡಿ.ಕೆ. ಶಿವಕುಮಾರ್, ನಾಯಕರನ್ನು ಹಲವು ಸುತ್ತಿನಲ್ಲಿ ಭೇಟಿಯಾದರು.

'ಶಿವಕುಮಾರ್ ಬೇಡಿಕೆಯನ್ನು ಹೈಕಮಾಂಡ್ ಒಪ್ಪಿಲ್ಲ. ಸಿದ್ದರಾಮಯ್ಯ ಅವಧಿ ಪೂರೈಸುತ್ತಾರೆ' ಎಂದು ಯತೀಂದ್ರ ಅವರು ಹೇಳಿಕೆ ನೀಡಿದ ಬಳಿಕ ಕಾಂಗ್ರೆಸ್‌ನಲ್ಲಿ ಬಣರಾಜಕೀಯ ಬಿರುಸುಗೊಂಡಿತ್ತು. ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ, ರಾಜ್ಯದ ಸಮಸ್ಯೆಗಿಂತ ಕಾಂಗ್ರೆಸ್ ತೊಳಲಾಟವೇ ಹೆಚ್ಚು ಸದ್ದು ಮಾಡಿತ್ತು. ಔತಣಕೂಟದ ನೆಪದಲ್ಲಿ ನಡೆದ ಬಲಪ್ರದರ್ಶನದ ಚಟುವಟಿಕೆಗಳು ಕಾಂಗ್ರೆಸ್‌ನ ಆಂತರಿಕ ಯುದ್ಧವನ್ನು ಬೀದಿಗೆ ತಂದಿದ್ದವು.

ಏತನ್ಮಧ್ಯೆ, ದೆಹಲಿಯಲ್ಲಿ ನಡೆದ ಪ್ರತಿಭಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬೆಂಬಲಿಗರ ಜತೆಗೆ ಬಂದಿದ್ದರು. ಪೂರ್ವ ನಿಗದಿಯಂತೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೆಳಗಾವಿಗೆ ವಾಪಸ್‌ ಆದರು.

ಕಾರ್ಯಕ್ರಮದ ವೇಳಾಪಟ್ಟಿಯಂತೆ ಶಿವಕುಮಾರ್ ಅವರು ರಾಜ್ಯಕ್ಕೆ ಮಂಗಳವಾರ ತೆರಳಬೇಕಿತ್ತು. ಶಾಮನೂರು ಶಿವಶಂಕರಪ್ಪ ನಿಧನರಾಗಿದ್ದರಿಂದಾಗಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಜತೆಗೆ ಸೋಮವಾರವೇ ಬೆಂಗಳೂರಿಗೆ ಮರಳಿದರು.

'ಮಾತುಕತೆ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ'


ಶಿವಕುಮಾರ್

'ನನ್ನ ಅವರ ಮಧ್ಯೆ ಮಾತುಕತೆ ಇದ್ದೇ ಇರುತ್ತದೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ' ಎಂದು ಶಿವಕುಮಾರ್ ಹೇಳಿದರು.

ಅಧಿವೇಶನದ ಬಳಿಕ ಮತ್ತೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುತ್ತೀರಾ ಎಂದು ಸುದ್ದಿಗಾರರು ಕೇಳಿದಾಗ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

'ನಿಮಗೆ ಅಭಯ ಸಿಕ್ಕಿದೆಯಾ' ಎಂಬ ಮರುಪ್ರಶ್ನೆಗೆ, 'ನಿಮ್ಮ ಅರ್ಥ ಏನಿದೆಯೋ? ನನಗೆ ಯಾವ ಸಮಸ್ಯೆಯೂ ಇಲ್ಲ. ನೀವು (ಮಾಧ್ಯಮಗಳು) ಸಮಸ್ಯೆ ಸೃಷ್ಟಿಸುತ್ತಿದ್ದೀರಿ' ಎಂದರು.

ವರಿಷ್ಠರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ನಾಯಕರಿಗೆ ನನ್ನನ್ನು ನೋಡಿದ ತಕ್ಷಣ ಅರ್ಥವಾಗುತ್ತದೆ. ಕುಶಲೋಪರಿ ವಿಚಾರಿಸುತ್ತಾರೆ. ಇದು ಸೌಹಾರ್ದ ಭೇಟಿ. ವೈಯಕ್ತಿಕ ಭೇಟಿ ಅಲ್ಲ. ಇದರ ಹೊರತಾಗಿ ಬೇರೆ ವಿಚಾರಗಳನ್ನು ನಿಮ್ಮ ಮುಂದೆ ಬಹಿರಂಗಪಡಿಸಲು ಆಗುವುದಿಲ್ಲ. ಅದರ ಅಗತ್ಯ ಇಲ್ಲ' ಎಂದು ಹೇಳಿದರು.

ಡಿಕೆಶಿ ಪ್ರಯತ್ನ: ಇಂದಿರಾಭವನದಲ್ಲಿ ನಡೆದ ಭೋಜನಕೂಟದ ವೇಳೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಖರ್ಗೆಯವರನ್ನು ಶಿವಕುಮಾರ್ ಭೇಟಿಯಾದರು. ಈ ವೇಳೆ, ರಾಹುಲ್ ಜತೆಗೆ ಒಂದೂವರೆ ನಿಮಿಷ ಮಾತುಕತೆ ನಡೆಯಿತು ಎಂದು ಅವರ ಆಪ್ತರು ಹೇಳಿಕೊಂಡಿದ್ದಾರೆ.

ಅದಾದ ಬಳಿಕ ಪ್ರತ್ಯೇಕವಾಗಿ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕರ್ನಾಟಕದಲ್ಲಿನ ಪಕ್ಷದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲಾ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಆದರೆ, ಈ ಸಮಾಲೋಚನೆಯ ಫಲಿತಾಂಶ ಏನೆಂಬುದು ಬಹಿರಂಗವಾಗಿಲ್ಲ.

ಉತ್ತರಿಸಲು ಕಾಲಾವಕಾಶ ಕೇಳಿರುವೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರ ನೋಟಿಸ್‌ಗೆ ಉತ್ತರ ನೀಡಲು ಕಾಲಾವಕಾಶ ಕೋರಿದ್ದೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ದೆಹಲಿ ಪೊಲೀಸರಿಗೆ ಸೋಮವಾರವೇ ಉತ್ತರ ನೀಡಲು ನಿರ್ಧರಿಸಿದ್ದೆ. ಆದರೆ, ಶಾಮನೂರು ಶಿವಶಂಕರಪ್ಪ ನಿಧನದ ಕಾರಣ ತುರ್ತಾಗಿ ನಿರ್ಗಮಿಸಬೇಕಾದ ಸನ್ನಿವೇಶ ಸೃಷ್ಟಿಯಾಯಿತು. ವಿಧಾನ ಮಂಡಲದ ಅಧಿವೇಶನ ಮುಗಿದ ಬಳಿಕ ಉತ್ತರ ನೀಡಲು ಕಾಲಾವಕಾಶ ಕೇಳಿದ್ದೇನೆ' ಎಂದರು.

'ಪೊಲೀಸರು ನೀಡಿರುವ ನೋಟಿಸ್‌ಗೆ ನನ್ನ ಉತ್ತರದ ಪ್ರತಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತೇನೆ. ಏತನ್ಮಧ್ಯೆ, ಪೊಲೀಸರು ಎಫ್‌ಐಆರ್ ಪ್ರತಿಯನ್ನು ಲಗತ್ತಿಸಿಲ್ಲ. ಇ.ಡಿ.ಗೆ ಈಗಾಗಲೇ ಉತ್ತರ ನೀಡಿದ್ದೇವೆ. ಎಫ್‌ಐಆರ್ ಪ್ರತಿಯಲ್ಲಿ ಏನಿದೆ ಎಂದು ಓದಿಲ್ಲ. ನೋಟಿಸ್ ಮಾತ್ರ ನೀಡಿದ್ದಾರೆ. ಎಫ್‌ಐಆರ್ ಪ್ರತಿ ನೀಡಿ ಎಂದು ಕೇಳುತ್ತೇನೆ' ಎಂದು ತಿಳಿಸಿದರು.

ಮತ ಕಳವು ನೆಪದಲ್ಲಿ ಸುಳ್ಳು ಸಂಕಥನ ಸೃಷ್ಟಿ: ದೇವೇಗೌಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಮತ ಕಳವು ಹೆಸರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಹಾಗೂ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಸುಳ್ಳಿನ ಸಂಕಥನ ಸೃಷ್ಟಿಸುತ್ತಿರುವ ಪ್ರತಿಪಕ್ಷಗಳು ಭವಿಷ್ಯದಲ್ಲಿ ಘೋರ ಪರಿಣಾಮ ಅನುಭವಿಸುತ್ತವೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಎಚ್ಚರಿಸಿದರು.

ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತು ರಾಜ್ಯಸಭೆಯಲ್ಲಿ ಸೋಮವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಪ್ರತಿಪಕ್ಷಗಳು ನಿರಂತರವಾಗಿ ಸುಳ್ಳಿನ ಕಥೆಗಳನ್ನು ಪ್ರಚಾರ ಮಾಡುತ್ತಾ ಹೊರಟಿವೆ. ಮತದಾರರ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟು ಹಾಕುತ್ತಿವೆ. ಅದರಿಂದ ಪ್ರತಿಪಕ್ಷಗಳಿಗೆ ಒಳ್ಳೆಯದು ಆಗುವುದಿಲ್ಲ' ಎಂದರು.

'ನಮ್ಮದು ಬಹಳ ದೊಡ್ಡ ರಾಷ್ಟ್ರ. ಕಾಂಗ್ರೆಸ್ ಪಕ್ಷವು ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರಬಹುದು. ನನ್ನ ಪ್ರತಿಪಕ್ಷ ಸ್ನೇಹಿತರೇ ದಯವಿಟ್ಟು ನೆನಪಿಡಿ; 'ವೋಟ್ ಚೋರಿ' ಎಂಬ ಪದಗಳನ್ನು ಬಳಸುವುದರಿಂದ ನೀವು ಮುಂಬರುವ ದಿನಗಳಲ್ಲಿ ತೊಂದರೆ ಅನುಭವಿಸುತ್ತೀರಿ. ನೀವು ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ' ಎಂದರು.

'ವೋಟ್ ಚೋರಿ' ಎಂಬ ಅಪಪ್ರಚಾರದಿಂದ ನರೇಂದ್ರ ಮೋದಿ ಅವರ ನಾಯಕತ್ವವನ್ನು ದೂಷಿಸುವ ಮೂಲಕ ಮತ್ತು ಮತದಾರರ ಮನಸ್ಸಿನಲ್ಲಿ ಅನುಮಾನವನ್ನು ಸೃಷ್ಟಿಸುವ ಮೂಲಕ ಪ್ರತಿಪಕ್ಷಗಳು ಏನು ಗಳಿಸಲಿವೆ ಎಂದು ಪ್ರಶ್ನಿಸಿದ ಅವರು, 'ನಿಮ್ಮ ಮನಸ್ಸಿಗೆ ಏನಾಗಿದೆ? ಏನಾದರೂ ಸಮಸ್ಯೆ ಇದ್ದರೆ ಸರಿಪಡಿಸಿಕೊಳ್ಳಿ' ಎಂದು ಕಿವಿಮಾತು ಹೇಳಿದರು. ದೇವೇಗೌಡರ ಮಾತುಗಳಿಗೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ನಾನು ಐದು ದಶಕಗಳಿಂದ ಹೆಚ್ಚಿನ ಸಾರ್ವಜನಿಕ ಜೀವನದಲ್ಲಿ ಚುನಾವಣೆಯಲ್ಲಿ ಸೋಲು–ಗೆಲುವನ್ನು ಎದುರಿಸಿದ್ದೇನೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸ್ನೇಹಿತರೇ ನನ್ನನ್ನು ಸೋಲಿಸಿದಾಗ ಮತಗಳ್ಳತನವೆಂದು ದೂಷಿಸಲಿಲ್ಲ' ಎಂದು ಛೇಡಿಸಿದರು.

ಕೇರಳದಲ್ಲಿ 18,000 ಮತದಾರರ ಸೇರ್ಪಡೆಗೆ ಸಂಬಂಧಿಸಿದಂತೆ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಬರೆದ ಪತ್ರವನ್ನು ಅವರು ಉಲ್ಲೇಖಿಸಿದರು. 'ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನೆಹರೂ ಅವಧಿಯಲ್ಲಿಯೂ ಚುನಾವಣಾ ವ್ಯವಸ್ಥೆಯಲ್ಲಿ ಕೆಲವು ಲೋಪಗಳು ಇದ್ದವು' ಎಂದರು.

ಮತದಾರರ ಪಟ್ಟಿಯಲ್ಲಿನ ಲೋಪಗಳನ್ನು ಪ್ರಸ್ತಾಪಿಸಿಯೂ ಕಾಂಗ್ರೆಸ್ ಪಕ್ಷವು ಇತ್ತೀಚೆಗೆ ಬಿಹಾರ ಚುನಾವಣೆಯಲ್ಲಿ ಸೋಲು ಕಂಡಿತು. ಮತದಾರರ ಪಟ್ಟಿ ಕೂಲಂಕಷ ಪರಿಶೀಲನೆಯ ನಂತರವೂ ಆ ರಾಜ್ಯದಲ್ಲಿ ಏನಾಯಿತು ಎಂಬುದನ್ನು ಸ್ವತಃ ಪ್ರತಿಪಕ್ಷ ನಾಯಕರು ಆಲೋಚಿಸಬೇಕು. ಆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆರು ಶಾಸಕರು ಸಿಕ್ಕಿದ್ದಾರೆ ಎಂದು ಅವರು ಕುಟುಕಿದರು.

ಮತದಾರರ ಪಟ್ಟಿಯ ಪರಿಷ್ಕರಣೆ ಬಗ್ಗೆ ಪ್ರಧಾನಿಯವರ ವಿರುದ್ಧ ಪ್ರತಿಪಕ್ಷಗಳು ಆರೋಪಗಳನ್ನು ಮಾಡಲು ಏಕೆ ಬಯಸುತ್ತವೆ ಎಂದು ಖಾರವಾಗಿ ಪ್ರಶ್ನಿಸಿದ ದೇವೇಗೌಡರು ದೇಶದಲ್ಲಿ ಚುನಾವಣಾ ಆಯೋಗವಿದೆ, ಸುಪ್ರೀಂ ಕೋರ್ಟ್ ಇದೆ. ಈ ಎಲ್ಲ ವಿಷಯಗಳನ್ನು ಸರಿಪಡಿಸಲು ಚುನಾವಣಾ ಆಯೋಗವು ಎಲ್ಲ ರಾಜ್ಯ ಘಟಕಗಳಿಗೆ ನಿರ್ದೇಶನ ನೀಡಿದೆ ಎಂದು ಅವರು ಹೇಳಿದರು.

'ಮತಕಳವು: ಇಂಡಿಯಾ ಕೂಟಕ್ಕೆ ಸಂಬಂಧವಿಲ್ಲ'



ಒಮರ್ ಅಬ್ದುಲ್ಲಾ

ಶ್ರೀನಗರ (ಪಿಟಿಐ): ಕಾಂಗ್ರೆಸ್ ಪ್ರಸ್ತಾಪಿಸಿರುವ 'ಮತ ಕಳವು' ವಿಚಾರದಿಂದ ಅಂತರ ಕಾಯ್ದುಕೊಂಡಿರುವ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, 'ಇಂಡಿಯಾ ಕೂಟಕ್ಕೂ ಈ ವಿಚಾರಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಸೋಮವಾರ ಹೇಳಿದ್ದಾರೆ.

ಬಿಜೆಪಿ ಮತ್ತು ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ನಾಯಕರು ದೆಹಲಿಯಲ್ಲಿ ಭಾನುವಾರ 'ಮತಕಳ್ಳ ಅಧಿಕಾರ ಬಿಡು' ರ‍್ಯಾಲಿ ನಡೆಸಿದ್ದರು. ಅದರ ಮರುದಿನ ಒಮರ್ ಅವರಿಂದ ಈ ಪ್ರತಿಕ್ರಿಯೆ ಹೊರಬಿದ್ದಿದೆ.

'ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ತನ್ನದೇ ಕಾರ್ಯಸೂಚಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಕಾಂಗ್ರೆಸ್ ಪಕ್ಷ 'ಮತಕಳವು' ಮತ್ತು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಕಾರ್ಯಸೂಚಿಯಾಗಿಸಿಕೊಂಡಿದೆ. ಅವರಿಗೆ ಬೇರೆಯದನ್ನು ಹೇಳಲು ನಾವು ಯಾರು?' ಎಂದಿದ್ದಾರೆ.


ಕರ್ನಾಟಕ ಪ್ರದೇಶ ಜನತಾದಳ ಜಾತ್ಯಾತೀತ
ಯಶವಂತಪುರ ವಿಧಾನಸಭಾ ಕ್ಷೇತ್ರ
ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಮತ್ತು
ಉಕ್ಕು ಖಾತೆ ಸಚಿವರು, ಮಾಜಿ ಮುಖ್ಯಮಂತ್ರಿಗಳು ಹಾಗೂ
ಜನತಾದಳ(ಜಾತ್ಯಾತೀತ) ರಾಜ್ಯಾಧ್ಯಕ್ಷರಾದ
ಶ್ರೀ ಹೆಚ್.ಡಿ.
ಕುಮಾರ ಸ್ವಾಮಿ
ರವರಿಗೆ
ಜನ್ಮದಿನದ ಶುಭಾಶಯಗಳು
16
ಡಿಸೆಂಬರ್
ಅವಿರತ ದುಡಿಮೆ, ಅವಿಶ್ರಾಂತ ಜನಸೇವೆಯನ್ನೇ
ಬದುಕಿನ ಮೂಲ ಮಂತ್ರವಾಗಿಸಿಕೊಂಡು ಜನಸೇವೆಯೇ
ಜನಾರ್ಧನ ಸೇವೆ ಎಂದು ನಂಬಿ ನುಡಿದಂತೆ ನಡೆಯುತ್ತಿರುವ
ನಮ್ಮೆಲ್ಲರ ನೆಚ್ಚಿನ ಶ್ರೀ ಹೆಚ್.ಡಿ. ಕುಮಾರಣ್ಣ ಅವರು
ಇನ್ನೂ ನೂರ್ಕಾಲ ಬಾಳಲಿ. ಆ ಭಗವಂತ ಅಣ್ಣನಿಗೆ
ಇನ್ನೂ ಹೆಚ್ಚಿನ ಆಯುರಾರೋಗ್ಯ ಕರುಣಿಸಲಿ
ಎಂದು ಶುಭ ಹಾರೈಸುತ್ತೇವೆ.
ಅಭಿವೃದ್ಧಿಯ ಹರಿಕಾರರು,
ಕ್ಷೀರ ಕ್ರಾಂತಿಯ ಹರಿಕಾರರು, ಮಾಜಿ ಸಚಿವರು
ಶ್ರೀ ಹೆಚ್.ಡಿ.
ರೇವಣ್ಣ ರವರಿಗೆ
ಜನ್ಮದಿನದ ಶುಭಾಶಯಗಳು
17
ಡಿಸೆಂಬರ್
ಶುಭಕೋರುವವರು :
ಶ್ರೀ ಟಿ.ಎನ್. ಜವರಾಯಿಗೌಡ್ರುರವರು
ವಿಧಾನಪರಿಷತ್ ಸದಸ್ಯರು ಹಾಗೂ
ಯಶವಂತಪುರ ವಿಧಾನ ಸಭೆ ಕ್ಷೇತ್ರದ
ಜೆಡಿಎಸ್ ಪಕ್ಷದ ಎಲ್ಲಾ ಕಾರ್ಯಕರ್ತರು, ಮುಖಂಡರು



ದುಡುಕಬೇಡಿ ಜೀವವನ್ನು ಕೊಲ್ಲಬೇಡಿ

• ರಮ್ಯಾ ಶ್ರೀಹರಿ

ಸ್ವಾಸ್ಥ್ಯ ಎಂದರೆ ಅದು ದೈಹಿಕ ಆರೋಗ್ಯ ಮಾತ್ರವಲ್ಲ, ಅದು ಮಾನಸಿಕ, ಭಾವನಾತ್ಮಕ ಆರೋಗ್ಯವೂ ಹೌದು, ಸಾಮಾಜಿಕ ಆರೋಗ್ಯವೂ ಹೌದೂ. ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ - ಎಲ್ಲ ಸ್ತರಗಳಲ್ಲೂ ಸಾಮರಸ್ಯವನ್ನು ಸಾಧಿಸುವುದೇ ನಿಜವಾದ ಸ್ವಾಸ್ಥ್ಯದ ರಹಸ್ಯ.

ಸಮಾಜದಿಂದ ವ್ಯಕ್ತಿ, ವ್ಯಕ್ತಿಯಿಂದ ಸಮಾಜ ಎನ್ನುವುದೇ ಸತ್ಯವಾಗಿದ್ದರೂ, ಅನಾರೋಗ್ಯಕ್ಕೆ, ಅದರಲ್ಲೂ ಮಾನಸಿಕ ಅನಾರೋಗ್ಯಕ್ಕೆ ತುತ್ತಾದ ವ್ಯಕ್ತಿಯನ್ನು ಸಮಾಜ ಹೇಗೆ ಕಾಣುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಾಮಾಜಿಕ ಸ್ವಾಸ್ಥ್ಯಕ್ಕೂ ವೈಯಕ್ತಿಕ ಸ್ವಾಸ್ಥ್ಯಕ್ಕೂ ಇರುವ ನಂಟನ್ನು ನಾವು ಮರೆತುಬಿಟ್ಟಿರುವುದು ಕಣ್ಣಿಗೆ ರಾಚುತ್ತದೆ. ಮಾನಸಿಕ ಆರೋಗ್ಯದಲ್ಲಿ ಸಮಸ್ಯೆಗಳಿರುವವರನ್ನು ಸಹಾನುಭೂತಿಯಿಂದ ಕಾಣಬೇಕಾದ ಆತ್ಮೀಯರೇ 'ನಿನ್ನ ತಪ್ಪಿನಿಂದಲೇ, ನೀನು ಮಾಡಿದ / ಮಾಡದ ಯಾವುದೋ ಕೆಲಸದಿಂದಲೇ, ರೂಢಿಸಿಕೊಂಡ ಜೀವನಶೈಲಿ / ಅಭ್ಯಾಸಗಳಿಂದಲೇ ನಿನಗೆ ಈ ಸಮಸ್ಯೆ ಉಂಟಾದದ್ದು' ಎಂತಲೋ ಅಥವಾ 'ಇದೆಲ್ಲಾ ನಿನ್ನ ಹಣೆಬರಹ, ವಿಧಿ, ಪಡೆದುಕೊಂಡು ಬಂದಿದ್ದು, ಯಾವುದೋ ಶಾಪ, ದುರದೃಷ್ಟ' ಎಂಬಂತೆಯೋ ಮಾತನಾಡುತ್ತಾರೆ. ಅಂದರೆ ವ್ಯಕ್ತಿ ಅನುಭವಿಸುತ್ತಿರುವ ಮಾನಸಿಕ ಸಂಕಟಕ್ಕೆ ಆ ವ್ಯಕ್ತಿಯನ್ನೇ ದೂಷಿಸಿ ಮತ್ತಷ್ಟು ಸಂಕಟಕ್ಕೊಳಪಡಿಸುವುದು.

ಮಾನಸಿಕ ಆರೋಗ್ಯ ಸಾಮಾಜಿಕ ಆರೋಗ್ಯಕ್ಕೆ ಹಿಡಿದ ಕೈಗನ್ನಡಿ ಎಂದರೆ ತಪ್ಪಾಗಲಾರದು. ನಿಜ, ನಮ್ಮ ಸಮಾಜದಲ್ಲಿ ಈ ನಡುವೆ ನಿಧಾನವಾಗಿ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡುತ್ತಿದೆಯಾದರೂ ಅದು ಸಮಗ್ರವಾಗಿ ಆಗಬೇಕಾದರೆ ನಾವು ಯಾವ ರೀತಿ ಇನ್ನೊಂದು ಜೀವಿಗೆ ಸ್ಪಂದಿಸುತ್ತಿದ್ದೇವೆ ಎನ್ನುವುದನ್ನು ಆಮೂಲಾಗ್ರವಾಗಿ ಒಮ್ಮೆ ಪರೀಕ್ಷಿಸಿಕೊಳ್ಳಬೇಕು.

ವ್ಯಕ್ತಿ ತನ್ನೆಲ್ಲಾ ಸಮಸ್ಯೆಗಳಿಗೆ, ನೋವುಗಳಿಗೆ ಸಮಾಜದ ಕಡೆಗೇ ಬೆರಳು ಮಾಡಿ ತೋರಿಸಿ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಬಹುದು ಎನ್ನುವುದು ಇಲ್ಲಿನ ತಾತ್ಪರ್ಯವಲ್ಲ. ಖಂಡಿತವಾಗಿಯೂ ವ್ಯಕ್ತಿ ತನ್ನ ಪ್ರಯತ್ನದಿಂದ ತನ್ನ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದು ಸಾಧ್ಯವಿದೆಯಾದರೂ, ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಕೇವಲ ವ್ಯಕ್ತಿಯೇ ಕಾರಣ ಎನ್ನುವುದು ಅರ್ಧಸತ್ಯ ಮಾತ್ರ. ಮಾನಸಿಕ ಆರೋಗ್ಯ ಎನ್ನುವುದು ದೈಹಿಕ, ಕೌಟುಂಬಿಕ, ಪಾರಿಸರಿಕ, ಸಾಂದರ್ಭಿಕ - ಎಲ್ಲ ಅಂಶಗಳ ಒಟ್ಟು ಉತ್ಪನ್ನ.

ಸೋಲು, ಅವಮಾನ, ನಿರಾಸೆ ಎಲ್ಲರ ಜೀವನದಲ್ಲೂ ಇದೆಯಾದರೂ ಅದನ್ನು ಕೆಲವರು ಮಾತ್ರ ಆತ್ಮಹತ್ಯೆಯ ಮಟ್ಟಕ್ಕೆ ತೆಗೆದುಕೊಂಡುಹೋಗುವುದು ಯಾಕೆ? – ಎಂದು ಯೋಚಿಸುವ ಮೊದಲು ವೈಯಕ್ತಿಕವಾಗಿ ಮಾಡಿಕೊಂಡ ತಪ್ಪುಗಳ ಬಗೆಗೆ, ಅನಿರೀಕ್ಷಿತವಾಗಿ ಬಂದೊದಗಿದೆ ಕಷ್ಟಗಳ ಬಗೆಗೆ, ವಿಫಲತೆಯ ಬಗೆಗೆ ಆ ವ್ಯಕ್ತಿಯ ಸುತ್ತಲಿನ ಸಮಾಜ ಯಾವ ಬಗೆಯ ಕಥನವನ್ನು ಕಟ್ಟಿಕೊಂಡಿದೆ, ಆ ವ್ಯಕ್ತಿ ಅದರಿಂದ ಎಷ್ಟು ಪ್ರಭಾವಿತನಾಗಿದ್ದಾನೆ ಎನ್ನುವುದನ್ನು ಯೋಚಿಸಬೇಕು. ಆದರೆ ಅದಕ್ಕೂ ಮೊದಲು ವ್ಯಕ್ತಿಯ ಸಣ್ಣಪುಟ್ಟ ಸಾಧನೆಗಳನ್ನು, ಎಷ್ಟೇ ಸಾಮಾನ್ಯದ್ದಾದರೂ ತೆಗೆದುಕೊಂಡ ದಿಟ್ಟ ಸಾತ್ವಿಕ ನಿರ್ಧಾರಗಳನ್ನು ಕಂಡು ಮೆಚ್ಚುಗೆಯಿಂದ, ಅಭಿಮಾನದಿಂದ ಮಾತನಾಡುವ ಕುಟುಂಬ, ಆತ್ಮೀಯರು ಆತನಿಗಿದ್ದಾರೆಯೇ, ಸಂಕಟಗಳಿಗೆ ಸ್ಪಂದಿಸುವ ಬಂಧುಗಳು, ಸ್ನೇಹಿತರು, ನೆರೆಹೊರೆ, ಸಹೋದ್ಯೋಗಿಗಳು ಇದ್ದಾರೆಯೇ ಎನ್ನುವುದನ್ನು ಗಮನಿಸಬೇಕು.

ಆತ್ಮಹತ್ಯೆಯನ್ನು ತಡೆಗಟ್ಟುವುದರಲ್ಲಿ ವ್ಯಕ್ತಿಯ ಸುತ್ತಲಿನ ಸಮುದಾಯದ ಪ್ರೀತಿ, ಸಹಾನುಭೂತಿ, ಬೆಂಬಲದ ಪಾತ್ರ ಹಿರಿದು. ಆದರೆ ನಮ್ಮ ಸಮಾಜದಲ್ಲಿ ಆತ್ಮಹತ್ಯೆಯ ಕುರಿತು ಮನಸುಬಿಚ್ಚಿ ಮಾತನಾಡಲೂ ಜನ ಹಿಂಜರಿಯುತ್ತಾರೆ. ಆತ್ಮಹತ್ಯೆ ಮಹಾಪಾಪ ಎಂದು ಕೆಲವರು ಜರಿದರೆ, ಮತ್ತೆ ಕೆಲವರು ಪ್ರಾಣ ಕಳೆದುಕೊಂಡವರನ್ನು ಹೇಡಿ ಎಂದು ಚುಚ್ಚುತ್ತಾರೆ; ಮತ್ತೆ ಕೆಲವರಂತೂ ಪ್ರಾಣದ ಮೇಲೆ ಆಸೆಯನ್ನೇ ತೊರೆಯುವಷ್ಟು ದುಃಖವನ್ನು ಒಂದು ಜೀವಿ ಅನುಭವಿಸಿತಲ್ಲಾ ಎನ್ನುವ ಖೇದಕ್ಕಿಂತ ಹೆಚ್ಚಾಗಿ ಆ ವ್ಯಕ್ತಿಯ ವ್ಯಕ್ತಿತ್ವದ ವಿಶ್ಲೇಷಣೆ, ಕುಟುಂಬ ವಿಶ್ಲೇಷಣೆ, ಆ ವ್ಯಕ್ತಿಯ ಸಮಸ್ಯೆಗಳಿಗೆ ಕೊಡಬಹುದಾದ ಪರಿಹಾರಗಳು ಮುಂತಾದವುಗಳ ಚರ್ಚೆಯಲ್ಲಿ ತೊಡಗುತ್ತಾರೆ.

ಇನ್ನು ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಆತ್ಮಹತ್ಯೆಯ ಬಗೆಗೆ ತಮ್ಮ ಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದು ಎಷ್ಟು ಕುಟುಂಬಗಳಲ್ಲಿ ಸಾಧ್ಯ? ಆತ್ಮಹತ್ಯಾ ಪ್ರವೃತ್ತಿಯ ಬಗೆಗೆ ಎಷ್ಟು ಪೋಷಕರು ತಮ್ಮ ಮಕ್ಕಳೊಂದಿಗೆ ಭಯವಿಲ್ಲದೇ ಮಾತನಾಡಬಲ್ಲರು? ಆತ್ಮಹತ್ಯೆಗೆ ಪ್ರಯತ್ನಪಟ್ಟು ವಿಫಲರಾದವರೊಂದಿಗೆ ಮುಜುಗರ ಉಂಟುಮಾಡದ ಶುದ್ಧ ಅಂತಃಕರಣದ ಸಹಾನುಭೂತಿಯ ಸ್ಪಂದನ ಎಷ್ಟು ಜನರಿಗೆ ಸಾಧ್ಯ?

ಈ ಎಲ್ಲ ಚರ್ಚೆಯ ಹಿನ್ನೆಲೆಯಲ್ಲಿ ಆತ್ಮಹತ್ಯೆಯ ಆಲೋಚನೆಗಳನ್ನು ಹಿಮ್ಮೆಟ್ಟಿಸುವ ಒಂದೆರಡು ಮಾತುಗಳು ಇಲ್ಲಿವೆ:

- ಈ ಬದುಕು ಅನೇಕ ಸಾಧ್ಯತೆಗಳನ್ನೂ, ಅಚ್ಚರಿಯ ತಿರುವುಗಳನ್ನೂ ಒಳಗೊಂಡಿದೆ, ಬದುಕಿದ್ದರೆ ಇಂದಲ್ಲಾ ನಾಳೆ ಬದುಕು ಬದಲಾಗುವುದು, ಸತ್ತರೆ ನಮ್ಮೊಟ್ಟಿಗೆ ಬದುಕಿನ ಎಲ್ಲಾ ಸಾಧ್ಯತೆಗಳೂ ಸತ್ತುಹೋಗುತ್ತವೆ. ಬದುಕಿನ ಬದಲಾವಣೆಯ ಗುಣದ ಬಗೆಗೆ ನಂಬಿಕೆಯಿರಲಿ.
- ಬದುಕಿದ್ದಾಗ ಸಿಗದ ಪ್ರೀತಿ, ಸಹಾನುಭೂತಿ, ಮೆಚ್ಚುಗೆ, ಗೆಲುವು ಯಾವುದೂ ಸತ್ತ ನಂತರವೂ ಸಿಗದು. ಸತ್ತ ನಂತರ ನಮ್ಮ ಅಸ್ತಿತ್ವವೇನಿದ್ದರೂ ಇತರರ ನೆನಪಿನಲ್ಲಿ ಅದೂ ಅವರು ಮರೆಯುವವರೆಗೆ ಮಾತ್ರ. ಯಾರ ಬದುಕಿಗೂ ನಾವು ಅನಿವಾರ್ಯವಲ್ಲ, ಯಾರ ಬದುಕೂ ನಾವಿಲ್ಲದೇ ನಿಂತು ಹೋಗುವುದಿಲ್ಲ. ಅದರ ಅರ್ಥ ನಮ್ಮ ಬದುಕಿನಲ್ಲಿ ಅತಿ ಪ್ರಮುಖ ವ್ಯಕ್ತಿ ನಾವೇ.
- ಆತ್ಮಹತ್ಯೆಯನ್ನು ಬೆದರಿಕೆಯ ಅಸ್ತ್ರವಾಗಿ ಎಂದೂ ಉಪಯೋಗಿಸದಿರಿ. 'ಅವರು ಆತ್ಮಹತ್ಯೆಯನ್ನು ಮಾಡಿಕೊಂಡುಬಿಟ್ಟರೆ' ಎಂಬ ಹೆದರಿಕೆಯ ನೆರಳಲ್ಲಿ ಎಲ್ಲಾ ಬಾಂಧವ್ಯಗಳೂ ಬಾಡಿಹೋಗುತ್ತವೆ.
- ಪರೀಕ್ಷೆಯಲ್ಲಿ ಫೇಲಾಗುವುದು, ಆರ್ಥಿಕ ನಷ್ಟಗಳು, ನಿರುದ್ಯೋಗ, ಒಂಟಿತನ, ಅವಮಾನ, ಪಾಪಪ್ರಜ್ಞೆ, ಬದುಕಿನಲ್ಲಿ ನಿರರ್ಥಕತೆಯ ಭಾವ ಎಲ್ಲವೂ ಸಮಸ್ಯೆಗಳು ಮಾತ್ರ; ಅವುಗಳಿಗೆ ಪರಿಹಾರವಿದೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು, ಸಂದರ್ಭಕ್ಕೆ ತಕ್ಕಂತೆ ವಿವೇಕದ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲಗಳನ್ನು ಬೆಳೆಸಿಕೊಂಡರೆ ಸಾಕು, ಸಮಸ್ಯೆಗಳಿಗೆ ಅತಿ ಭಾವುಕಗೊಂಡು ಸತ್ತೇ ಹೋಗುವ ಅವಶ್ಯಕತೆಯಿಲ್ಲ.
- ಬದುಕಿಗೆ ಯಾವ ಆತ್ಯಂತಿಕ ಅರ್ಥ, ಉದ್ದೇಶ ಇದೆಯೋ ಇಲ್ಲವೋ ಯಾರಿಗೂ ಗೊತ್ತಿಲ್ಲ; ಅದೊಂದು ಪಕ್ಕಕ್ಕಿರಲಿ; ಆ ಮಂಥನ ನಿರಂತರವಾಗಿರಲಿ. ಆದರೆ ಪ್ರತಿದಿನವನ್ನೂ ಅರ್ಥಪೂರ್ಣವಾಗಿ ಕಳೆಯುವುದಂತೂ ಖಂಡಿತ ಸಾಧ್ಯವಿದೆ. ಈ ದಿನವನ್ನು ಪ್ರೀತಿ ಮತ್ತು ಸಂತಸ ತುಂಬಿರುವಂತೆ ಹೇಗೆ ಕಳೆಯುವುದು ಎನ್ನುವುದರ ಕಡೆಗಷ್ಟೇ ನಿಮ್ಮ ಲಕ್ಷ್ಯವಿರಲಿ.
- ಬದುಕಿನ ಬಗೆಗೆ ಭರವಸೆ ಕಳೆದುಹೋಗುತ್ತಿದೆ ಎನಿಸುತ್ತಿದ್ದರೆ, ನಾಳೆ ಎನ್ನುವುದು ಉತ್ಸಾಹ ಕುತೂಹಲಗಳನ್ನು ಉಂಟುಮಾಡದಿದ್ದರೆ ತಡಮಾಡದೆ ಆತ್ಮೀಯರೊಂದಿಗೆ ಹಂಚಿಕೊಳ್ಳಿ. ಬದುಕಿನ ಪಯಣದಲ್ಲಿ ನಾನು ಒಂಟಿಯಲ್ಲ ಎನ್ನುವ ಭಾವ ಬದುಕಿಗೆ ಅತ್ಯಗತ್ಯ. ಭೂತಾಕಾರವಾಗಿ ಕಾಡುತ್ತಿರುವ ಸಮಸ್ಯೆ ಆತ್ಮೀಯರೊಟ್ಟಿಗೆ ಹಂಚಿಕೊಂಡ ಕೂಡಲೇ ಕ್ಷುಲ್ಲಕವಾಗಿ ತೋರುವ ಸೋಜಿಗವನ್ನನುಭವಿಸಿ.
- ಮಾನಸಿಕ ಕ್ಷೋಭೆ ನಮ್ಮ ನೈತಿಕ ಧೈರ್ಯವನ್ನೂ ನಿಲುವನ್ನೂ ಟೊಳ್ಳಾಗಿಸುತ್ತದೆ. ನಾವು ನೋಡುವ ನೋಟವನ್ನೇ ಬದಲಾಯಿಸಿಬಿಡುತ್ತದೆ. ಮಾನಸಿಕ ಅನಾರೋಗ್ಯ ವ್ಯಕ್ತಿತ್ವದ ದೋಷವಲ್ಲ, ಅದು ಮನುಷ್ಯ ಸಹಜ; ಅದಕ್ಕೆ ಅವಮಾನ ಪಡಬೇಕಾದ್ದು ಇಲ್ಲ. ಯಾವ ಹಿಂಜರಿಕೆ, ಅಳುಕೂ ಇಲ್ಲದೆ ಧೈರ್ಯವಾಗಿ ನುರಿತ ಮನೋವೈದ್ಯರನ್ನು, ಮನೋಚಿಕಿತ್ಸಕರನ್ನು ಕಂಡು ಅವರ ಸಲಹೆಯಂತೆ ನಡೆದುಕೊಂಡರೆ ಕೆಲವೇ ತಿಂಗಳುಗಳಲ್ಲಿ ಬದುಕಿನ ಸಂತಸ ಮರಳಿ ಬರುವುದು ಖಂಡಿತ.

ನಮ್ಮ ಬಾಳಿನ ಮಿತಿಗಳನ್ನು ಹರ್ಷದಿಂದ ಸ್ವೀಕರಿಸೋಣ. ಬದುಕು ಕೊಟ್ಟ ನಮ್ಮ ಪಾಲಿನ ಸಿಹಿಯನ್ನು ಬೇರೆಯವರೊಂದಿಗೆ ಹೋಲಿಸದೆ ತೃಪ್ತಿಯಿಂದ ಸವಿಯೋಣ. ಅದೇ ನಮ್ಮನ್ನು ಎಲ್ಲ ಬಗೆಯ ಸಾವಿನಿಂದ ಮುಕ್ತಗೊಳಿಸುವ ಸಂಜೀವಿನಿ.

ಆರೋಗ್ಯದಲ್ಲಿ 'ಇನ್‌ವೆಸ್ಟ್' ಮಾಡಿ

• ಡಾ. ಶ್ರೀನಿವಾಸ ಹರಪನಹಳ್ಳಿ

ನಮಗೆಲ್ಲರಿಗೂ ಗೊತ್ತಿರುವಂತೆ ಜೀವನ ಒಂದು ನಿರಂತರ ಪ್ರಕ್ರಿಯೆ. ಜೀವನ ಯಾರಿಗೂ ಕಾಯುವುದಿಲ್ಲ. ಇಲ್ಲಿ ಯಾರೂ ಚಿರಕಾಲ ಇರದಿದ್ದರೂ ಕೆಲವರು ತಮ್ಮ ವಿಚಾರಧಾರೆಗಳಿಂದ ಅಥವಾ ಮಹಾಕಾರ್ಯಗಳಿಂದ ಎಲ್ಲರ ಮನಗಳಲ್ಲಿ ಶಾಶ್ವತವಾಗಿ ನೆಲೆಮಾಡಿದ್ದಾರೆ. ಹುಲುಮಾನವರಾದ ನಮಗೆ ಇವರಷ್ಟು ಸಾಧನೆ ಮಾಡಲಾಗದಿದ್ದರೂ ನಮ್ಮ ಮನಸ್ಸಿನ ನೆಮ್ಮದಿಗೆ, ಸುತ್ತಮುತ್ತಲಿನವರ ಒಳಿತಿಗೆ ಕೊಂಚವಾದರೂ ಪ್ರಯತ್ನಪಡುವ ಅವಕಾಶ ಇದ್ದೇ ಇದೆ. ಇರುವ ಒಂದು ಜೀವನದಲ್ಲೇ ನಮ್ಮ ಬದುಕನ್ನು, ವಿಚಾರಶೀಲತೆಯನ್ನು ಸ್ವಲ್ಪವಾದರೂ ಮೇಲ್ಮಟ್ಟಕ್ಕೇರಿಸುವ ಮತ್ತು ಅದರಿಂದ ಮನಃಶಾಂತಿಯನ್ನು ಪಡೆಯುವ ಅವಕಾಶವನ್ನು ನಾವು ಕೈಚೆಲ್ಲಬಾರದು. ಇದನ್ನೆಲ್ಲ ಸಾಧಿಸಲು ನಮ್ಮ ಈ ದೇಹವೇ ಸಾಧನ ಹಾಗೂ ಅದರ ಸುಸ್ಥಿತಿಯೇ ನಮ್ಮ ಮೊದಲ ಹೆಜ್ಜೆ.

ಆದ್ದರಿಂದ ನಮ್ಮ ಆರೋಗ್ಯದ ಬಗ್ಗೆಯೂ ಕಾಳಜಿಯನ್ನು ವಹಿಸಿ, ಅದಕ್ಕೂ ಒಂದಿಷ್ಟು ಸಮಯ ಮತ್ತು ಶ್ರದ್ಧೆಯನ್ನು ಮೀಸಲಿಡುವುದು ನಾವು ಮಾಡುವ ಒಂದು ಉತ್ತಮ ಹೂಡಿಕೆಯೇ ಹೌದು. ಇಂದಿನ ಯುಗದಲ್ಲಿ ಇದು ತುಂಬಾ ಅವಶ್ಯ ಕೂಡ. ನಾವು ನಮ್ಮ ಯೌವನದ ಬಹುತೇಕ ಸಮಯವನ್ನು ಧನಾರ್ಜನೆಗೇ ವಿನಿಯೋಗಿಸುತ್ತೇವೆ; ಅದೂ ನಮ್ಮ ಆರೋಗ್ಯವನ್ನು ನಿರ್ಲಕ್ಷಿಸಿ! ನಂತರ ವೃದ್ಧಾಪ್ಯದಲ್ಲಿ ಅದೇ ಹಣವನ್ನು ಆರೋಗ್ಯ ಕಾಪಾಡಿಕೊಳ್ಳಲು ಖರ್ಚು ಮಾಡುತ್ತೇವೆ. ನಾವು ಕಷ್ಟಪಟ್ಟು ಗಳಿಸಿದ ಹಣವನ್ನು ನಮಗಾಗಿಯೋ, ಇತರರ ಸಹಾಯಕ್ಕೋ ಅಥವಾ ಸಮಾಜಕ್ಕೆ ದಾನ ಮಾಡುವುದಕ್ಕೂ ಆಗದೇ ಹತಾಶೆಯನ್ನು ಅನುಭವಿಸುತ್ತೇವೆ.

ಈಗಿನ ಜೀವನಶೈಲಿಗೆ ನಾವೆಷ್ಟು ಒಗ್ಗಿ ಹೋಗಿದ್ದೇವೆಂದರೆ ನಮ್ಮ ಪ್ರತಿಯೊಂದು ಅವಶ್ಯಕತೆಗಳನ್ನ ಆ್ಯಪ್ ಮೂಲಕ ಹುಡುಕುತ್ತೇವೆ. ಅದಕ್ಕಾಗಿ ನಮ್ಮ ಸ್ಮಾರ್ಟ್‌ಫೋನುಗಳನ್ನು ಸದಾ ಅಪ್‌ಡೇಟ್ ಮಾಡುತ್ತ ಇರುತ್ತೇವೆ. ಫೋನು ಅದೇ ಇದ್ದರೂ ತಂತ್ರಜ್ಞಾನದ ಹೊಸ ಅವತರಣಿಕೆಗಳನ್ನು ಆಗಾಗ ಅಪ್‌ಡೇಟ್ ಮಾಡುತ್ತಲೇ ಇರಬೇಕು, ಇಲ್ಲದಿದ್ದರೆ ನಮ್ಮ ಫೋನು ಅಪ್ರಸ್ತುತವಾಗಿಬಿಡುತ್ತದೆ. ಇದೇ ಸೂತ್ರವನ್ನು ನಾವು ನಮ್ಮ ದೇಹಕ್ಕೂ ಅಳವಡಿಸಿಕೊಳ್ಳಹುದು. ಫೋನ್ ಹಾಳಾದರೆ ಅದನ್ನೆಸೆದು ಹೊಸ ಫೋನೊಂದನ್ನು ಕೊಳ್ಳಬಹುದು. ಆದರೆ ದೇಹದ ವಿಷಯದಲ್ಲಿ ಹಾಗೆ ಮಾಡಲಾಗುವುದಿಲ್ಲ. ಈ ಜನ್ಮಕ್ಕೆ ಇದೊಂದೇ ದೇಹ ಅಲ್ಲವೇ. ಹಾಗಾಗಿ ನಾವು ಉತ್ತಮ ಆರೋಗ್ಯಶೈಲಿಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳುತ್ತ ಈ ದೇಹವೆಂಬ ಸ್ಮಾರ್ಟ್‌ಫೋನನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. 'A sound mind in a sound body' (ದೃಢವಾದ ದೇಹದಲ್ಲಿ ದೃಢವಾದ ಮನಸ್ಸು) ಎಂಬ ವಿವೇಕವಾಣಿಯಂತೆ ಅರಿಷಡ್ವರ್ಗಗಳೆಂಬ ಬೇಡದಿರುವ ಆ್ಯಪ್‌ಗಳನ್ನು ದೂರವಿಟ್ಟು ಉತ್ತಮ ಯೋಚನೆಗಳು, ಆರೋಗ್ಯಕರ ಹವ್ಯಾಸಗಳು, ಕರುಣೆ–ಸಹಾನುಭೂತಿಗಳೆಂಬ ಆ್ಯಪ್‌ಗಳಿಂದ ನಮ್ಮ ದೇಹವನ್ನು ಅಪ್‌ಡೇಟ್ ಮಾಡಿಕೊಳ್ಳುತ್ತಿರಬೇಕು.

ಈಗಿನ ಇಂಟರ್‌ನೆಟ್ ಜಮಾನದಲ್ಲಿ ನೂರೆಂಟು ಹವ್ಯಾಸಗಳ ಜಾಹೀರಾತುಗಳು, ಸಲಹೆ-ಸೂಚನೆಗಳು ನಮ್ಮ ಕಣ್ಣಿಗೆ ದಿನವೂ ಬೀಳುತ್ತವೆ. ಅದು ಜಿಮ್ ಆಗಿರಬಹುದು, ಅಡುಗೆ ರೆಸಿಪಿ ಆಗಿರಬಹುದು ಅಥವಾ ಸ್ಟಾಕ್ ಮಾರ್ಕೆಟ್ಟಿನಲ್ಲಿ ದುಡ್ಡು ಹೂಡುವುದೇ ಇರಬಹುದು. ಅದರ ಜೊತೆ 'ಈ ಪ್ರಾಪರ್ಟಿಯಲ್ಲಿ ಹೂಡಿಕೆ ಮಾಡಿ', 'ಆ ಫಂಡಿನಲ್ಲಿ ಹೂಡಿಕೆ ಮಾಡಿ' ಎಂಬ ಜಾಹೀರಾತುಗಳನ್ನೂ ನಾವು ಕಾಣಬಹುದು. ಈ ಹೂಡಿಕೆಗಳೆಲ್ಲ ಪ್ರಸ್ತುತ ಕಾಲದಲ್ಲಿ ಅವಶ್ಯವಿದ್ದರೂ ಕೂಡ ನಾವು ನಮ್ಮ ಆರೋಗ್ಯರಕ್ಷಣೆಗೂ ಸೂಕ್ತ ಹೂಡಿಕೆ ಮಾಡದಿದ್ದರೆ ಉಳಿದ ಹೂಡಿಕೆಗಳ ಫಲವನ್ನು ಸಂತೋಷದಿಂದ ಅನುಭವಿಸಲು ಸಾಧ್ಯವಿಲ್ಲ.

ಅಷ್ಟಕ್ಕೂ ಆರೋಗ್ಯರಕ್ಷಣೆ ಎಂದರೇನು? ಅದನ್ನು ದುಡ್ಡು ಕೊಟ್ಟು ಪಡೆದುಕೊಳ್ಳಬಹುದೇ ಅಥವಾ ಅದೊಂದು ಜೀವನಶೈಲಿಯ ಭಾಗವೇ? – ಎಂದು ತಿಳಿದುಕೊಳ್ಳುವುದು ಅವಶ್ಯಕ. ನಮ್ಮ ಜೀವನಶೈಲಿಯೇ ನಮ್ಮ ಆರೋಗ್ಯದ ಕನ್ನಡಿ. ನಮ್ಮ ಹವ್ಯಾಸಗಳೇ ನಮ್ಮ ಆರೋಗ್ಯದ ಮುನ್ನುಡಿಯನ್ನು ಬರೆಯುತ್ತವೆ. ಮೇಲೆ ತಿಳಿಸಿದಂತೆ ಹೇಗೆ ನಮ್ಮ ಹಣಕಾಸಿನ ವ್ಯವಹಾರಗಳನ್ನು ವಿವಿಧೆಡೆ ಹೂಡಿಕೆ ಮಾಡುತ್ತೇವೋ ಅದೇ ರೀತಿ ನಮ್ಮ ಆರೋಗ್ಯರಕ್ಷಣೆಗೆ ಕೂಡ ಕೆಲವು ಉತ್ತಮ ಅಭ್ಯಾಸಗಳಲ್ಲಿ ಹೂಡಿಕೆ ಮಾಡಬೇಕು ಹಾಗೂ ಅವುಗಳನ್ನು ಶಿಸ್ತಿನಿಂದ ಪಾಲಿಸಬೇಕು.

ಮುಖ್ಯವಾಗಿ ಆಹಾರದ ವಿಷಯದಲ್ಲಿ ನಾವು ಜಾಗರೂಕತೆ ಮತ್ತು ಸಂಯಮಗಳನ್ನು ತೋರಬೇಕು. 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಗಾದೆಮಾತಿನಂತೆ ಸಮತೋಲಿತ, ತಾಜಾ ಆಹಾರ ನಮ್ಮ ದೇಹವನ್ನು ಸಧೃಡವಾಗಿರಿಸುತ್ತದೆ. ಇದು ಮಾಂಸಖಂಡಗಳ ಕ್ಷಮತೆಯನ್ನು ಹೆಚ್ಚಿಸುವ ಜೊತೆ ರೋಗನಿರೋಧಕ ಶಕ್ತಿಯನ್ನೂ ಬಲಪಡಿಸುತ್ತದೆ. ಸಂಸ್ಕರಿತ ಆಹಾರ ಮತ್ತು ಸಿಹಿಮಿಶ್ರಿತ ಪೇಯಗಳ ಬದಲು ಪ್ರತಿನಿತ್ಯ ತಾಜಾ ತರಕಾರಿ, ಕಾಳು-ಬೇಳೆಯುಕ್ತ ಆಹಾರದ ಜೊತೆ ಸಾಕಷ್ಟು ಹಣ್ಣು-ಹಂಪಲುಗಳ ನಿಯಮಿತ ಸೇವನೆ ಆರೋಗ್ಯದ ದೃಷ್ಟಿಯಿಂದ ಒಂದು ಅತ್ಯುತ್ತಮ ಹೂಡಿಕೆ. ಪ್ರತಿದಿನ ಪ್ರಾತಃಕಾಲದ ಯೋಗ, ನಡಿಗೆ, ಈಜು ಅಥವಾ ವ್ಯಾಯಾಮದಂತಹ ದೈಹಿಕ ಕಸರತ್ತುಗಳು ದೇಹವನ್ನು ಹುರಿಗೊಳಿಸಿ ಸುಸ್ಥಿತಿಯಲ್ಲಿಡುತ್ತವೆ. ಇಡೀದಿನ ನಮ್ಮನ್ನು ಉಲ್ಲಸಿತರಾಗಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಬೆಳಿಗ್ಗೆಯಾಗದಿದ್ದರೆ ಸಂಜೆಯಾದರೂ ಸ್ವಲ್ಪ ಸಮಯವನ್ನು ನಾವು ಈ ದೈಹಿಕ ಚಟುವಟಿಕೆಗಳಿಗೆ ವಿನಿಯೋಗಿಸಲೇಬೇಕು. ನಮ್ಮ ಮನಸ್ಸಿನ ಪ್ರಸನ್ನತೆಗಾಗಿ ಓದು, ಸಂಗೀತ, ಪ್ರವಾಸ, ಧ್ಯಾನದಂತಹ ಹವ್ಯಾಸಗಳನ್ನ ಬೆಳೆಸಿಕೊಳ್ಳಬೇಕು. ಇವೆಲ್ಲ ಹೆಚ್ಚು ಹಣ ಹೂಡದೇ ಕೇವಲ ಕೆಲ ಸಮಯವನ್ನಷ್ಟೇ ಬೇಡುವ ಹೂಡಿಕೆಗಳು. ಕೆಲಸಕಾರ್ಯಗಳ ಮಧ್ಯೆ ಸಂಬಂಧಗಳು ದೂರವಾಗುತ್ತಿರುವ ಇಂದಿನ ಸಮಾಜದಲ್ಲಿ ಬಂಧು-ಬಾಂಧವರೊಡನೆ, ಸ್ನೇಹಿತರ ಜೊತೆ ಒಡನಾಟ ಮತ್ತು ನಮ್ಮ ಸಹೋದ್ಯೋಗಿಗಳೊಂದಿಗೆ ಈರ್ಷ್ಯೆ ತೊರೆದು ಸಾಮರಸ್ಯದಿಂದಿರುವುದು ನಮ್ಮ ಆರೋಗ್ಯದ ದೃಷ್ಟಿಯಿಂದ ಉತ್ತಮ ಹೂಡಿಕೆಯೆನ್ನಬಹುದು.

ಮತ್ತೊಂದು ವರ್ಷ ಈಗಾಗಲೇ ನೇಪಥ್ಯಕ್ಕೆ ಸರಿಯುತ್ತಿದೆ. ಹೊಸವರುಷದ ಆಗಮನವನ್ನು ಇಂಥ ಹೊಸ ಹೂಡಿಕೆಗಳಿಂದ ಸ್ವಾಗತಿಸೋಣ. ನಮ್ಮ ಸ್ವಾಸ್ಥ್ಯರಕ್ಷಣೆ ನಮ್ಮ ಕೈಯಲ್ಲೇ ಇದೆ. ಹಾಗಾಗಿ ಆರೋಗ್ಯಕರ ಮನಸ್ಸು ಮತ್ತು ಸದೃಢ ಶರೀರಕ್ಕಾಗಿ ಇಂದೇ ಹೂಡಿಕೆ ಮಾಡೋಣ.



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ


ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

13) ಗೃಹ ಬಳಕೆಯ ವಿದ್ಯುತ್ ಮಂಡಲಗಳ ಬಗ್ಗೆ ಬರೆಯಿರಿ

ಉತ್ತರ:– (........ಹಿಂದಿನ ಸಂಚಿಕೆಯಿಂದ)

ವಿದ್ಯುತ್ ಸೋರಿಕೆಯುಂಟಾದಲ್ಲಿ ಅದರ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿಸುತ್ತದೆ ಮತ್ತು ಬಳಕೆದಾರರಿಗೆ ತೀವ್ರ ವಿದ್ಯುತ್ ಆಘಾತವಾಗುವುದಿಲ್ಲ.



ಚಿತ್ರದಲ್ಲಿರುವಂತೆ ಸಾಮಾನ್ಯವಾಗಿ ಬಳಸುವ ಗೃಹ ಬಳಕೆಯ ವಿದ್ಯುತ್ ಮಂಡಲದ ಒಂದು ರೇಖಾಚಿತ್ರವನ್ನು ಕೊಡಲಾಗಿದೆ. ಪ್ರತಿಯೊಂದು ಪ್ರತ್ಯೇಕ ಮಂಡಲದಲ್ಲಿ ವಿವಿಧ ವಿದ್ಯುತ್ ಉಪಕರಣಗಳನ್ನು ಸಜೀವ ಮತ್ತು ತಟಸ್ಥ ತಂತಿಗಳ ನಡುವೆ ಜೋಡಿಸಲಾಗಿರುತ್ತದೆ. ಪ್ರತಿಯೊಂದು ವಿದ್ಯುತ್ ಉಪಕರಣವು ತನ್ನ ಮೂಲಕ ವಿದ್ಯುತ್ ಪ್ರವಾಹವನ್ನು ಪ್ರವಹಿಸಲು ಮತ್ತು ನಿಲ್ಲಿಸಲು 'ON/OFF' ಸ್ವಿಚ್ಚನ್ನು ಹೊಂದಿರುತ್ತದೆ. ಹಾಗಾಗಿ ಪ್ರತಿಯೊಂದು ಉಪಕರಣವು ಸಮಾನ ವಿಭವಾಂತರವನ್ನು ಹೊಂದಿರಲು ಅವುಗಳನ್ನು ಪರಸ್ಪರ ಸಮಾಂತರವಾಗಿ ಜೋಡಿಸಲಾಗಿರುತ್ತದೆ.

ಎಲ್ಲಾ ಗೃಹಬಳಕೆಯ ವಿದ್ಯುತ್ ಮಂಡಲಗಳಿಗೆ ವಿದ್ಯುತ್‌ಫ್ಯೂಸ್ ಒಂದು ಪ್ರಮುಖ ಘಟಕವಾಗಿದೆ.

ವಿದ್ಯುತ್ ಮಂಡಲದಲ್ಲಿರುವ ಫ್ಯೂಸ್, ಮಂಡಲ ಹಾಗೂ ವಿದ್ಯುತ್ ಉಪಕರಣಗಳಿಗೆ ಓವರ್ ಲೋಡ್‌ನಿಂದ ಉಂಟಾಗುವ ಹಾನಿಯಿಂದ ರಕ್ಷಿಸುತ್ತದೆ. ಸಜೀವ ತಂತಿ ಮತ್ತು ತಟಸ್ಥ ತಂತಿಗಳು ಎರಡೂ ನೇರ ಸಂಪರ್ಕಕ್ಕೆ ಬಂದಾಗ ಓವರ್ ಲೋಡ್ ಉಂಟಾಗಬಹುದು. (ತಂತಿಗಳ ಮೇಲಿನ ಅವಾಹಕ ಹೊದಿಕೆ ಹಾನಿಗೊಳಗಾದಾಗ ಅಥವಾ ವಿದ್ಯುತ್ ಉಪಕರಣದಲ್ಲಿ ಯಾವುದಾದರೂ ದೋಷವಿದ್ದರೆ ಇದು ಸಂಭವಿಸುತ್ತದೆ) ಇಂತಹ ಸನ್ನಿವೇಶಗಳಲ್ಲಿ ಮಂಡಲದಲ್ಲಿನ ವಿದ್ಯುತ್‌ಪ್ರವಾಹವು ಥಟ್ಟನೆ ಬಹಳ ಹೆಚ್ಚಾಗಿ ಬಿಡುತ್ತದೆ. ಇದನ್ನು ಹ್ರಸ್ವಮಂಡಲ (short circuit) ಎನ್ನುವರು. ವಿದ್ಯುತ್‌ಫ್ಯೂಸ್‌ನ ಬಳಕೆಯು ಮಂಡಲದಲ್ಲಿ ಅಯಾಚಿತವಾಗಿ ಉಂಟಾಗುವ ಹೆಚ್ಚಿನ ಪ್ರಮಾಣದ ವಿದ್ಯುತ್ ಪ್ರವಾಹವನ್ನು ನಿಲ್ಲಿಸುವ ಮೂಲಕ ವಿದ್ಯುತ್ ಮಂಡಲ ಮತ್ತು ವಿದ್ಯುತ್ ಉಪಕರಣಗಳಿಗೆ ಉಂಟಾಗುವ ಹಾನಿಯನ್ನು ತಡೆಯುತ್ತದೆ. ಫ್ಯೂಸ್‌ನಲ್ಲಿ ಜರುಗುವ ಜೌಲ್‌ನ ತಾಪದಿಂದ ಫ್ಯೂಸ್ ಕರಗಿ ಅದರಿಂದ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತದೆ. ಸರಬರಾಜಾಗುವ ವೋಲ್ಟೇಜ್‌ನ (ವಿಭವಾಂತರ) ಆಕಸ್ಮಿಕ ಹೆಚ್ಚಳದಿಂದ ಓವರ್ ಲೋಡ್ ಸಂಭವಿಸಬಹುದು. ಕೆಲವು ಸಂದರ್ಭಗಳಲ್ಲಿ ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸುವುದರಿಂದಲೂ ಓವರ್ ಲೋಡ್ ಉಂಟಾಗಬಹುದು.

14) ಬಲಗೈ ಹೆಬ್ಬೆರಳ ನಿಯಮದಂತೆ ವಿದ್ಯುತ್ ಹರಿಯುತ್ತಿರುವ ನೇರ ವಾಹಕತಂತಿಯನ್ನು ಹೆಬ್ಬೆರಳು ಮೇಲ್ಮುಖವಾಗಿರುವಂತೆ ಹಿಡಿದಿರುವಿರಿ ಎಂದು ಭಾವಿಸಿ, ಆಗ ಕಾಂತಕ್ಷೇತ್ರದ ಕಾಂತೀಯ ಬಲರೇಖೆಗಳ ದಿಕ್ಕು .... (ಜೂನ್ 2023)

ಎ) ಕೆಳ ಮುಖವಾಗಿರುತ್ತದೆ. ಬಿ) ಮೇಲ್ಮುಖವಾಗಿರುತ್ತದೆ
ಸಿ) ಅಪ್ರದಕ್ಷಿಣಾಕಾರವಾಗಿರುತ್ತದೆ. ಡಿ) ಪ್ರದಕ್ಷಿಣಾಕಾರವಾಗಿರುತ್ತದೆ.

ಉತ್ತರ:– (ಸಿ)ಅಪ್ರದಕ್ಷಿಣಾಕಾರವಾಗಿರುತ್ತದೆ.

15) ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬಳಸುವ ಸಾಧನ__________

ಎ) ಗ್ಯಾಲ್ವನೋಮೀಟರ್ ಬಿ) ವಿದ್ಯುತ್ ಜನಕ
ಸಿ) ಅಮ್ಮೀಟರ್ ಡಿ) ವಿದ್ಯುತ್ ಮೋಟಾರ್

ಉತ್ತರ:– (ಬಿ)ವಿದ್ಯುತ್ ಜನಕ (ಏಪ್ರಿಲ್–2022)

16) ಫ್ಲೆಮಿಂಗನ ಬಲಗೈ ನಿಯಮದಲ್ಲಿ ಮಧ್ಯದ ಬೆರಳು ಸೂಚಿಸುವುದು _______. (ಏಪ್ರಿಲ್–2022)

ಎ) ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕು ಬಿ) ಕಾಂತಕ್ಷೇತ್ರ
ಸಿ) ವಾಹಕದ ಚಲನೆಯ ದಿಕ್ಕು
ಡಿ) ಯಾಂತ್ರಿಕ ಬಲದ ದಿಕ್ಕು

ಉತ್ತರ:– (ಎ) ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕು

17) ಇವುಗಳಲ್ಲಿ ಯಾವುದು ಕಾಂತೀಯ ಬಲರೇಖೆಗಳ ಒಂದು ಲಕ್ಷಣವಲ್ಲ? (ಜೂನ್–2021)

ಎ) ಕಾಂತೀಯ ಬಲರೇಖೆಗಳು ಧ್ರುವಗಳ ಬಳಿ ದಟ್ಟವಾಗಿರುತ್ತದೆ.
ಬಿ) ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ
ಸಿ) ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇಧಿಸುತ್ತದೆ.
ಡಿ) ಕಾಂತೀಯ ಬಲರೇಖೆಗಳು ಉತ್ತರ ಧ್ರುವದಲ್ಲಿ ಉತ್ಸರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ.

ಉತ್ತರ:– ಸಿ) ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇಧಿಸುತ್ತದೆ.

18) ತಾಮ್ರದ ಆಯತಾಕಾರದ ತಂತಿಯ ಸುರುಳಿಯನ್ನು ಕಾಂತಕ್ಷೇತ್ರದಲ್ಲಿ ತಿರುಗಿಸಿದಾಗ ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕು ಪ್ರತಿಬಾರಿ ಬದಲಾಗುವುದು (ಮಾರ್ಚ್–2021)

ಎ) ಎರಡು ಸುತ್ತುಗಳಿಗೊಮ್ಮೆ ಬಿ) ಒಂದು ಸುತ್ತಿಗೊಮ್ಮೆ
ಸಿ) ಅರ್ಧ ಸುತ್ತಿಗೊಮ್ಮೆ ಡಿ) ನಾಲ್ಕನೇ ಒಂದು ಸುತ್ತಿಗೊಮ್ಮೆ


ಉತ್ತರ:– (ಸಿ) ಅರ್ಧ ಸುತ್ತಿಗೊಮ್ಮೆ

19) ಒಂದು ಸೊಲೆನಾಯ್ಡ್‌ನ ಒಳಭಾಗದಲ್ಲಿ ಕಾಂತೀಯ ಬಲರೇಖೆಗಳು ಸಮಾಂತರ ಸರಳ ರೇಖೆಗಳಂತೆ ಇರುತ್ತವೆ, ಅದಕ್ಕೆ ಕಾರಣ ಸೊಲೆನಾಯ್ಡ್‌ನ ಒಳಭಾಗದಲ್ಲಿ ಕಾಂತಕ್ಷೇತ್ರವು________ (ಮಾರ್ಚ್ 2023)

ಎ) ಅತ್ಯಂತ ಹೆಚ್ಚಾಗಿರುತ್ತದೆ ಬಿ) ಏಕರೂಪವಾಗಿರುತ್ತದೆ
ಸಿ) ಸೊನ್ನೆಯಾಗಿರುತ್ತದೆ
ಡಿ) ವಿದ್ಯುತ್ ಪ್ರವಾಹದಿಂದ ಉಂಟಾಗಿರುತ್ತದೆ.

ಉತ್ತರ:– (ಬಿ) ಏಕರೂಪವಾಗಿರುತ್ತದೆ

20) ಚಿತ್ರವನ್ನು ಗಮನಿಸಿ ಮತ್ತು ವಿದ್ಯುತ್ ಪ್ರವಾಹವಿರುವ ತಂತಿ AB ಮೇಲೆ ವರ್ತಿಸುವ ಬಲದ ದಿಕ್ಕನ್ನು ತಿಳಿಸಿ, ಬಲದ ದಿಕ್ಕನ್ನು ತಿಳಿಯಲು ನಿಮಗೆ ನೆರವಾಗುವ ನಿಯಮವನ್ನು ಹೆಸರಿಸಿ (ಜೂನ್ 2023)



ಉತ್ತರ:– ಎಡಗಡೆಗಿರುತ್ತದೆ. ಅಥವಾ ಕಾಂತದ ಕಡೆಗಿರುವ ಅಥವಾ ಕಾಂತದ ಉತ್ತರ ಧ್ರುವದ ಕಡೆಗೆ , ಫ್ಲೆಂಮಿಂಗ್‌ನ ಎಡಗೈ ನಿಯಮ

21) ರೈತರಿಗೆ ಜೈವಿಕ ಅನಿಲ ಸ್ಥಾವರವು ಒಂದು ವರದಾನವಾಗಿದೆ. ಏಕೆ? (ಮಾರ್ಚ್– 2020)

ಉತ್ತರ:– ಉಳಿಕೆಯ ಮಿಶ್ರಣವನ್ನು ಹೊರತೆಗೆದು ಅತ್ಯುತ್ತಮ ಗೊಬ್ಬರವಾಗಿ ಬಳಸಲಾಗುತ್ತದೆ, ಇಂದು ಹೆಚ್ಚಿನ ಪ್ರಮಾಣದ ರಂಜಕ ಮತ್ತು ಸಾರಜನಕವನ್ನು ಹೊಂದಿರುತ್ತದೆ.

ಶಕ್ತಿ ಮತ್ತು ಗೊಬ್ಬರವನ್ನು ನೀಡುವುದರ ಜತೆಗೆ ತ್ಯಾಜ್ಯ ವಿಲೇವಾರಿಗೆ ದಕ್ಷ ಹಾಗೂ ಕ್ಷೇಮಕರ ವಿಧಾನವಾಗಿದೆ.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

INTEGRALS

Basics

53. $\int \frac{Cosx}{4Sin^2x-9}dx = ?$

Soln: (.......Contd)

$$=\frac{1}{2}.\frac{1}{6}\log\left(\frac{t-3}{t+3}\right)+c$$

$$=\frac{1}{12}\log\left(\frac{2Sinx-3}{2Sinx+3}\right)+c$$

54. $\int \frac{1}{x^2(x-1)}dx = ?$

Soln: - Given $\int \frac{1}{x^2(x-1)}dx$

$$\frac{1}{x^2(x-1)} = \frac{A}{x}+\frac{B}{x^2}+\frac{C}{x-1}$$

$$1 = Ax(x-1)+B(x-1)+Cx^2$$

$$x=1 \Rightarrow C=1, \quad x=0 \Rightarrow B=-1$$

$$x=-1 \Rightarrow 2A-2B+C=1$$

$$\text{i.e., } 2A+2+1=1$$

$$\therefore A=-1$$

$$\Rightarrow \int \frac{1}{x^2(x-1)}dx$$

$$=\int\left(\frac{-1}{x}+\frac{-1}{x^2}+\frac{1}{x-1}\right)dx$$

$$=-\log x+\frac{1}{x}+\log(x-1)+c$$

$$=\frac{1}{x}+\log\left(\frac{x-1}{x}\right)+c$$

55. $\int x^2Cos4x\ Cos2x\ dx = ?$

Soln: - Given $\int x^2Cos4xCos2x\ dx$

let I $= \int x^2Cos4xCos2x\ dx$

$$=\frac{1}{2}\int x^2[Cos6x+Cos2x]\,dx$$

$$=\frac{1}{2}\int x^2Cos6x\ dx+\frac{1}{2}\int x^2Cos2x\,dx$$

$$=I_1+I_2;$$

where, $I_1=\frac{1}{2}\int x^2Cos6x\,dx$

$$I_1=\frac{1}{2}\left[\frac{x^2Sin6x}{6}-2x\left(\frac{-Cos6x}{36}\right)+2\left(\frac{-Sin6x}{216}\right)\right]+C$$

$$I_1=\frac{1}{12}\left[x^2Sin6x+\frac{Cos6x}{3}-\frac{Sin6x}{18}\right]+c$$

$$I_2=\frac{1}{2}\int x^2Cos2x\,dx$$

$$=\frac{1}{2}\left[\frac{x^2Sin2x}{4}-2x\left(\frac{Sin2x}{2}\right)+2\left(\frac{-Cos2x}{8}\right)\right]+C$$

56. $\int Cos^4x dx=\int(Cos^2x)^2\,dx = ?$

Soln:-Given $\int Cos^4x dx=\int(Cos^2x)^2\,dx$

$$\int\left[\frac{1}{2}(1+Cos2x)\right]^2.dx$$

$$(\text{but } Cos2x=2Cos^2x-1)$$

$$2Cos^2x=1+Cos2x \Rightarrow Cos^2x=\frac{1+Cos2x}{2}$$

$$=\int\frac{1}{4}(1+Cos^22x+2Cos2x)$$

$$=\frac{1}{4}\int\left(1+\frac{1+Cos4x}{2}+2Cos2x\right)dx$$

$$=\int\frac{1}{8}(2+1+Cos4x+4Cos2x)\,dx$$

$$=\frac{1}{8}\int(3+Cos4x+4Cos2x)\,dx$$

$$=\frac{1}{8}\left(3x+\frac{Sin4x}{4}+4\frac{Sin2x}{2}\right)+c$$

57. $\int Cos^2x.Cos2x\ dx = ?$

Soln: - **Given** $\int Cos^2x.Cos2x\ dx$

$$=\int Cosx.Cos2x.Cosx\ dx$$

$$=\int Cosx\frac{1}{2}.[Cos3x+Cosx]\ dx$$

$$=\int\frac{1}{2}.\left[Cos3x.Cosx+Cos^2x\right]dx$$

$$=\int\frac{1}{2}.\left[\frac{1}{2}[Cos4x+Cos2x]+Cos^2x\right]dx$$

$$=\int\frac{1}{4}.\left[Cos4x+Cos2x+2Cos^2x\right]dx$$

$$=\int\frac{1}{4}.[Cos4x+Cos2x+Cos2x+1]\ dx$$

$$=\int\frac{1}{4}.[Cos4x+2Cos2x+1]\ dx$$

$$=\frac{1}{4}.\left[\frac{Sin4x}{4}+\frac{2Sin2x}{2}+x\right]+c$$

58. $\int(4x^2-2x+1)dx = ?$

$$\text{Ans}:-\int(4x^2+2x+2)dx$$

$$=\int 4x^2\,dx+\int 2xdx+\int 2dx$$

$$\Rightarrow 4\int x^2\,dx+2\int xdx+2\int dx$$

we know that,

$$\int x^n dx=\frac{x^{n+1}}{n+1}+c\ (n\neq 1)$$

$$\Rightarrow\int(4x^2+2x+2)dx=4\frac{x^3}{3}+2\frac{x^2}{2}+2x+c$$

$$\Rightarrow 4\frac{x^3}{3}+x^2+2x+c$$

59. Mention some simple rules of integration.

Ans:- Simple rules of integration are –

(Contd..........)

ನಿಯಮ ಬದಲಿಸಿ ಪ್ರಾಂಶುಪಾಲರ ಆಯ್ಕೆ

ಅಧಿಸೂಚನೆ, ಪರೀಕ್ಷೆಯ ನಂತರ ಖಾಸಗಿ ಕಾಲೇಜು ಅಭ್ಯರ್ಥಿಗಳನ್ನು ಕೈಬಿಟ್ಟ ಸರ್ಕಾರ

440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು | **412** ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳು | **310** ಭರ್ತಿ ಮಾಡುತ್ತಿರುವ ಸ್ಥಾನಗಳು | **954** ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು | **256** ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು

• ಚಂದ್ರಹಾಸ ಹಿರೇಮಳಲಿ

ಬೆಳಗಾವಿ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ 310 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿದ್ದ ರಾಜ್ಯ ಸರ್ಕಾರ ನೇರ ಪರೀಕ್ಷೆ ನಡೆಸಿದ ನಂತರ ನಿಯಮಗಳಲ್ಲಿ ಬದಲಾವಣೆ ಮಾಡಿದ್ದು, 256 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದೆ.

ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಜತೆಗೆ, ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಸೇರಿದಂತೆ ಯಾವುದೇ ಪದವಿ ಕಾಲೇಜಿನಲ್ಲಿ 15 ವರ್ಷಗಳ ಬೋಧನಾನುಭವ ಹೊಂದಿರಬೇಕು. ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಐದು ವರ್ಷಗಳ ನಂತರ ಪ್ರಾಂಶುಪಾಲರ ಸ್ಥಾನ ತ್ಯಜಿಸಿ, ಹಿಂದೆ ತಾವು ಕಾರ್ಯನಿರ್ವಹಿಸುತ್ತಿದ್ದ ಕರ್ತವ್ಯಕ್ಕೆ ಮರಳಬೇಕು ಎಂಬ ನಿಯಮ ರೂಪಿಸಲಾಗಿತ್ತು. ನೇರ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಲಿಖಿತ ಪರೀಕ್ಷೆ ನಡೆಸಿತ್ತು.

15 ವರ್ಷಗಳಿಂದ ಪ್ರಾಂಶುಪಾಲರ ಹುದ್ದೆಗೆ ನೇಮಕಾತಿ ಪ್ರಕ್ರಿಯೆಗಳೇ ನಡೆದಿರಲಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ತಾಂತ್ರಿಕ ಕಾರಣಗಳಿಂದ ನಿಗದಿಯಾಗಿದ್ದ ಪರೀಕ್ಷೆಗಳನ್ನು ಎರಡು ಬಾರಿ ಮುಂದೂಡಲಾಗಿತ್ತು. ಅಂತಿಮವಾಗಿ 2023ರ ಜುಲೈ 30ರಂದು ಪರೀಕ್ಷೆ ನಡೆಸಲಾಗಿತ್ತು.

‘ಎಂಜಿನಿಯರಿಂಗ್ ಸೇರಿದಂತೆ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪೂರ್ಣಕಾಲಿಕ ಬೋಧಕರಾಗಿ ಕೆಲಸ ಮಾಡಿದ ಅನುಭವವಿಲ್ಲ. ಬಹಳಷ್ಟು ಅಧ್ಯಾಪಕರು ಒಂದೇ ಕಾಲೇಜಿಗೆ ಸೀಮಿತವಾಗಿಲ್ಲ. ಒಂದೇ ವೃತ್ತಿಯನ್ನು ನಂಬಿಕೊಂಡಿಲ್ಲ. ಅಂಥವರು ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾದರೆ ಐದು ವರ್ಷಗಳ ನಂತರ ಏನು ಮಾಡಬೇಕು ಎನ್ನುವ ಅತಂತ್ರ ಸ್ಥಿತಿಯನ್ನು ಉನ್ನತ ಶಿಕ್ಷಣ ಇಲಾಖೆ ಸೃಷ್ಟಿಸಿದೆ’ ಎಂದು ಹಲವು ಅಧ್ಯಾಪಕರು, ಶಿಕ್ಷಣ ತಜ್ಞರು ವಿರೋಧ ವ್ಯಕ್ತಪಡಿಸಿದ್ದರು.

‘ಎಂಜಿನಿಯರಿಂಗ್ ಸೇರಿ ಇತರೆ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡಿದವರು ಆಯ್ಕೆಯಾದರೆ ನಿಯಮದಂತೆ ಅವರು ವಾರಕ್ಕೆ ಆರು ಗಂಟೆ ಯಾವ ವಿಷಯ ಬೋಧಿಸಲು ಸಾಧ್ಯ? ಇಲಾಖೆಯ ಒಳಗಿನವರ ಸೇವಾ ಜ್ಯೇಷ್ಠತೆಗೂ ಧಕ್ಕೆಯಾಗುತ್ತದೆ. ವಯೋಮಿತಿ ಇಲ್ಲದಿರುವುದರಿಂದ, ಆಯ್ಕೆಯಾದವರು ಒಂದೇ ತಿಂಗಳಿಗೆ ನಿವೃತ್ತರಾದರೆ ಮತ್ತೆ ಪ್ರಭಾರ ಅನಿವಾರ್ಯವಾಗುತ್ತದೆ. ಹೀಗಾಗಿ ನೇಮಕಾತಿ ಪ್ರಕ್ರಿಯೆಯನ್ನೇ ರದ್ದು ಮಾಡಬೇಕು’ ಎಂದು ಕೋರಿ ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರು ಮುಖ್ಯಮಂತ್ರಿಗೆ ಅಹವಾಲು ಸಲ್ಲಿಸಿದ್ದರು.

ಕಾನೂನು ಸಲಹೆ ಪಡೆದ ನಂತರ ಉನ್ನತ ಶಿಕ್ಷಣ ಇಲಾಖೆ ಖಾಸಗಿ ಕಾಲೇಜುಗಳ ಅಭ್ಯರ್ಥಿಗಳನ್ನು ಕೈಬಿಟ್ಟು, ಪರೀಕ್ಷೆ ಬರೆದಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರನ್ನು ಮಾತ್ರ ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದೆ.

> **ಸರ್ಕಾರ ನೇಮಕಾತಿ ಪ್ರಕ್ರಿಯೆಗೆ ಭಾರಿ ವಿಳಂಬ ಮಾಡಿದ್ದರಿಂದ ಶೇ 50ರಷ್ಟು ಅರ್ಹ ಅಧ್ಯಾಪಕರು ಅವಕಾಶ ವಂಚಿತರಾಗಿದ್ದಾರೆ. ಆಯ್ಕೆಯಾದ ಬಹುತೇಕರ ಸೇವಾವಧಿ ಕಡಿಮೆಯಿದೆ**
> **ಬಿ.ಸಿ.ದಾದಾಪೀರ್**
> ನಿವೃತ್ತ ಪ್ರಾಧ್ಯಾಪಕ

> **ಅಧಿಸೂಚನೆಯ ನಂತರ ನಿಯಮ ಬದಲಿಸಿದ ನಿರ್ಧಾರವನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದ್ದೇವೆ. ಆಯ್ಕೆ ಪಟ್ಟಿ ಪ್ರಕಟಣೆಗೆ ಮುನ್ನ ಸರ್ಕಾರ ಕೇವಿಯಟ್ ಹಾಕಿ, ಅನ್ಯಾಯ ಮಾಡಿದೆ**
> **ಸೋಮನಾಥ್**
> ಖಾಸಗಿ ಕಾಲೇಜು ಉಪನ್ಯಾಸಕ

ಆಯ್ಕೆಯಾದ ಹಲವರು ನಿವೃತ್ತಿ

ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಯ ಆಯ್ಕೆ ಪಟ್ಟಿಯಲ್ಲಿ ಇರುವ ಹಲವರು ಈಗಾಗಲೇ ನಿವೃತ್ತರಾಗಿದ್ದಾರೆ. ಶೇ 25ರಷ್ಟು ಅಭ್ಯರ್ಥಿಗಳ ಸೇವಾ ಅವಧಿ ಒಂದು ವರ್ಷದ ಒಳಗಿದೆ.

ಕಾಯಂ ನೇಮಕ ಪ್ರಕ್ರಿಯೆ ಹಲವು ದಶಕಗಳಿಂದಲೂ ನಿಯಮಿತವಾಗಿ ನಡೆದಿಲ್ಲ. ಸೇವಾ ಹಿರಿತನದ ಆಧಾರದ ಮೇಲೆ ಹಲವು ಪ್ರಾಧ್ಯಾಪಕರಿಗೆ 2008–2009ನೇ ಸಾಲಿನಲ್ಲಿ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲಾಗಿತ್ತು. ಒಂದು ಸಾವಿರ ವಿದ್ಯಾರ್ಥಿಗಳಿಗಿಂತ ಕಡಿಮೆ ಇರುವ ಹಾಗೂ ಒಂದು ಸಾವಿರಕ್ಕಿಂತ ಹೆಚ್ಚಿರುವ ಕಾಲೇಜುಗಳನ್ನು ವಿಂಗಡಿಸಿ ಗ್ರೇಡ್–1 ಹಾಗೂ ಗ್ರೇಡ್–2 ಪ್ರಾಂಶುಪಾಲರು ಎಂದು ಪರಿಗಣಿಸಿ ಬಡ್ತಿಗೆ ಪರಿಗಣಿಸಲಾಗಿತ್ತು. ಅಂದು ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ್ದ ಎಲ್ಲರೂ ನಿವೃತ್ತರಾಗಿದ್ದಾರೆ. ಆಯಾ ಕಾಲೇಜುಗಳಲ್ಲಿರುವ ಹಿರಿಯ ಪ್ರಾಧ್ಯಾಪಕರೇ ಪ್ರಭಾರ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ. ಈಗ ಅವರಲ್ಲಿ ಕೆಲವರಿಗೆ ಕಾಯಂ ಪ್ರಾಂಶುಪಾಲರಾಗುವ ಅವಕಾಶ ಸಿಕ್ಕಿದರೂ ಕಾರ್ಯನಿರ್ವಹಣೆ ಅವಧಿ ಇಲ್ಲವಾಗಿದೆ.

15 ವರ್ಷ ಅನುಭವ ಇಲ್ಲದವರಿಗೂ ಮಣೆ

ಪ್ರಾಂಶುಪಾಲರ ಹುದ್ದೆಗೆ ನೇಮಕವಾಗಲು ಪದವಿ ಕಾಲೇಜುಗಳಲ್ಲಿ 15 ವರ್ಷಗಳ ಸೇವಾನುಭವ ಹೊಂದಿರುವುದನ್ನು ಕಡ್ಡಾಯ ಮಾಡಲಾಗಿತ್ತು. ಆದರೆ, 2009ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಆಯ್ಕೆಯಾದ ಸಹಾಯಕ ಪ್ರಾಧ್ಯಾಪಕರೂ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

‘ಅಧಿಸೂಚನೆ ದಿನಾಂಕ ಪರಿಗಣಿಸಿದರೆ 2009ರಲ್ಲಿ ನೇಮಕವಾದ ಸಹಾಯಕ ಪ್ರಾಧ್ಯಾಪಕರ ಸೇವಾವಧಿ 15 ವರ್ಷ ದಾಟುವುದಿಲ್ಲ. ಆದರೆ, ಬಹುತೇಕರು ಹಿಂದೆ ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡಿದ್ದ ನಕಲಿ ದಾಖಲೆ ಸಲ್ಲಿಸಿದ್ದಾರೆ. ಕೆಲವರು ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಪಡೆದ ನಕಲಿ ಪಿ.ಎಚ್‌ಡಿ, ಯುಜಿಸಿ ಗುರುತಿಸಿದ ಪ್ರಕಾಶನಗಳ ನಕಲಿ ಪ್ರಕಟಣೆಗಳನ್ನು ಸಲ್ಲಿಸಿ, ಸ್ಥಾನ ಪಡೆದಿದ್ದಾರೆ’ ಎನ್ನುತ್ತಾರೆ ಅಭ್ಯರ್ಥಿ ರಾಜಪ್ಪ.



ಬೆಂಗಳೂರು ವಲಯ ಮಟ್ಟದ ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಶಿಶುಗೃಹ ಸೀನಿಯರ್ ಸ್ಕೂಲ್‌ನ ತ್ರಿವಿಕ್ರಂ ಕೇಶವನ್, ವಿಷ್ಣು ಶ್ರೀಉರುಗಣೇಶ್ ಅವರಿಗೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿಮಿಟೆಡ್‌ನ ಪಶ್ಚಿಮ ವಲಯ ಜಾಹೀರಾತು ವಿಭಾಗದ ಮುಖ್ಯಸ್ಥರಾದ ನಿತಿನ್ ಭೋಂಸ್ಲೆ, ಜಾಹೀರಾತು ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕರಾದ ಮಂಜುಳಾ ಮೆನನ್ ಚೆಕ್ ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ

ಮಳವಳ್ಳಿಗೆ ರಾಷ್ಟ್ರಪತಿ ಭೇಟಿ ಇಂದು

ಪ್ರಜಾವಾಣಿ ವಾರ್ತೆ

ಮಂಡ್ಯ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ (ಡಿ.16) ಜಿಲ್ಲೆಗೆ ಭೇಟಿ ನೀಡಲಿದ್ದು, ಮಳವಳ್ಳಿಯಲ್ಲಿ ಆರಂಭವಾಗಲಿರುವ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ.

ಮಧ್ಯಾಹ್ನ 2.45ಕ್ಕೆ ಮಳವಳ್ಳಿ ಹೆಲಿಪ್ಯಾಡ್‌ಗೆ ಬಂದಿಳಿಯುವ ಅವರು, ಮಧ್ಯಾಹ್ನ 3.15ಕ್ಕೆ ವೇದಿಕೆ ಸಮಾರಂಭದಲ್ಲಿ ಭಾಗವಹಿಸುವರು. ಸಂಜೆ 4.35ಕ್ಕೆ ಅವರನ್ನು ಹೆಲಿಪ್ಯಾಡ್‌ನಿಂದ ಬೀಳ್ಕೊಡಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.


ದ್ರೌಪದಿ ಮುರ್ಮು

ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಪಾಲ್ಗೊಳ್ಳಲಿದ್ದಾರೆ.

ಜಯಂತಿ ಮಹೋತ್ಸವ ನಿಮಿತ್ತ ಡಿ.16ರಿಂದ 22ರವರೆಗೆ ಉಪನ್ಯಾಸ, ವಸ್ತುಪ್ರದರ್ಶನ, ಸಂಗೀತ, ನಾಟಕ, ಸೇರಿ ವೈವಿಧ್ಯಮಯ ಕಾರ್ಯಕ್ರಮ, ಡಿ.21ರಂದು ಉತ್ಸವಮೂರ್ತಿಯ ಬೆಳ್ಳಿಪಲ್ಲಕ್ಕಿ ಮೆರವಣಿಗೆ ನಡೆಯಲಿದೆ.

ಸರ್ಕಾರಿ ಗೌರವ, ವೀರಶೈವ ಲಿಂಗಾಯತ ವಿಧಿವಿಧಾನದಂತೆ ಅಂತ್ಯಕ್ರಿಯೆ

ಭೂಮಿ ಒಡಲಿಗೆ ಸೇರಿದ ಶಿವಶಂಕರಪ್ಪ

• ಜಿ.ಬಿ.ನಾಗರಾಜ್

ದಾವಣಗೆರೆ: ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಂತ್ಯಕ್ರಿಯೆ ಇಲ್ಲಿನ ಆನೆಕೊಂಡದ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿ ಸೋಮವಾರ ಸಂಜೆ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಇದರೊಂದಿಗೆ ದಾವಣಗೆರೆಯ ಅನ್ವರ್ಥ ನಾಮದಂತೆ ಇದ್ದು, ರಾಜ್ಯ ರಾಜಕಾರಣದಲ್ಲಿ ಛಾಪು ಮೂಡಿಸಿದ್ದ ಅಧ್ಯಾಯವೊಂದು ಕೊನೆಗೊಂಡಂತಾಯಿತು.

ಪತ್ನಿ ಪಾರ್ವತಮ್ಮ ಅವರ ಸಮಾಧಿಯ ಪಕ್ಕದಲ್ಲೇ ಶಿವಶಂಕರಪ್ಪ ಅವರ ಅಂತ್ಯಕ್ರಿಯೆಯನ್ನು ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ನೆರವೇರಿಸಲಾಯಿತು. ರಾಜ್ಯದ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಅಂತ್ಯೇಷ್ಟಿ ಕೈಂಕರ್ಯಗಳು ಸಂಜೆ 6ಕ್ಕೆ ಪೂರ್ಣಗೊಂಡವು. ಬಂಧುಬಳಗ, ಅಭಿಮಾನಿಗಳು ಹಾಗೂ ಜಿಲ್ಲೆಯ ಅಪಾರ ಸಂಖ್ಯೆಯ ಬೆಂಬಲಿಗರ ಅಶ್ರುತರ್ಪಣದ ನಡುವೆ ಶಿವಶಂಕರಪ್ಪ ಭೂಮಿಯ ಒಡಲು ಸೇರಿದರು.


ದಾವಣಗೆರೆಯ ದುರ್ಗಾಂಬಿಕಾ ದೇವಸ್ಥಾನದ ಮುಂಭಾಗದಲ್ಲಿ ಸೋಮವಾರ ಸಾಗಿದ ಶಾಮನೂರು ಶಿವಶಂಕರಪ್ಪ ಅವರ ಅಂತಿಮ ಯಾತ್ರೆಯಲ್ಲಿ ಸೇರಿದ್ದ ಜನಸ್ತೋಮ
ಚಿತ್ರ/ ಸತೀಶ್ ಬಡಿಗೇರ

ಭಾನುವಾರ ಸಂಜೆ ಬೆಂಗಳೂರಿನಲ್ಲಿ ನಿಧನರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರವನ್ನು ಸೋಮವಾರ ನಸುಕಿನಲ್ಲಿ ದಾವಣಗೆರೆಗೆ ತರಲಾಯಿತು. ಎಂಸಿಸಿ ಬಡಾವಣೆಯ ನಿವಾಸದಲ್ಲಿ ಮಧ್ಯಾಹ್ನ 12.20ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಪಾರ್ಥಿವ ಶರೀರದ ಪೂಜಾ ಕೈಂಕರ್ಯ ಮುಗಿಸಿ ಮಧ್ಯಾಹ್ನ ಅಂತಿಮಯಾತ್ರೆ ಹೊರಟಿತು. ಶಿವಶಂಕರಪ್ಪ ಅವರಿದ್ದ ಕೈವಲ್ಯಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಮೂವರು ಪುತ್ರರು ಹಾಗೂ ಕುಟುಂಬದ ಸದಸ್ಯರು ಹೆಗಲು ಕೊಟ್ಟರು.

ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದ ಇಲ್ಲಿನ ಹೈಸ್ಕೂಲ್ ಮೈದಾನಕ್ಕೆ ಪಾರ್ಥಿವ ಶರೀರ ತರುವ ವೇಳೆಗೆ ಅಸಂಖ್ಯ ಜನರು ಜಮಾಯಿಸಿದ್ದರು. ಸಾಲಿನಲ್ಲಿ ಬಂದು ಅಂತಿಮದರ್ಶನ ಪಡೆದರು. ಬಳಿಕ ಅಲ್ಲಿಂದ ಆರಂಭವಾದ ಅಂತಿಮಯಾತ್ರೆ ವೇಳೆಯಲ್ಲೂ ರಸ್ತೆಯ ಇಕ್ಕೆಲಗಳಲ್ಲಿ ಸಾಲುಗಟ್ಟಿ ನಿಂತಿದ್ದ ಜನರು ಪುಷ್ಪನಮನ ಸಲ್ಲಿಸಿದರು. ಕಣ್ಣಾಲಿಗಳನ್ನು ಒದ್ದೆ ಮಾಡಿಕೊಂಡು ಶಿವಶಂಕರಪ್ಪ ಅವರನ್ನು ಬೀಳ್ಕೊಟ್ಟರು.

ಅಂತಿಮಯಾತ್ರೆ ಕಲ್ಲೇಶ್ವರ ಮಿಲ್ ಮೈದಾನ ತಲುಪಿದಾಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಪಾರ್ಥಿವ ಶರೀರಕ್ಕೆ ಪುಷ್ಪ ನಮನ ಸಲ್ಲಿಸಿದರು. ಪೊಲೀಸ್ ಬ್ಯಾಂಡ್ ರಾಷ್ಟ್ರಗೀತೆ ನುಡಿಸಿದಾಗ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಗೌರವ ಸಲ್ಲಿಸಲಾಯಿತು. ಪಾರ್ಥಿವ ಶರೀರಕ್ಕೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಯಿತು.

ಕೈವಲ್ಯದಿಂದ ಪಾರ್ಥಿವ ಶರೀರವನ್ನು ಕೆಳಗಿಳಿಸಿದ ಬಳಿಕ ಮಠಾಧೀಶರು ಧಾರ್ಮಿಕ ವಿಧಿವಿಧಾನ ಆರಂಭಿಸಿದರು. ಪುಷ್ಪ, ಬಿಲ್ವಪತ್ರೆ ಅರ್ಪಿಸಿ ಅಂತಿಮ ನಮನ ಸಲ್ಲಿಸಿದರು. ವಿಭೂತಿ ಯನ್ನು ಕೈಯಲ್ಲಿ ಹಿಡಿದಿದ್ದ ಕುಟುಂಬದ ಸದಸ್ಯರ ಕಣ್ಣಾಲಿಗಳಲ್ಲಿ ನೀರು ಜಿನುಗುತ್ತಿತ್ತು.

ಪುತ್ರರಾದ ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ವಿಧಿವಿಧಾನ ಪೂರೈಸಿದರು. ಆಗ ಶಿವಶಂಕರಪ್ಪ ಅವರಿಗೆ ಜೈಕಾರಗಳು ಮೊಳಗಿದವು. ತುಮಕೂರಿನ ಸಿದ್ಧಗಂಗಾ ಮಠ ಸೇರಿ ವಿವಿಧ ಧಾರ್ಮಿಕ ಸ್ಥಳಗಳಿಂದ 500ಕ್ಕೂ ಅಧಿಕ ವಿಭೂತಿಗಳನ್ನು ಅಂತ್ಯಕ್ರಿಯೆಗೆ ಬಳಸಲಾಯಿತು.

‘ಕೇಸು ವಿಲೇವಾರಿ: ವಿವರ ಪ್ರಕಟಿಸಲಿ’

ಶನಿವಾರವೂ ಹೈಕೋರ್ಟ್ ಕಲಾಪ: ಇಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಹೈಕೋರ್ಟ್‌ನ 50 ನ್ಯಾಯಮೂರ್ತಿಗಳಲ್ಲಿ ಯಾವ್ಯಾವ ನ್ಯಾಯಮೂರ್ತಿಯವರು ಎಷ್ಟೆಷ್ಟು ಕೇಸುಗಳನ್ನು ವಿಲೇವಾರಿ ಮಾಡುತ್ತಿದ್ದಾರೆ ಎಂಬ ಅಂಕ– ಅಂಶಗಳನ್ನು ಪ್ರತಿ ತಿಂಗಳೂ ಸಾರ್ವಜನಿಕ ಅವಗಾಹನೆಗೆ ಬಿಡುಗಡೆ ಮಾಡುವಂತಾಗಬೇಕು’ ಎಂದು ಹೈಕೋರ್ಟ್‌ನ ಹಿರಿಯ ವಕೀಲರು ಆಗ್ರಹಿಸಿದ್ದಾರೆ.

‘ತಿಂಗಳ ಪ್ರತಿ ಶನಿವಾರಗಳಂದೂ ಹೈಕೋರ್ಟ್‌ನ ಪೂರ್ಣ ಕಲಾಪ ನಡೆಸುವ ಪ್ರಸ್ತಾವವನ್ನು 2026ರ ಜನವರಿಯಿಂದ ಅನುಷ್ಠಾನಗೊಳಿಸಬೇಕು’ ಎಂದು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ನಿರ್ಧರಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಮತ್ತು ಹೆಸರು ಬಹಿರಂಗಗೊಳಿಸಲು ಇಚ್ಛಿಸದ ಕೆಲವು ಹಿರಿಯ ವಕೀಲರು, ‘ಈಗಿರುವ ಎಲ್ಲ ನ್ಯಾಯಮೂರ್ತಿಗಳ ಕಾರ್ಯಕ್ಷಮತೆ ವೃದ್ಧಿಯಾದರೆ ಶನಿವಾರ ಕೆಲಸ ನಿರ್ವಹಿಸುವ ಅಗತ್ಯವೇ ಬರುವುದಿಲ್ಲ’ ಎಂದು ಪ್ರತಿಪಾದಿಸಿದ್ದಾರೆ.

‘ಪ್ರತಿಯೊಬ್ಬ ನ್ಯಾಯಮೂರ್ತಿಯವರು ತಾವು ವಿಲೇವಾರಿ ಮಾಡುವ ಕೇಸುಗಳ ಸಂಖ್ಯೆಯನ್ನು ತಿಂಗಳ ಕೊನೆಯಲ್ಲಿ ಬಿಡುಗಡೆ ಮಾಡಬೇಕು. ನಿಖರ ಅಂಕಿ–ಅಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಲು ಹೈಕೋರ್ಟ್ ರಿಜಿಸ್ಟ್ರಾರ್ ಮುಂದಾಗಬೇಕು’ ಎಂದು ಆಗ್ರಹಿಸಿದ್ದಾರೆ.

ಎಎಬಿ ಸಭೆ: ತಿಂಗಳಲ್ಲಿ ಎರಡನೇ ಶನಿವಾರವನ್ನು ಹೊರತುಪಡಿಸಿ ಉಳಿದ ಶನಿವಾರಗಳಂದೂ ಹೈಕೋರ್ಟ್‌ನ ಪೂರ್ಣ ಕಲಾಪ ನಡೆಸುವ ಮುಖ್ಯ ನ್ಯಾಯಮೂರ್ತಿಯವರ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಬೆಂಗಳೂರು ವಕೀಲರ ಸಂಘ ಮಂಗಳವಾರ (ಡಿ.16) ಸಾಮಾನ್ಯ ಸಭೆ ಕರೆದಿದೆ.

‘ಸಂಘದ ಬೈ–ಲಾದ ನಿಯಮ 17 ಎ ಅಡಿಯಲ್ಲಿ ಮಂಗಳವಾರ ಮಧ್ಯಾಹ್ನ 1.30ಕ್ಕೆ ಹೈಕೋರ್ಟ್‌ನ ವಕೀಲರ ಸಂಘದ ಹಾಲ್‌ನಲ್ಲಿ ಈ ಸಭೆ ನಡೆಯಲಿದೆ. ಸದಸ್ಯರು ಮತ್ತು ಎಲ್ಲ ಪದಾಂಕಿತ ಹಿರಿಯ ವಕೀಲರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಬೇಕು’ ಎಂದು ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ್ಯಾಯಮೂರ್ತಿಗಳ ನೇಮಕ ಸ್ಥಗಿತ

‘ಹೈಕೋರ್ಟ್‌ನಲ್ಲಿ ಕಳೆದ 3–4 ವರ್ಷಗಳಿಂದ ವಕೀಲ ವೃಂದದಿಂದ ಯಾರೊಬ್ಬರನ್ನೂ ನ್ಯಾಯಮೂರ್ತಿಗಳ ಹುದ್ದೆಗೆ ಪರಿಗಣಿಸಿಲ್ಲ. ಖಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಮುಂದಾಗಬೇಕು’ ಎಂದು ವಕೀಲ ವೃಂದ ಒತ್ತಾಯಿಸಿದೆ.

‘ಕರ್ನಾಟಕ ಹೈಕೋರ್ಟ್‌ನ ಮಂಜೂರಾತಿ ಸಂಖ್ಯೆ 62. ಸದ್ಯ 50 ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ತಿಂಗಳ ಕೊನೆಯ ವಾರದಲ್ಲಿ ಹಿರಿಯ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನಿವೃತ್ತಿ ಹೊಂದುತ್ತಿದ್ದಾರೆ. ಇದರಿಂದ ಒಂದೆಡೆ ನ್ಯಾಯಮೂರ್ತಿಗಳ ಸಂಖ್ಯೆ ಕ್ಷೀಣಗೊಂಡರೆ, ಮತ್ತೊಂದೆಡೆ ಕರ್ನಾಟಕ ಹೈಕೋರ್ಟ್‌ನ ಕೊಲಿಜಿಯಂನಲ್ಲಿ ರಾಜ್ಯದ ನ್ಯಾಯಮೂರ್ತಿಗಳ ಉಪಸ್ಥಿತಿಯೇ ಇಲ್ಲದಂತಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದೆ.

ದಟ್ಟ ಮಂಜು: 48 ವಿಮಾನ ಹಾರಾಟ ವ್ಯತ್ಯಯ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಸೋಮವಾರ ಮುಂಜಾನೆ ದಟ್ಟವಾಗಿ ಮಂಜು ಆವರಿಸಿದ್ದರಿಂದ 48 ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ.

ಬೆಳಿಗ್ಗೆ 4.39ರಿಂದ 10.30 ಗಂಟೆವರೆಗೂ ರನ್ ವೇ ಸಂಪೂರ್ಣ ಮಂಜಿನಿಂದ ಆವೃತ್ತವಾಗಿತ್ತು. ಇದರಿಂದಾಗಿ ಎರಡು ಅಂತರರಾಷ್ಟ್ರೀಯ ವಿಮಾನ ಹಾಗೂ 46 ದೇಶೀಯ ವಿಮಾನ ತಲುಪುವುದು ವಿಳಂಬವಾಗಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ಮಾಹಿತಿ ನೀಡಿದ್ದಾರೆ. ಹವಾಮಾನ ಇಲಾಖೆ ಪ್ರಕಾರ ಡಿ.15ರಂದು ಬೆಂಗಳೂರಿನಲ್ಲಿ ಕನಿಷ್ಠ ತಾಪಮಾನ 14.6 ಡಿಗ್ರಿ ಸೆಲ್ಸಿಯಸ್ ಇತ್ತು. ಇದು ಸರಾಸರಿ ತಾಪಮಾನಕ್ಕಿಂತ 2.2 ಡಿಗ್ರಿ ಸೆಲ್ಸಿಯಸ್ ನಷ್ಟು ಕಡಿಮೆ ಎಂದು ಹೇಳಿದೆ.

ದೇವನಹಳ್ಳಿ ಸುತ್ತಮುತ್ತ ಹೆದ್ದಾರಿಗಳಲ್ಲಿ ಮುಂಜಾನೆ ಬಹಳ ಹೊತ್ತು ಮಂಜು ಕವಿದಿದ್ದ ಕಾರಣ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ದೆಹಲಿ: 228 ವಿಮಾನಗಳ ಹಾರಾಟ ರದ್ದು

ನವದೆಹಲಿ (ಪಿಟಿಐ): ದೆಹಲಿ ವಿಮಾನ ನಿಲ್ದಾಣದಲ್ಲಿ ಸೋಮವಾರ ದಟ್ಟ ಮಂಜು ಕವಿದಿದ್ದರಿಂದ ವಿಮಾನಗಳ ಹಾರಾಟಕ್ಕೆ ಅಡ್ಡಿ ಉಂಟಾಯಿತು.

ವಿವಿಧ ವಿಮಾನಯಾನ ಸಂಸ್ಥೆಗಳು 228 ವಿಮಾನಗಳನ್ನು ರದ್ದುಗೊಳಿಸಿದ್ದು, ಐದು ವಿಮಾನಗಳ ಮಾರ್ಗಗಳನ್ನು ಬದಲಾಯಿಸಿದ್ದರಿಂದ ಸಮೀಪದ ವಿಮಾನ ನಿಲ್ದಾಣಗಳಿಗೆ ಸಂಚರಿಸಿದವು.

‘40 ವಿಮಾನಗಳನ್ನು ರದ್ದುಗೊಳಿಸಿರುವುದಾಗಿ ಏರ್ ಇಂಡಿಯಾ ಸಂಸ್ಥೆಯು ‘ಎಕ್ಸ್’ ಪೋಸ್ಟ್‌ನಲ್ಲಿ ಬೆಳಿಗ್ಗೆ ಘೋಷಿಸಿತ್ತು. ಇಂಡಿಗೊ ಸೇರಿದಂತೆ ಉಳಿದ ವಿಮಾನಯಾನ ಸಂಸ್ಥೆಗಳು ತಮ್ಮ ರದ್ದಾದ ಅಥವಾ ವಿಳಂಬವಾದ ವಿಮಾನಗಳ ವಿವರವನ್ನು ಹಂಚಿಕೊಂಡಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕರ್ನಾಟಕ ಲೇಖಕಿಯರ ಸಂಘದ ಚುನಾವಣೆಯಲ್ಲಿ ಅಕ್ರಮ: ಆರೋಪ

ಬೆಂಗಳೂರು: ‘ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು, ಮರು ಚುನಾವಣೆ ನಡೆಸಬೇಕು’ ಎಂದು ಪರಾಜಿತ ಅಭ್ಯರ್ಥಿ ನಿರ್ಮಲಾ ಸಿ.ಎಲಿಗಾರ್ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮತ ಎಣಿಕೆ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ತಾರತಮ್ಯ ನೀತಿ ಅನುಸರಿಸಿದ್ದಾರೆ. ಮತದಾನದ ನಂತರ ಸಂಜೆ 5.45ರವರೆಗೆ ಪೊಲೀಸರ ರಕ್ಷಣೆಯಲ್ಲಿ ಚುನಾವಣಾ ಅಧಿಕಾರಿಯೊಬ್ಬರೇ ಕೊಠಡಿಗೆ ಬೀಗ ಹಾಕಿಕೊಂಡು ಯಾರನ್ನೂ ಕರೆಯದೇ ಮತದಾನದ ಲಕೋಟೆಗಳನ್ನು ತೆರೆದಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಬೆಂಗಳೂರಿನ ಮತದಾರರಿಗೆ ಗುರುತಿನ ಚೀಟಿ ಕಡ್ಡಾಯಗೊಳಿಸಲಾಗಿದೆ. ಅಂಚೆ ಮೂಲಕ ಮತದಾನ ಮಾಡುವ ಸದಸ್ಯರಿಗೆ ಗುರುತಿನ ಚೀಟಿ ಕುರಿತು ಉಲ್ಲೇಖಿಸಿಲ್ಲ. ಸಿಸಿಟಿವಿ ಕ್ಯಾಮೆರಾ ಅಳವಡಿಸದೆ ಮತದಾನ ಪ್ರಕ್ರಿಯೆ ನಡೆಸಲಾಗಿದೆ’ ಎಂದರು.


ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಆರ್. ಸುನಂದಮ್ಮ ಅವರಿಗೆ ಹಾಲಿ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರು ಸೋಮವಾರ ಅಧಿಕಾರ ಹಸ್ತಾಂತರಿಸಿದರು. ಲೇಖಕಿಯರಾದ ಎಂ.ಎಸ್.ಆಶಾದೇವಿ, ಡಾ.ವಸುಂಧರಾ ಭೂಪತಿ, ಹೇಮಾ ಪಟ್ಟಣಶೆಟ್ಟಿ, ಸಬೀಹಾ ಭೂಮಿಗೌಡ ಉಪಸ್ಥಿತರಿದ್ದರು

ಕರ್ತವ್ಯಲೋಪ: ಸವಣೂರು ಸಿಪಿಐ, ಹೆಡ್ ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಹಾವೇರಿ: ಸರ್ಕಾರಿ ಉರ್ದು ಶಾಲೆಯ ಶಿಕ್ಷಕ ಜಗದೀಶ್ ವಗ್ಗಣ್ಣನವರ ಅವರಿಗೆ ಥಳಿಸಿ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿದ್ದ ಪ್ರಕರಣದ ಸಂಬಂಧ ಸವಣೂರು ಸಿಪಿಐ ಎಸ್.ದೇವಾನಂದ, ಹೆಡ್ ಕಾನ್‌ಸ್ಟೆಬಲ್ ಮಲ್ಲಿಕಾರ್ಜುನ ಓದನವರ ಎಂಬುವರನ್ನು ಅಮಾನತು ಮಾಡಲಾಗಿದೆ.

‘ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂಬ ಆರೋಪಿಸಿ ಸವಣೂರಿನಲ್ಲಿ ಡಿಸೆಂಬರ್ 10ರಂದು ಪೋಷಕರು, ಸ್ಥಳೀಯರು ಶಿಕ್ಷಕನಿಗೆ ಥಳಿಸಿ, ಚಪ್ಪಲಿಯಿಂದ ಹೊಡೆದು ಮೆರವಣಿಗೆ ಮಾಡಿದ್ದರು.

ಈ ಸಂಬಂಧ ಪ್ರಾಥಮಿಕ ಮಾಹಿತಿ ಕಲೆಹಾಕಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಅವರು ದಾವಣಗೆರೆ ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರಿಗೆ ವರದಿ ಸಲ್ಲಿಸಿದ್ದರು.

‘ಚಪ್ಪಲಿಹಾರ ಹಾಕಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿದ್ದ ಕೃತ್ಯವನ್ನು ಗೂಡಾಗಿರಿ ಎಂದು ದೂರಿದ್ದ ಹಲವು ಸಂಘಟನೆಗಳವರು ಸವಣೂರು ಬಂದ್ ಮಾಡಿ ಪ್ರತಿಭಟಿಸಿದ್ದರು.

‘ಶಿಕ್ಷಕ ತಪ್ಪು ಮಾಡಿದ್ದರೆ, ಶಿಕ್ಷೆ ನೀಡಲು ಪೊಲೀಸ್ ಇಲಾಖೆ ಮತ್ತು ಕೋರ್ಟ್ ಇದೆ. ಸ್ಥಳೀಯರೇ ಕಾನೂನು ಕೈಗೆತ್ತಿಕೊಂಡರೆ ಅಪರಾಧವಾಗುತ್ತದೆ’ ಎಂದು ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದರು.

ಶಿಕ್ಷಕನ ಮೆರವಣಿಗೆ ಸಂದರ್ಭದಲ್ಲಿ ಸ್ಥಳದಲ್ಲಿದ್ದರೂ ಕೃತ್ಯ ತಡೆಯದಿದ್ದಕ್ಕೆ ಹೆಡ್ ಕಾನ್‌ಸ್ಟೆಬಲ್ ಮತ್ತು ಕೃತ್ಯದ ಬಗ್ಗೆ ಮಾಹಿತಿ ತಿಳಿದಕೂಡಲೇ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸದೇ ಕರ್ತವ್ಯ ಲೋಪ ಎಸಗಿದ ಆರೋಪದಡಿ ಸಿಪಿಐ ಅವರನ್ನು ಅಮಾನತು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹9.07 ಕೋಟಿ ಮೊತ್ತದ ‘ಗ್ಲೋಬಲ್ ಟೀಚರ್ ಪ್ರಶಸ್ತಿ’ ಸ್ಪರ್ಧೆಯಲ್ಲಿ ಭಾರತದ ಮೂವರು

ಲಂಡನ್ (ಪಿಟಿಐ): ಭಾರತದ ಮೂವರು ಶಿಕ್ಷಣ ತಜ್ಞರು ಒಂದು ಮಿಲಿಯನ್ ಡಾಲರ್ (ಸುಮಾರು ₹9.07 ಕೋಟಿ) ಮೊತ್ತದ ‘ಗ್ಲೋಬಲ್ ಟೀಚರ್ ಪ್ರಶಸ್ತಿ– 2026’ರ ಟಾಪ್ 50ರ ಶಾರ್ಟ್‌ಲಿಸ್ಟ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಮೀರತ್‌ನ ಶಾಲಾ ಶಿಕ್ಷಕ ಸುಧಾಂಶು ಶೇಖರ್ ಪಾಂಡಾ, ಜಮ್ಮು ಮತ್ತು ಕಾಶ್ಮೀರದ ಶಿಕ್ಷಕ ಮೆಹ್ರಾಜ್ ಖುರ್ಷಿದ್ ಮಲಿಕ್ ಮತ್ತು ಗ್ರಾಮೀಣ ಜನರಿಗೆ ಶಿಕ್ಷಣ ದೊರೆಯಲು ಶ್ರಮಿಸುತ್ತಿರುವ ರೂಬಲ್ ನಾಗಿ ಸ್ಪರ್ಧೆಯಲ್ಲಿದ್ದಾರೆ.

ಅಪಘಾತ ತಡೆಗೆ ಮಾರ್ಗಸೂಚಿ ‘ಸುಪ್ರೀಂ’ ಚಿಂತನೆ

ಒಂದನೇ ಪುಟದಿಂದ...

ಅಕ್ರಮ ಢಾಬಾಗಳ ವಿರುದ್ಧ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳು, ಇಂತಹ ಕ್ರಮ ತೆಗೆದುಕೊಳ್ಳುವ ಅಧಿಕಾರವು ಯಾವ ಪ್ರಾಧಿಕಾರದ್ದು ಮತ್ತು ಯಾವೆಲ್ಲಾ ಸಂಸ್ಥೆಗಳು ನಿಬಂಧನೆಗಳನ್ನು ಪಾಲಿಸುತ್ತಿಲ್ಲ ಎಂಬ ಬಗ್ಗೆ ಮಾಹಿತಿ ಒದಗಿಸುವಂತೆಯೂ ತಿಳಿಸಿದೆ.

‘ಹೆದ್ದಾರಿ ಬದಿಗಳಲ್ಲಿರುವ ಅನಧಿಕೃತ ಢಾಬಾಗಳು ಮತ್ತು ಸಣ್ಣ ಹೋಟೆಲ್‌ಗಳನ್ನು ತೆರವುಗೊಳಿಸುವ ಅಧಿಕಾರ ನಮಗೆ ಇದೆ. ಆದರೆ ಜಿಲ್ಲಾಡಳಿತದ ಕೈಕೆಳಗಿರುವ ಸ್ಥಳೀಯ ಸಂಸ್ಥೆಗಳು ಮತ್ತು ಪೊಲೀಸರಿಗೆ ಆ ವಿಷಯದಲ್ಲಿ ನಮಗಿಂತಲೂ ಹೆಚ್ಚಿನ ಅಧಿಕಾರ ಇದೆ. ಆದ್ದರಿಂದ, ಈ ವಿಚಾರದಲ್ಲಿ ನಾವು ಪರಿಹಾರವೊಂದನ್ನು ಕಂಡುಕೊಳ್ಳಬೇಕಿದೆ’ ಎಂದು ಮೆಹ್ತಾ ಪೀಠಕ್ಕೆ ತಿಳಿಸಿದರು.

ಭಾರತ್‌ಮಾಲಾ ಹೆದ್ದಾರಿಯಲ್ಲಿ ರಾಜಸ್ಥಾನದ ಫಲೋದಿ ಎಂಬಲ್ಲಿ ನಿಂತಿದ್ದ ಟ್ರಕ್‌ವೊಂದಕ್ಕೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದು 10 ಮಹಿಳೆಯರು ಮತ್ತು ನಾಲ್ವರು ಮಕ್ಕಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದರು.

ಈ ಅಪಘಾತಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನ.10ರಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯಕ್ಕೆ ನೋಟಿಸ್ ಜಾರಿಗೊಳಿಸಿತ್ತು. ಫಲೋದಿ ಮೂಲಕ ಹಾದು ಹೋಗುವ ಹೆದ್ದಾರಿ ಬದಿಯಲ್ಲಿರುವ ಢಾಬಾಗಳ ಸಂಖ್ಯೆಯ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಸಚಿವಾಲಯವನ್ನು ಕೇಳಿತ್ತು.

‘ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ’

‘ಈ ವಿಷಯವು ಕೇವಲ ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ದೇಶಕ್ಕೆ ಸಂಬಂಧಿಸಿದ್ದಾಗಿದೆ. ಆದ್ದರಿಂದ ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಗಳನ್ನು ರೂಪಿಸಲು ನ್ಯಾಯಾಲಯ ಚಿಂತಿಸುತ್ತಿದೆ’ ಎಂದು ನ್ಯಾಯಮೂರ್ತಿ ಜೆ.ಕೆ.ಮಾಹೇಶ್ವರಿ ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಮಿಕಸ್ ಕ್ಯೂರಿ ಆಗಿ ನೇಮಕಗೊಂಡಿರುವ ಹಿರಿಯ ವಕೀಲ ಎ.ಎನ್.ಎಸ್.ನಾಡಕರ್ಣಿ, ‘ಹೆದ್ದಾರಿಗಳ ಬದಿಗಳಲ್ಲಿ ವ್ಯಾಪಕವಾಗಿ ಒತ್ತುವರಿ ನಡೆದಿರುವುದನ್ನು ತೋರಿಸಲು ಗೂಗಲ್ ಚಿತ್ರಗಳನ್ನು ಸಲ್ಲಿಸಿದ್ದೇನೆ’ ಎಂದು ಹೇಳಿದರು.

ಸಿ.ವೀರಣ್ಣ ಅವರ ‘ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–3’ ಪುಸ್ತಕ ಜನಾರ್ಪಣೆ

‘ಲಿಂಗಾಯತ ಧರ್ಮ ಈಗ ವೀರಶೈವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವಾದಿ ಶರಣರು ರೂಪಿಸಿದ ಲಿಂಗಾಯತ ಧರ್ಮದ ಪರಿಕಲ್ಪನೆ ಈಗ ವೀರಶೈವವಾಗಿ ರೂಪುಗೊಂಡಿದೆ’ ಎಂದು ವಿದ್ವಾಂಸ ವೀರಣ್ಣ ರಾಜೂರ ಹೇಳಿದರು.

ನವಕರ್ನಾಟಕ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿ. ವೀರಣ್ಣ ಅವರ ‘ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ–3’ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

ಬಸವಾದಿ ಶರಣರನ್ನು ಒಳಗೊಂಡಂತೆ ಚಾರಿತ್ರಿಕ ವ್ಯಕ್ತಿಗಳನ್ನು ಪುರಾಣ ಪುರುಷರನ್ನಾಗಿಸಲಾಗಿದೆ. ಸಾಮಾಜಿಕ, ಸಾಹಿತ್ಯಿಕ ಅಂಶಗಳನ್ನು ಒಳಗೊಂಡಿರುವ ವಚನಗಳು ತಾತ್ವಿಕ ಬಂಧನಕ್ಕೆ ಒಳಪಟ್ಟಿವೆ.



ಕಾರ್ಯಕ್ರಮದಲ್ಲಿ ಸಿ.ನಾಗಭೂಷಣ, ನವಕರ್ನಾಟಕದ ವ್ಯವಸ್ಥಾಪಕ ನಿರ್ದೇಶಕ ಸಿದ್ದನಗೌಡ ಪಾಟೀಲ, ವೀರಣ್ಣ ರಾಜೂರ, ಸಿ.ವೀರಣ್ಣ ಮತ್ತು ನವಕರ್ನಾಟಕದ ಕಾರ್ಯನಿರ್ವಾಹಕ ನಿರ್ದೇಶಕ ಪ್ರೇಮಚಂದ್ರ ಉಪಸ್ಥಿತರಿದ್ದರು

ವೀರಣ್ಣ ಅವರು ವಚನ ಸಾಹಿತ್ಯದಲ್ಲಿ ಆದ ಬದಲಾವಣೆಗಳನ್ನು ಬಹಳ ಸೂಕ್ಷ್ಮವಾಗಿ ಗುರುತಿಸಿದ್ದಾರೆ ಎಂದು ತಿಳಿಸಿದರು.

ಸಂಶೋಧಕ ಸಿ.ನಾಗಭೂಷಣ ಮಾತನಾಡಿ, ‘ಸಿ.ವೀರಣ್ಣ ಅವರು ಸಮಾಜ ಮತ್ತು ಸಾಹಿತ್ಯವನ್ನು ಸಮಾಜೋ ವೈಜ್ಞಾನಿಕ ಮನೋಭೂಮಿಕೆಯಲ್ಲಿ ವಿಶ್ಲೇಷಿಸುವ ಉದ್ದೇಶದಿಂದ ತಮ್ಮ ಕೃತಿಗಳನ್ನು ‘ಪ್ರಾಚೀನ ಸಾಹಿತ್ಯ’, ‘ಮಧ್ಯಕಾಲೀನ ಸಾಹಿತ್ಯ’, ‘ರಾಜಸತ್ತೆಯ ನಿಶ್ತೇಜದ ಕಾಲ’, ‘ವಸಾಹತು ಶಾಹಿಯ ಕಾಲ’, ‘ಬಂಡವಾಳಶಾಹಿಯ ಯುಗ’ ಎಂಬ ಐದು ವರ್ಗಗಳಾಗಿ ವಿಂಗಡಿಸಿದ್ದಾರೆ’ ಎಂದರು.

‘ಮಧ್ಯಕಾಲೀನ ಸಾಹಿತ್ಯ ಕೃತಿಯಲ್ಲಿ ಕವಿಗಳ ಕುರಿತ ವಸ್ತುನಿಷ್ಠ ಪ್ರತಿಕ್ರಿಯೆ, ಚಾರಿತ್ರಿಕ ದೃಷ್ಟಿಕೋನ, ಪ್ರಮಾಣಬದ್ಧ ಅಭಿಪ್ರಾಯ ಅಡಕವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾವುಗಳು ಹೆಸರನ್ನೇ ಕೇಳಿರದ, ಮೈಸೂರು-ಬೆಂಗಳೂರು ವಿಶ್ವವಿದ್ಯಾಲಯದ ಸಾಂಸ್ಥಿಕ ಸಾಹಿತ್ಯ ಚರಿತ್ರೆಯಲ್ಲಿ ಚರ್ಚೆಯಾಗದಿರುವ ಅಲಕ್ಷಿತ ಸಾಹಿತ್ಯದ ಕವಿಗಳನ್ನು ಈ ಸಂಪುಟಗಳಲ್ಲಿ ಗುರುತಿಸುವ ಮೂಲಕ ಜಗತ್ತಿಗೆ ಪರಿಚಯಿಸುವ ಕೆಲಸ ಮಾಡಿದ್ದಾರೆ’ ಎಂದು ತಿಳಿಸಿದರು.

ನವಕರ್ನಾಟಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕ ಸಿದ್ದನಗೌಡ ಪಾಟೀಲ, ಕೃತಿಯ ಲೇಖಕ ಸಿ.ವೀರಣ್ಣ ಉಪಸ್ಥಿತರಿದ್ದರು.

State Gets

Rajasthan on

Empowerment of Women, Encouragement to Girls

- Domestic Gas cylinders available at ₹ 450 to Woman from an underprivileged family under the LPG Gas Subsidy Scheme; subsidy of ₹ 867 crore provided
- Incentive of over ₹ 103 crore provided to 58,397 girl students for agricultural studies
- Under Lado Protsahan Yojana, benefits extended to 4.60 lakh girls through service bonds of ₹ 1.50 lakhs
- 12 lakh women became Lakhpati Didis, loans worth ₹ 216 crore disbursed under the Nari Shakti Udyam Protsahan Yojana
- Assistance of ₹ 531 crores provided to 9.92 lakh pregnant women under the Pradhan Mantri Matra Vandana Yojana
- 12 sanitary napkins distributed every month to 1.22 crore women and girls
- Formation of 65 Anti-Romeo Squads, monitoring through 500 scooties
- 2,216 posts created for three women battalions, formation of 500 Kalika Patrolling Units
- Livelihood Enhancement Assistance of ₹ 669 crores to 1.37 lakh Self-Help Groups, loans of ₹ 5,271 crores provided to 2.21 lakh Self-Help Groups
- 12% decrease in crimes against women



Wings to Youth Dreams

- New Appointments made on 92,000 posts, new recruitment process initiated for another 1.53 lakh posts
- Formation of SIT to curb dummy candidates, fake degrees, and other irregularities related to recruitment examinations
- Establishment of 65 i-Start launchpad nests, financial assistance of ₹ 22.48 crores provided to 658 startups.
- Distribution of ₹ 1,155 crore to 4.13 lakhs beneficiaries under Mukhyamnatri Yuva Sambal Yojana
- 31,127 students benefited with allocation of ₹ 213 crores under Chief Minister's Anuprati Coaching Yojana
- Skill training provided to 3.37 lakh youth, over 1.11 lakh youth benefited through 410 employment assistance camps
- Assistance of ₹ 39.57 crores provided to 1,754 sportspersons

Commitment to Antyodaya

- 70 lakh new names added under the Food Security Scheme
- Over 22,323 land titles(pattas) allotted to nomadic, semi-nomadic, and de-notified families
- Under various social security schemes, pensions amounting to ₹ 25,851 crores disbursed to 91.61 lakh beneficiaries
- ₹ 806 crores transferred to 7.22 lakh workers
- Over 17.41 lakh workers registered on the e-Shram portal
- 1,443 new factories registered
- Minimum daily wages of workers increased by ₹ 26 per day
- Assistance provided to 87,000 street vendors and hawkers under the PM Svanidhi Scheme
- Construction of 1.36 lakh Rural and 68738 Urban Houses completed under the Pradhan Mantri Awas Yojana
- Distribution of 15,000 artificial equipments and 3,030 Scooties to specially abled persons

Empowered Agriculture Prosperous Farmers

- Under the Kisan Samman Nidhi, assistance of ₹ 10,432 crores provided to 76.18 lakh farmers, annual assistance amount increased from ₹ 6,000 to ₹ 9,000
- Interest-free short-term crop loans worth ₹ 44,355 crores provided
- Under the Gopal Credit Card Scheme, interest-free loans of ₹ 634 crores provided to 84,604 families
- Subsidy of ₹ 44,558 crores on electricity bills
- Insurance claims worth ₹ 6,207 crores released under the Pradhan Mantri Fasal Beema Yojana
- Government procurement of 33.42 lakh tonnes of wheat at MSP from 2.66 lakh farmers, bonus of ₹ 471.16 crores provided
- Payment of ₹ 8,191 crores for procurement of 12.60 lakh metric tonnes of pulses and oilseeds from 5 lakh farmers at Minimum Support Price
- Over 1.86 lakh new agricultural electricity connections, 260 new connections issued per day
- Assistance of ₹ 822 crores for 53,571 solar pumps under PM-KUSUM B scheme

- A total of 39,664 scooties dis
girl students under the Scooty
- 21 new government polytechn
established
- 629 PM Shri Bal Vatika, digital l
up in 500 PM Shri schools,
established in 142 PM Shri scho
- About 8,020 smart classroom
4,010 schools

5 Years 2018-2023 Versus 2 YEARS 2024 - November, 2025

	Extension of Irrigation facilities through canal network	Farm ponds (field water harvesting structures)	ODF Plus Villages	Development of New road infrastructure (KM)
THEN	52,182	29,430	1,478	13,160
NOW	84,592	35,368	41,000	16,430

	Distribution of tablets / laptops to school students	Distribution of scooties to Girl students	Establishment of Government Polytechnic Colleges	Construction of buildings for Government Colleges
THEN	986	21,136	5	57
NOW	88,724	39,664	21	178

Department of Information &

सत्यमेव जयते
राजस्थान सरकार

a New Recognition

the Path of Progress





Shri Bhajanlal Sharma
Hon'ble Chief Minister, Rajasthan

Shri Narendra Modi
Hon'ble Prime Minister

Rajasthan Advancing Towards Energy Revolution

- Power generation increased by 28% (6,839 MW)
- Electricity services strengthened in both rural and urban areas
- 333 sub-stations of 33 kV capacity established
- Over 9.19 lakh new domestic electricity connections issued
- Electricity supply during daytime to farmers in 2-2 blocks each of 22 districts
- 45 GSS of 132 KB and higher capacity established to strengthen green energy infrastructure
- Rajasthan ranks first in the country in solar and renewable energy production
- Over 1.05 lakh rooftop solar plants installed under the PM Surya Ghar Scheme
- Solar parks of 2,450 MW developed at a cost of ₹20,000 crores
- Renewable energy projects with a capacity of 41 GW developed
- 1090 project of 2272 MW capacity established under PM -KUSUM yojana

tributed to
Scheme

nic colleges

ibraries set
'0'-Labs
ols

s set up in

New Heights in Education

- DBT of ₹ 800 to students for uniforms and school bags, ₹330.06 crores disbursed to 41.25 lakh children
- Over 10.51 lakh bicycles distributed to girl students and 88,724 tablets distributed to meritorious students
- Financial assistance of ₹181 crores provided to 4.14 lakh girl students under various schemes

Increased Investment in the State

- MoUs worth ₹ 35 lakh crores signed at the Global Investment Summit
- Work initiated on investment projects worth ₹8 lakh crores
- Record revenue of ₹ 17,633 crores from mining sector
- Establishment of a new industrial area in every 7 days and allotment of 7 industrial plots every day
- ₹1,946.84 crores disbursed to 7,186 entrepreneurs in MSMEs, handicrafts, and startups
- Rajasthan Export Promotion Policy 2024 launched
- 2173 registrations under Pradhanmantri Vishvakarma Yojna, training provided to 2.14 lakh persons and loans extended to 50,111 beneficiaries
- 26 new policies issued and 37 new industrial areas developed
- First-ever Rajasthan Pravasi Diwas organized in the State
- Auction of manganese, limestone, graphite, lead, zinc, copper, tungsten, rare earth elements (REE) and other critical and strategic minerals

Data Reveals the Truth

Villages connected by roads	Allocation of land for renewable energy projects (in hectares)	Increase in power generation capacity (megawatts)	LOA under KUSUM-A (in megawatts)	LOA under KUSUM-C (in megawatts)
1,104	22,597	3,952	595	114
1,698	98,894	6,839	5,318	5,287

Distribution of Bicycles to school students (in lakhs)	Creation of new revenue villages	Establishment of Satellite Hospitals	Skill developement training provided (in lakhs)	Financial assistance to cow shelters (in crore rupees)
10.36	1,517	10	2.35	3,117
10.51	2,281	14	3.37	3,433

Rajasthan Samwad

& Public Relations, Rajasthan

ಎತ್ತಿನ ಹೊಳೆ: 2027 ಅಕ್ಟೋಬರ್‌ಗೆ ಪೂರ್ಣ?

ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಭರವಸೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ(ಬೆಳಗಾವಿ): ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2027ರ ಅಕ್ಟೋಬರ್ ವೇಳೆಗೆ ಪೂರ್ಣಗೊಳಿಸುವುದಾಗಿ ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭರವಸೆ ನೀಡಿದ್ದಾರೆ.


ವಿಧಾನಸಭೆಯಲ್ಲಿ ಜೆಡಿಎಸ್‌ನ ಜಿ.ಕೆ. ವೆಂಕಟಶಿವಾರೆಡ್ಡಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಅವರು ಈ ಮಾಹಿತಿ ನೀಡಿದ್ದಾರೆ.

ಈಗಾಗಲೇ ಮೀಸಲಿರಿಸಿರುವ ಅನುದಾನದಲ್ಲಿ ಯೋಜನೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ. ಬಯಲು ಸೀಮೆ ಪ್ರದೇಶಗಳಾದ ಕೋಲಾರ,ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲಾಗುವುದು. ಈ ಯೋಜನೆಯಡಿ ಕೋಲಾರ ಗುರುತ್ವ ಪೈಪ್‌ಲೈನ್ ಪ್ಯಾಕೇಜ್ 3 ಮತ್ತು 4, ಕೋಲಾರ ಫೀಡರ್ ಪೈಪ್‌ಲೈನ್ ಪ್ಯಾಕೇಜ್ 5 ಮತ್ತು 6 ಹಾಗೂ ಶ್ರೀನಿವಾಸಪುರ ಫೀಡರ್ ಪೈಪ್‌ಲೈನ್ ಪ್ಯಾಕೇಜ್ 1 ರಿಂದ 3ರ ಕಾಮಗಾರಿಗಳನ್ನು ಆರಂಭಿಸಲು ಕಳೆದ ಮೇ 16ರಂದೇ ಅನುಮೋದನೆ ನೀಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಪ್ರಸ್ತುತ ಕಾಮಗಾರಿಗಳ ಪೈಪ್‌ಲೈನ್ ಅಲೈನ್‌ಮೆಂಟ್, ವಿನ್ಯಾಸ, ನಕ್ಷೆಗಳ ತಯಾರಿಕೆ ಕಾರ್ಯ ಪೂರ್ಣಗೊಂಡಿದೆ. ಗುಣಮಟ್ಟ ಖಾತರಿ ಯೋಜನೆ ಕೂಡ ಅನುಮೋದನೆ ಹಂತದಲ್ಲಿದೆ. ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. ಗುತ್ತಿಗೆ ಕರಾರಿನ ಅನ್ವಯ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ ಎಂದು ಶಿವಕುಮಾರ್ ಹೇಳಿದ್ದಾರೆ.

ರೈತರೊಂದಿಗೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡಿದ್ದು, ಈ ಎಲ್ಲ ಪ್ರಕ್ರಿಯೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ಬಿಡುಗಡೆಯಾದ ಅನುದಾನ



*ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಕಾಮಗಾರಿ 2013–14 ರಿಂದ ಆರಂಭವಾಗಿದೆ. ಇದಕ್ಕೆ ಈವರೆಗೆ ಮಾಡಿರುವ ಖರ್ಚಿನ ವಿವರ



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಚಳಿಗಾಲದ ಅಧಿವೇಶನದ ವಿಧಾನಪರಿಷತ್ ಕಲಾಪದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಸಂತಾಪ ಸೂಚಿಸಲಾಯಿತು.–ಪ್ರಜಾವಾಣಿ ಚಿತ್ರ: ರಂಜು ಪಿ.

ಅಧಿವೇಶನ: ಒಂದು ವಾರ ವಿಸ್ತರಣೆಗೆ ಅಶೋಕ ಮನವಿ

ಬೆಳಗಾವಿ: ಉತ್ತರ ಕರ್ನಾಟಕದ ಸಮಸ್ಯೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಆಗಿರುವ ಲೋಪ ಸೇರಿ ಹಲವು ವಿಷಯಗಳ ಬಗ್ಗೆ ಇನ್ನೂ ದೀರ್ಘ ಚರ್ಚೆ ನಡೆಯಬೇಕಿರುವುದರಿಂದ ಅಧಿವೇಶನವನ್ನು ಒಂದು ವಾರ ವಿಸ್ತರಿಸಬೇಕೆಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಈ ಅಧಿವೇಶನವನ್ನು ಇದೇ 8ರಿಂದ 19ರವರೆಗೆ ನಡೆಸಲು ತೀರ್ಮಾನಿಸಲಾಗಿತ್ತು. ಎರಡು ದಿನ ಮೊಟಕುಗೊಂಡಿದೆ. ರಾಜ್ಯದ ಜ್ವಲಂತ ಸಮಸ್ಯೆಗಳ ಚರ್ಚೆಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಅಧಿವೇಶನವನ್ನು ವಿಸ್ತರಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತ ಚರ್ಚೆ ಮತ್ತು ಶಾಸಕರು ಪ್ರಸ್ತಾಪ ಮಾಡಿರುವ ಹಲವು ಗಂಭೀರ ವಿಷಯಗಳಿಗೆ ಮುಖ್ಯಮಂತ್ರಿ ಮತ್ತು ಸಚಿವರು ಉತ್ತರ ನೀಡಬೇಕಿದೆ. ಇದರ ಜತೆಯಲ್ಲಿ ರಾಜ್ಯದಲ್ಲಿ ಕುಸಿದಿರುವ ಕಾನೂನು ಮತ್ತು ಸುವ್ಯವಸ್ಥೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುದಾನ ಬಳಕೆಯ ಕಳಪೆ ಸಾಧನೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚಿಸಲು ಶಾಸಕರಿಗೆ ಸಾಕಷ್ಟು ಸಮಯಾವಕಾಶ ಬೇಕಾಗಿದೆ ಎಂದಿದ್ದಾರೆ.

ಪಡಿತರ ಚೀಟಿ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿದೆ. ರಾಜ್ಯದಾದ್ಯಂತ ಪಡಿತರ ಚೀಟಿಗಾಗಿ ಸಲ್ಲಿಸಿರುವ 3.22 ಲಕ್ಷಕ್ಕೂ ಅಧಿಕ ಅರ್ಜಿಗಳು ಬಾಕಿ ಉಳಿದಿವೆ. ಅವುಗಳಲ್ಲಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳು ಮತ್ತು ಬೆಂಗಳೂರಿನಿಂದ ಅಧಿಕ ಅರ್ಜಿಗಳು ಸಲ್ಲಿಕೆಯಾಗಿವೆ. ಇಂತಹ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

‘1,689 ಶಾಲಾ, ಕಾಲೇಜು ಆಸ್ತಿಗೆ ಖಾತೆ ಇಲ್ಲ’

ಬೆಳಗಾವಿ: ರಾಜ್ಯದಲ್ಲಿನ 1,689 ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಕಟ್ಟಡಗಳು ಆಯಾ ಶಾಲೆ–ಕಾಲೇಜುಗಳ ಹೆಸರಿಗೆ ಖಾತೆಯೇ ಆಗಿಲ್ಲ.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ವಿವೇಕಾನಂದ ಅವರ ಪ್ರಶ್ನೆಗೆ ಉತ್ತರ ನೀಡಿರುವ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, 4,872 ಪ್ರೌಢಶಾಲೆಗಳಲ್ಲಿ 3,437 ಕಟ್ಟಡಗಳು ಖಾತೆಯಾಗಿವೆ. 1,435 ಆಗಬೇಕಿದೆ. 1,319 ಪದವಿಪೂರ್ವ ಕಾಲೇಜುಗಳಲ್ಲಿ 1,055 ಖಾತೆಯಾಗಿವೆ. 264 ಖಾತೆ ಆಗಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಸರ್ಕಾರ ಶಾಲಾ ಆಸ್ತಿಗಳ ಸಂರಕ್ಷಣೆಗಾಗಿ ಕಂದಾಯ, ಗ್ರಾಮೀಣಾಭಿವೃದ್ಧಿ, ಪೌರಾಡಳಿತ ಇಲಾಖೆಗಳ ಸಹಯೋಗದಲ್ಲಿ 2022–23ನೇ ಸಾಲಿನಿಂದ ಪ್ರತಿ ವರ್ಷ ಶಾಲಾ–ಕಾಲೇಜು ಆಸ್ತಿ ಸಂರಕ್ಷಣಾ ಆಂದೋಲನ ನಡೆಸಲಾಗುತ್ತಿದೆ. ಉಳಿದ ಎಲ್ಲ ಆಸ್ತಿಯನ್ನೂ ಹಂತ ಹಂತವಾಗಿ ಖಾತೆ ಮಾಡಲು ಕ್ರಮವಹಿಸಲಾಗುತ್ತದೆ ಎಂದು ಹೇಳಿದ್ದಾರೆ.

ಸಹಕಾರಿ ಬ್ಯಾಂಕ್ ಅಧ್ಯಕ್ಷರ ಅವಧಿ ಮೊಟಕಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಪೆಕ್ಸ್ ಬ್ಯಾಂಕ್, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ಮತ್ತು ಪಟ್ಟಣ ಸಹಕಾರ ಬ್ಯಾಂಕ್‌ಗಳ ಅಧ್ಯಕ್ಷರ ಅವಧಿಯನ್ನು 10 ವರ್ಷಕ್ಕೆ ನಿಗದಿಗೊಳಿಸಿ ಕಾಯ್ದೆಗೆ ತಂದಿರುವ ತಿದ್ದುಪಡಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಸುತ್ತೋಲೆಗೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ತಿದ್ದುಪಡಿ) 2025, ಸೆಕ್ಷನ್ 10 ಎ(2)(ಜಿ)ಗೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿದೆ. ಇದರ ಅನ್ವಯ ಸತತವಾಗಿ 10 ವರ್ಷ ಅಧ್ಯಕ್ಷರಾದವರು ಆ ಬಳಿಕ ಅಧ್ಯಕ್ಷರಾಗಿ ಮುಂದುವರಿಯುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ 10 ವರ್ಷದ ಬಳಿಕ ಮುಂದುವರಿದರೆ ಅಂತಹವರನ್ನು ಅನರ್ಹಗೊಳಿಸಲಾಗುತ್ತದೆ.

ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ರಾಜ್ಯಗಳಿಗೂ ಸುತ್ತೋಲೆಯನ್ನು ಕಳುಹಿಸಿದೆ. ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದೂ ಸೂಚಿಸಿದೆ.

‘ಇದನ್ನು ವಿರೋಧಿಸಿ ಪ್ರಧಾನಿಯವರಿಗೆ ಪತ್ರ ಬರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀರ್ಮಾನಿಸಿದ್ದಾರೆ. ಕಾಯ್ದೆ ತಿದ್ದುಪಡಿ ಮತ್ತು ಸುತ್ತೋಲೆಯಿಂದಾಗಿ ಸಹಕಾರಿ ಬ್ಯಾಂಕಿಂಗ್ ವಲಯದಲ್ಲಿ ಗಂಭೀರ ಬಿಕ್ಕಟ್ಟು ಸೃಷ್ಟಿಯಾಗುತ್ತಿದೆ. ಆದ್ದರಿಂದ ತಕ್ಷಣವೇ ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಲು ಮುಂದಾಗಿದ್ದಾರೆ’ ಎಂದು ಮೂಲಗಳು ಹೇಳಿವೆ.

ಕೇಂದ್ರದ ಈ ಕ್ರಮದಿಂದ ಕರ್ನಾಟಕ ಮಾತ್ರವಲ್ಲ, ಇಡೀ ದೇಶದಲ್ಲಿ ಸಹಕಾರಿ ಬ್ಯಾಂಕಿಂಗ್ ವಲಯ ಸಂಕಷ್ಟಕ್ಕೆ ಸಿಲುಕುತ್ತದೆ. ಅಧ್ಯಕ್ಷರ ಅವಧಿಯನ್ನು 10 ವರ್ಷಕ್ಕೆ ಸೀಮಿತಗೊಳಿಸಿದ್ದು ಸರಿಯಲ್ಲ. ಎಲ್ಲೆಲ್ಲಿ 10 ವರ್ಷ ಆಗಿದೆಯೊ ಅಲ್ಲಿನ ಅಧ್ಯಕ್ಷರನ್ನು ಅನರ್ಹಗೊಳಿಸುವ ಕಾರ್ಯ ನಡೆದಿದೆ. ಇದರಿಂದ ಈ ಸಂಸ್ಥೆಗಳ ಆಡಳಿತದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸಾರ್ವಜನಿಕರೂ ತೊಂದರೆಗೆ ಒಳಗಾಗುತ್ತಾರೆ ಎಂದು ಪ್ರಸ್ತಾಪಿಸಿ ಪತ್ರ ಬರೆಯಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಿಯಾಂಕ್, ಲಾಡ್ ಸಾಧನೆ ಕಳಪೆ: ಟೀಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಳೆದ ಎಂಟೂವರೆ ತಿಂಗಳಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಸಂತೋಷ್ ಲಾಡ್ ಅವರ ಸಾಧನೆ ತೀರಾ ಕಳಪೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಟೀಕಿಸಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಎಂಟು ತಿಂಗಳು:ಶೇ 50 ಅನುದಾನ ವೆಚ್ಚ’ ವಿಶೇಷ ವರದಿಯನ್ನು ಉಲ್ಲೇಖಿಸಿ ‘ಎಕ್ಸ್’ನಲ್ಲಿ ಅವರು ಸಚಿವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘2025–26ನೇ ಆರ್ಥಿಕ ಸಾಲಿನಲ್ಲಿ ಕೇವಲ 3.5 ತಿಂಗಳು ಬಾಕಿ ಇವೆ. ಆದರೆ, ಮುಖ್ಯಮಂತ್ರಿ ಅವರು ಬಜೆಟ್‌ನಲ್ಲಿ ಸರ್ಕಾರದ 47 ಇಲಾಖೆಗಳಿಗೆ ಹಂಚಿಕೆ ಮಾಡಿದ್ದ ₹4.09 ಲಕ್ಷ ಕೋಟಿಯಲ್ಲಿ ಈವರೆಗೆ ಕೇವಲ ₹2.06 ಲಕ್ಷ ಕೋಟಿ ಅನುದಾನ ವೆಚ್ಚವಾಗಿದೆ. ಇದು ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿಗೆ ಕೈ–ಗನ್ನಡಿ’ ಎಂದು ಅವರು ಹೇಳಿದ್ದಾರೆ.

ಜಿಬಿಎ: ಅರ್ಜಿಗೆ ₹50 ಸಾವಿರ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ನಗರ ಪಾಲಿಕೆಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ತಮ್ಮ ಪಕ್ಷದ ಆಕಾಂಕ್ಷಿಗಳಿಂದ ಅರ್ಜಿ ಸ್ವೀಕರಿಸಲು ಕಾಂಗ್ರೆಸ್ ಮುಂದಾಗಿದೆ.

ಸೋಮವಾರದಿಂದಲೇ (ಡಿ.15) ಈ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

‘ಪಾಲಿಕೆಗಳ ಮೀಸಲಾತಿ ಅಂತಿಮ ಆಗಿಲ್ಲವಾದರೂ 369 ವಾರ್ಡ್‌ಗಳಲ್ಲಿ ಸ್ಪರ್ಧಿಸಲು ಯಾರಿಗೆಲ್ಲ ಆಸಕ್ತಿ ಇದೆ ಎಂದು ತಿಳಿಯಲು ಅರ್ಜಿ ಕರೆಯಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವರ ಜೊತೆ ಚರ್ಚಿಸಿ ಈ ಅರ್ಜಿ ಜೊತೆಗೆ ಪಡೆಯುವ ಹಣವನ್ನು ಪಕ್ಷದ ಕಟ್ಟಡ ನಿಧಿಗೆ ಬಳಸಲು ತೀರ್ಮಾನಿಸಲಾಗಿದೆ. ಸಾಮಾನ್ಯ ವರ್ಗಕ್ಕೆ ₹ 50 ಸಾವಿರ, ಮಹಿಳೆಯರು ಮತ್ತು ಪರಿಶಿಷ್ಟ ಸಮುದಾಯದವರಿಗೆ ₹ 25 ಸಾವಿರ ನಿಗದಿಪಡಿಸಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ’ ಎಂದರು.

ಹೋರಾಟ ಮುಂದುವರಿಕೆ: ‘ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಲು, ಮತ ಕಳ್ಳತನ ವಿರುದ್ಧ ನಾವು ಆರಂಭಿಸಿರುವ ಹೋರಾಟ ಮುಂದುವರಿಯಲಿದೆ. ಪ್ರತಿ ಕ್ಷೇತ್ರದಲ್ಲಿಯೂ ನಾವು ಕಾನೂನು ಬ್ಯಾಂಕ್ ಸ್ಥಾಪಿಸುತ್ತೇವೆ. ನಮ್ಮ ಪಕ್ಷದ ಪರ ಇರುವ ವಕೀಲರನ್ನು ಸೇರಿಸಿ, ಪಕ್ಷದ ಕಾರ್ಯಕರ್ತರಿಗೆ ಕಾನೂನು ಸಲಹೆ ನೀಡಲಾಗುವುದು’ ಎಂದರು.

‘ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರು ಬಿಎಲ್‌ಎ ಗುರುತಿನ ಚೀಟಿ ನೀಡಲು ತಯಾರು ಮಾಡಿಕೊಂಡಿದ್ದಾರೆ. ಎಐಸಿಸಿಯಿಂದ ಒಪ್ಪಿಗೆ ಪಡೆಯಲು ತೆಗೆದುಕೊಂಡು ಹೋಗಲಾಗುವುದು. ನಾವು ಇಡೀ ದೇಶದಲ್ಲಿಯೇ ಅತಿ ಹೆಚ್ಚು ಸಹಿ ಸಂಗ್ರಹ ಮಾಡಿದ್ದೇವೆ’ ಎಂದರು.

8 ಅಧಿಕಾರಿಗಳ ಅಮಾನತು

ಮಧ್ಯ ವಯಸ್ಸಿನವರಿಗೂ ವೃದ್ಧಾಪ್ಯ ವೇತನ ಮಂಜೂರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಡೂರು ತಾಲ್ಲೂಕಿನಲ್ಲಿ ಮಧ್ಯ ವಯಸ್ಸಿನವರಿಗೆ ಅಕ್ರಮವಾಗಿ ವೃದ್ಧಾಪ್ಯ ವೇತನ ಮಂಜೂರು ಮಾಡಿರುವ ಆರೋಪದಲ್ಲಿ ಕಂದಾಯ ಇಲಾಖೆಯ ಎಂಟು ಮಂದಿ ಅಧಿಕಾರಿಗಳನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ನಾಡ ಕಚೇರಿ ವಿಷಯ ನಿರ್ವಾಹಕ ಗಿರೀಶ್, ಕಂದಾಯ ಅಧಿಕಾರಿ ಪಿ.ಆರ್. ರವಿಕುಮಾರ್, ಗ್ರಾಮ ಆಡಳಿತಾಧಿಕಾರಿಗಳಾದ ನಿರ್ಮಲಾ ಟಿ.ಎಸ್., ಹನುಮಂತಪ್ಪ ಆರ್., ರವಿ ಕೆ.ಆರ್., ಲಿಂಗರಾಜು ಕೆ.,ಕಾವ್ಯಾ ಟಿ.ಎಂ., ಕುಮಾರ್ ಜೆ.ಎಂ. ಅವರನ್ನು ಅಮಾನತು ಮಾಡಲಾಗಿದೆ.

ಎನ್.ಕೆ.(ನಾಡ ಕಚೇರಿ)–5 ತಂತ್ರಾಂಶದಲ್ಲಿ ಅಕ್ರಮವಾಗಿ 64 ಜನರಿಗೆ ಪಿಂಚಣಿ ಮಂಜೂರು ಮಾಡಿ ಸರ್ಕಾರಕ್ಕೆ ₹9.03 ಲಕ್ಷ ನಷ್ಟ ಮಾಡಿದ್ದಾರೆ ಎಂದು ತಹಶೀಲ್ದಾರ್ ವರದಿಯಲ್ಲಿ ತಿಳಿಸಿದ್ದರು. ಅದನ್ನು ಆಧರಿಸಿ ತನಿಖೆ ನಡೆಸಿದ್ದ ಕಂದಾಯ ಇಲಾಖೆ, 11 ಜನರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿತ್ತು.

ಕಡೂರು ತಹಶೀಲ್ದಾರ್ ಇತ್ತೀಚೆಗೆ ಮತ್ತೊಂದು ವರದಿಯನ್ನು ಸಲ್ಲಿಸಿದ್ದು, ಕಡೂರು ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಎನ್.ಕೆ.–4 ತಂತ್ರಾಂಶದಲ್ಲೂ 1,485 ಅನರ್ಹರಿಗೆ ಅಕ್ರಮವಾಗಿ ಪಿಂಚಣಿ ಮಂಜೂರಾಗಿ ಸರ್ಕಾರಕ್ಕೆ ₹2.17 ಕೋಟಿ ನಷ್ಟವಾಗಿದೆ ಎಂದು ಉಲ್ಲೇಖಿಸಿದ್ದರು.

ಈ ಪ್ರಕರಣಗಳಲ್ಲಿ ಯಾವ ಅಧಿಕಾರಿಗಳ ಎಲ್ಲೆಲ್ಲಿ ಕರ್ತವ್ಯಲೋಪ ಎಸಗಿದ್ದಾರೆ. ಯಾರಿಂದ ಎಷ್ಟು ನಷ್ಟ ಆಗಿದೆ ಎಂದು ಕೂಲಂಕಷವಾಗಿ ಪರಿಶೀಲಿಸಿರುವ ಜಿಲ್ಲಾಧಿಕಾರಿ ಮೀನಾ ನಾಗರಾಜ್, 8 ಸಿಬ್ಬಂದಿ ಅಮಾನತು ಮಾಡಿ ಆದೇಶಿಸಿದ್ದಾರೆ. ಶಿರಸ್ತೇದಾರ್ ಕಲ್ಮರುಡಪ್ಪ ಅವರನ್ನು ಈ ಹಿಂದೆಯೇ ಅಮಾನತು ಮಾಡಲಾಗಿತ್ತು.

‘ಅಕ್ರಮವಾಗಿ ಪಿಂಚಣಿ ಮಂಜೂರಾತಿ ಪ್ರಕರಣದಲ್ಲಿ ಸಿಬ್ಬಂದಿಯನ್ನು ಅಮಾನತು ಮಾಡಿರುವ ಕ್ರಮ ಸ್ವಾಗತಾರ್ಹ. ಎಲ್ಲಾ ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಎನ್.ಕೆ.–4 ಮತ್ತು ಎನ್.ಕೆ.–5 ತಂತ್ರಾಂಶ ಪರಿಶೀಲಿಸಬೇಕು. ಅಕ್ರಮಗಳನ್ನು ಪತ್ತೆ ಹಚ್ಚಬೇಕು’ ಎಂದು ಕಡೂರಿನ ವಕೀಲ ನಾಗರಾಜ್ ಆಗ್ರಹಿಸಿದ್ದಾರೆ.

ಸಿರಿಧಾನ್ಯಗಳಲ್ಲಿ ವೃಕ್ಷಮಾತೆ...

ಪ್ರಜಾವಾಣಿ ಚಿತ್ರ: ರಂಜು ಪಿ.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಗೌರವಾರ್ಥ ಸಿರಿಧಾನ್ಯಗಳಲ್ಲಿ ರೂಪಿಸಲಾದ ಪ್ರತಿಕೃತಿಯನ್ನು ಕುತೂಹಲದಿಂದ ನೋಡಿದ ಪೊಲೀಸ್ ಅಧಿಕಾರಿ

ಸುವರ್ಣ ವಿಧಾನಸೌಧ ಬಳಿ ವಿಭಿನ್ನ ಪ್ರತಿಭಟನೆ

ಭಜನೆ–ಪ್ರಾರ್ಥನೆ, ಸಾಮೂಹಿಕ ಊಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಲಾವಿದರ ಮಾಸಾಶನ ಸೌಲಭ್ಯಕ್ಕಾಗಿ ವಯೋಮಿತಿಯನ್ನು 50 ವರ್ಷಕ್ಕೆ ಇಳಿಸಬೇಕು, ₹5 ಸಾವಿರಕ್ಕೆ ಮಾಸಾಶನ ಹೆಚ್ಚಿಸಲು ಆಗ್ರಹಿಸಿ ಕರ್ನಾಟಕ ಬೀದಿನಾಟಕ ಕಲಾ ತಂಡಗಳ ಒಕ್ಕೂಟ ಮತ್ತು ಸಾಂಸ್ಕೃತಿಕ ಸಂಘಗಳ ಒಕ್ಕೂಟದ ಸದಸ್ಯರು, ಭಜನೆ ಮಾಡುವ ಮೂಲಕ ಭಿನ್ನವಾಗಿ ಪ್ರತಿಭಟಿಸಿದರು.

ಇಲ್ಲಿನ ಸುವರ್ಣ ವಿಧಾನಸೌಧ ಬಳಿಯ ಉದ್ಯಾನದಲ್ಲಿ ಸೋಮವಾರ ಬೆಳಿಗ್ಗೆಯಿಂದ ‘ಸಾಂಸ್ಕೃತಿಕ ಪ್ರತಿಭಟನೆ’ ನಡೆಸಿದ ಕಲಾವಿದರು, ನಿರಂತರ ವಚನಗಾಯನ, ಪ್ರಾರ್ಥನೆ, ಕೀರ್ತನೆ, ಜನಪದ ಗೀತೆ, ಭಜನಾ ಪದಗಳನ್ನು ಹಾಡಿದರು. ಇದರಿಂದ ಪ್ರತಿಭಟನೆಗೆ ನಿಗದಿ ಮಾಡಿದ ಟೆಂಟುಗಳಲ್ಲಿನ ಜನರ ಗಮನ ಸೆಳೆದರು.

ಜಾನಪದ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಸೇರಿ ಕೆಲ ಅಕಾಡೆಮಿಗಳ ಕಚೇರಿಗಳನ್ನು ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಬೇಕು. ಬೀದಿನಾಟಕಕ್ಕೆ ಪ್ರತ್ಯೇಕ ಅಕಾಡೆಮಿ ಸ್ಥಾಪಿಸಲು ಆಗ್ರಹಿಸಿದರು.

ಒಕ್ಕೂಟದ ಮುಖಂಡರಾದ ಭರತ ಕಲಾಚಂದ್ರ, ಸುಜಾತಾ ಮಗದುಮ್ಮ ನೇತೃತ್ವ ವಹಿಸಿದ್ದರು.

ಊಟ ಮಾಡಿ ಪ್ರತಿಭಟನೆ: ಪಾರಂಪರಿಕ ವೈದ್ಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯಿಸಿ ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಮತ್ತು ಸಂಘಗಳ ಒಕ್ಕೂಟದವರು ಟೆಂಟ್‌ನಲ್ಲಿಯೇ ಸಾಮೂಹಿಕ ಊಟ ಮಾಡಿ ಪ್ರತಿಭಟಿಸಿದರು.

ಪಾರಂಪರಿಕ ವೈದ್ಯ ವೃತ್ತಿಗೆ ಮಾನ್ಯತೆ ನೀಡಬೇಕು. ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಧನ್ವಂತರಿ ವನ, ವೈದ್ಯ ಭವನ ನಿರ್ಮಿಸಬೇಕು. ಹಿರಿಯ ಪಾರಂಪರಿಕ ವೈದ್ಯರನ್ನು ಗುರುತಿಸಿ, ಜಿಲ್ಲೆ, ರಾಜ್ಯಮಟ್ಟದಲ್ಲಿ ಪುರಸ್ಕರಿಸಬೇಕು ಎಂದು ಆಗ್ರಹಿಸಿದರು. ಬಸವಪ್ರಸಾದ ಸ್ವಾಮೀಜಿ, ಶರಣಪ್ಪ ಬಳ್ಳಾರಿ ನೇತೃತ್ವ ವಹಿಸಿದ್ದರು.



ಬೆಳಗಾವಿ ಸುವರ್ಣ ವಿಧಾನಸೌಧದ ಬಳಿ ಸೋಮವಾರ ಕರ್ನಾಟಕ ರಾಜ್ಯ ಬೀದಿನಾಟಕ ಕಲಾ ತಂಡಗಳ ಒಕ್ಕೂಟ ಮತ್ತು ಸಾಂಸ್ಕೃತಿಕ ಸಂಘಗಳ ಜಿಲ್ಲಾ ಒಕ್ಕೂಟದವರು ಭಜನೆ ಮಾಡಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

‘ಬಾಂಗ್ಲಾದೊಂದಿಗಿನ ಸಂಬಂಧ ಶಾಶ್ವತ’

ಢಾಕಾ: ಪ್ರಸ್ತುತ ಭಾರತದಲ್ಲಿರುವ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ನೀಡಿದ ‘ಪ್ರಚೋದನಕಾರಿ ಹೇಳಿಕೆ’ಗಳ ಬಗ್ಗೆ ಬಾಂಗ್ಲಾದೇಶದ ವಿದೇಶಾಂಗ ಕಚೇರಿಯು ಗಂಭೀರ ಕಳವಳ ವ್ಯಕ್ತಪಡಿಸಿ, ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಅವರಿಗೆ ಸಮನ್ಸ್ ನೀಡಿದೆ.



ಇದಾಗಿ ಗಂಟೆಗಳ ನಂತರ ಹೇಳಿಕೆ ನೀಡಿರುವ ಪ್ರಣಯ್ ಅವರು, ‘ಬಾಂಗ್ಲಾದೊಂದಿಗಿನ ಭಾರತದ ಸಂಬಂಧಗಳು ಅಲ್ಪಕಾಲಿಕವಲ್ಲ, ಬದಲಾಗಿ ಶಾಶ್ವತ’ ಎಂದು ಭಾನುವಾರ ಹೇಳಿದ್ದಾರೆ.

ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಘಟನೆಯಾದ ‘ಇತಿಹಾಸ್ ಒ ಒಯಿಟ್ಜೋ ಪರಿಷತ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಪ್ರಣಯ್ ಅವರು, ‘ಭಾರತ–ಬಾಂಗ್ಲಾ ಸಂಬಂಧ ಶಾಶ್ವತವಾಗಿದ್ದು, ಅದು ರಕ್ತ ಮತ್ತು ತ್ಯಾಗದಲ್ಲಿ ಬೆಸೆದುಕೊಂಡಿದೆ. ಅದನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಿದ ಆಹಾರ ಸುರಕ್ಷತಾ ಅಧಿಕಾರಿಗಳು

ಮೊಟ್ಟೆ–ಆತಂಕ ಬೇಡ: ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಟ್ಟೆಯಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆಯಾಗಿದೆ ಎಂಬುದರ ಬಗ್ಗೆ ಆತಂಕ ಪಡಬೇಕಾಗಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.



ದಿನೇಶ್ ಗುಂಡೂರಾವ್

ಕೆಲವು ಬ್ರ್ಯಾಂಡ್‌ನ ಮೊಟ್ಟೆಗಳಲ್ಲಿ ಕ್ಯಾನ್ಸರ್‌ಕಾರಕ ಅಂಶವಿದೆ ಎಂದು ಯುಟ್ಯೂಬ್ ವಾಹಿನಿ ಒಂದರಲ್ಲಿ ಈಚೆಗೆ ವಿಡಿಯೊ ಒಂದನ್ನು ಪ್ರಸಾರ ಮಾಡಲಾಗಿತ್ತು. ಅದರ ಬೆನ್ನಲ್ಲೇ ಮೊಟ್ಟೆ ತಿನ್ನಬೇಡಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಳ್ಳಲಾಗುತ್ತಿದೆ.

ಈ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿರುವ ಸಚಿವ ದಿನೇಶ್ ಗುಂಡೂರಾವ್, ‘ಕೆಲವು ಬ್ರ್ಯಾಂಡ್‌ನ ಮೊಟ್ಟೆಗಳಲ್ಲಿ ಕ್ಯಾನ್ಸರ್‌ಕಾರಕ ಅಂಶಗಳು ಇವೆ ಎಂದು ಸುದ್ದಿ ಓಡಾಡಿದೆ. ಆದರೆ ನಾವು ಸೆಪ್ಟೆಂಬರ್‌ನಲ್ಲಿ 125 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ್ದೆವು. ಆ ಪೈಕಿ 123 ಮಾದರಿಗಳು ಸುರಕ್ಷಿತ ಎಂಬ ವರದಿ ಬಂದಿತ್ತು. ಈಗ ಮತ್ತೆ ಮಾದರಿ ಸಂಗ್ರಹಿಸಿ, ಪರೀಕ್ಷೆಗೆ ಕಳುಹಿಸಲಾಗಿದೆ. ಆ ಬಗ್ಗೆ ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ತಿಳಿಸಿದ್ದಾರೆ.‘ಕೆಲವು ಸುದ್ದಿ ಬಂದ ತಕ್ಷಣ ಮೊಟ್ಟೆಯನ್ನು ಬಳಸಬೇಡಿ, ತಿನ್ನಬೇಡಿ ಎಂದು ಹೇಳಲಾಗದು. ಹೀಗಾಗಿ ಜನರು ಆತಂಕಪಡಬೇಕಿಲ್ಲ’ ಎಂದಿದ್ದಾರೆ.

ಯೂಟ್ಯೂಬ್ ವಾಹಿನಿ ಸುದ್ದಿ: ‘ಎಗೋಝ್’ ಬ್ರ್ಯಾಂಡ್‌ನ ಮೊಟ್ಟೆಗಳಲ್ಲಿ ನೈಟ್ರೊಫ್ಯೂರಾನ್ಸ್ ಎಂಬ ಆ್ಯಂಟಿಬಯೋಟಿಕ್ ಅಂಶ ಇದೆ ಎಂದು ‘ಟ್ರಸ್ಟಿಫೈಡ್’ ಯೂಟ್ಯೂಬ್ ವಾಹಿನಿ ಈಚೆಗೆ ಸುದ್ದಿ ಪ್ರಸಾರ ಮಾಡಿತ್ತು. ಆ ಕಂಪನಿಯ ಮೊಟ್ಟೆಗಳನ್ನು ಪರೀಕ್ಷೆಗೆ ಒಳಪಡಿಸಿದಾಗ, ಅವುಗಳಲ್ಲಿ 0.73 ಮೈಕ್ರಾನ್‌ನಷ್ಟು ನೈಟ್ರೊಫ್ಯೂರಾನ್ಸ್ ಮತ್ತು ಅದರ ಉಳಿಕೆಗಳು ಇರುವುದು ಪತ್ತೆಯಾಯಿತು ಎಂದು ಪರೀಕ್ಷಾ ವರದಿಯನ್ನೂ ಸುದ್ದಿಯೊಂದಿಗೆ ನೀಡಿತ್ತು.

ಈ ಬಗ್ಗೆ ಅಭಿಪ್ರಾಯ ನೀಡಿದ್ದ ವೈದ್ಯರೊಬ್ಬರು, ‘ನೈಟ್ರೊಫ್ಯೂರಾನ್ಸ್ ಕ್ಯಾನ್ಸರ್‌ಕಾರಕ ಅಂಶ’ ಎಂದು ಹೇಳಿದ್ದರು. ನಿರೂಪಕ, ‘ಎಗೋಝ್ ಬ್ರ್ಯಾಂಡ್‌ನ ಮೊಟ್ಟೆಗಳಲ್ಲಿ ಸ್ವಲ್ಪವೂ ಆ್ಯಂಟಿಬಯೋಟಿಕ್ ಅಂಶ ಇಲ್ಲ ಎಂದು ಆ ಕಂಪನಿ ಹೇಳಿಕೊಳ್ಳುತ್ತದೆ. ಆದರೆ ಅದು ಸುಳ್ಳು ಎಂಬುದನ್ನು ಈ ವರದಿ ಸಾಬೀತುಪಡಿಸಿದೆ’ ಎಂದಿದ್ದರು.

ಎಗೋಝ್ ಕಂಪನಿಯ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ ವ್ಯಕ್ತವಾಯಿತು. ಅದರ ಬೆನ್ನಲ್ಲೇ ಕಂಪನಿಯು ತನ್ನ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ತಮ್ಮ ಮೊಟ್ಟೆಗಳ ಪರೀಕ್ಷಾ ವರದಿಯನ್ನು ಪ್ರಕಟಿಸಿತು. ಜತೆಗೆ ಮೊಟ್ಟೆಯಲ್ಲಿನ ಎಲ್ಲ ಅಂಶಗಳೂ ನಿಗದಿತ ಪ್ರಮಾಣದಲ್ಲಿಯೇ ಇವೆ ಎಂದಿತ್ತು.

1 ಮೈಕ್ರೊಗ್ರಾಂವರೆಗೂ ವಿನಾಯಿತಿ

ನೈಟ್ರೊಫ್ಯೂರಾನ್ಸ್ ಅನ್ನು ಯಾವುದೇ ರೂಪದಲ್ಲಿ ಬಳಸಬಾರದು ಐರೋಪ್ಯ ದೇಶಗಳು ಬಹಳ ಹಿಂದೆಯೇ ನಿಷೇಧ ಹೇರಿವೆ. ಆದರೆ ಭಾರತದಲ್ಲಿ ಪೂರ್ಣಪ್ರಮಾಣದ ನಿಷೇಧವಿಲ್ಲ.

ಬದಲಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ), ‘ಪ್ರತಿ ಕೆ.ಜಿ. ಉತ್ಪನ್ನದಲ್ಲಿ ಗರಿಷ್ಠ 1 ಮೈಕ್ರೊಗ್ರಾಂನಷ್ಟು ನೈಟ್ರೊಫ್ಯೂರಾನ್ಸ್ ಇರಬಹುದು ಎಂಬ ವಿನಾಯತಿ ನೀಡಿದೆ. ಮೊಟ್ಟೆ, ಕೋಳಿಮಾಂಸ, ಮೇಕೆ–ಕುರಿ ಮಾಂಸಕ್ಕೂ ಈ ವಿನಾಯತಿ ಅನ್ವಯವಾಗುತ್ತದೆ.

ನೈಟ್ರೊಫ್ಯೂರಾನ್ಸ್ ಆಧಾರಿತ ದ್ರಾವಣ ಮತ್ತು ಔಷಧಗಳನ್ನು ಮಾಂಸದ ಕೋಳಿಗಳಿಗೆ ಮತ್ತು ಮೊಟ್ಟೆ ಕೋಳಿಗಳಿಗೆ ನೀಡುವ ಅಭ್ಯಾಸವಿದೆ. ಮೊದಲು ಇದರ ಬಳಕೆ ವ್ಯಾಪಕವಾಗಿತ್ತು. ಈಗ ನಿರ್ಬಂಧವಿದೆ. ಕೋಳಿಗಳಿಗೆ ಆಹಾರ ಮತ್ತು ನೀರಿನ ಮೂಲಕ ನೈಟ್ರೊಫ್ಯೂರಾನ್ಸ್ ನೀಡಲಾಗುತ್ತದೆ. ಇದು ದೀರ್ಘಕಾಲದವರೆಗೆ ಕೋಳಿ ಮಾಂಸದಲ್ಲಿ ಉಳಿಯುತ್ತದೆ. ಮೊಟ್ಟೆಗಳಲ್ಲೂ ಅದರ ಅಂಶ ಉಳಿಯುವ ಸಾಧ್ಯತೆ ಇರುತ್ತದೆ.

ನರೇಗಾ ಸ್ವರೂಪ ಬದಲಿಗೆ ಮಸೂದೆ

ರಾಜ್ಯಗಳಿಗೆ ಶೇ 40ರಷ್ಟು ಹೊರೆ

ಒಂದನೇ ಪುಟದಿಂದ....

ನಿರುದ್ಯೋಗ ಭತ್ಯೆ: ಹೊಸ ಕಾಯ್ದೆಯ ಅನ್ವಯ, ಉದ್ಯೋಗ ಖಾತರಿ ಪಡೆಯದ ವ್ಯಕ್ತಿಗೆ ನಿರುದ್ಯೋಗ ಭತ್ಯೆ ನೀಡಲಾಗುತ್ತದೆ. ಈ ಭತ್ಯೆಯನ್ನು ರಾಜ್ಯ ಸರ್ಕಾರವೇ ನೀಡಬೇಕು ಎನ್ನುತ್ತದೆ ಮಸೂದೆ.

ಗರಿಷ್ಠ ಮಿತಿ ನಿಗದಿ

ಒಂದನೇ ಪುಟದಿಂದ....

ಸಮಿತಿಗಳ ರಚನೆ: ರಾಜ್ಯ ಸರ್ಕಾರಗಳಿಗೆ ಹಣ ಹಂಚಿಕೆ ಮಾಡುವ ಕುರಿತು ನಿರ್ಧಾರ ಕೈಗೊಳ್ಳಲು ಕೇಂದ್ರ ಸರ್ಕಾರವು ‘ರಾಷ್ಟ್ರೀಯ ಮಟ್ಟದ ಸಂಚಾಲನಾ ಸಮಿತಿ’ಯನ್ನು ರಚಿಸಬೇಕು. ಜೊತೆಗೆ, ಈ ಕಾಯ್ದೆಯ ಎಲ್ಲ ಕೆಲಸ ಕಾರ್ಯಗಳ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳಬೇಕು. ಅಂತೆಯೇ, ಕಾಯ್ದೆಯ ಕುರಿತು ಮಾರ್ಗದರ್ಶನ ನೀಡಲು ರಾಜ್ಯ ಸರ್ಕಾರಗಳೂ ‘ರಾಜ್ಯ ಮಟ್ಟದ ಸಂಚಾಲನಾ ಸಮಿತಿ’ಯನ್ನು ರಚಿಸಿಕೊಳ್ಳಬೇಕು ಎನ್ನುತ್ತದೆ ಮಸೂದೆ.

ಕೇಂದ್ರ, ರಾಜ್ಯಗಳಲ್ಲಿ ಮಂಡಳಿ ರಚನೆ

ಕಾಯ್ದೆ ಜಾರಿ ಸಂಬಂಧ ನಿಗಾ ಇರಿಸಲು ಕೇಂದ್ರ ಮಟ್ಟದಲ್ಲಿ ‘ಕೇಂದ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮಂಡಳಿ’ ಮತ್ತು ರಾಜ್ಯ ಮಟ್ಟದಲ್ಲಿ ‘ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಮಂಡಳಿ’ಯನ್ನು ರಚಿಸಲಾಗುತ್ತದೆ.

ನಾಲ್ಕು ವಿಭಾಗಗಳಲ್ಲಿ ಕೆಲಸ

ಉದ್ಯೋಗ ಖಾತರಿ ಮೂಲಕ ಯಾವೆಲ್ಲ ಕೆಲಸಗಳನ್ನು ಕೈಗೊಳ್ಳಬಹುದು ಎನ್ನುವ ಬಗ್ಗೆ ಮಸೂದೆಯಲ್ಲಿ ಹೇಳಲಾಗಿದೆ. ಇದನ್ನು ಒಟ್ಟು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

1. ಜಲ ಸಂಬಂಧಿತ ಕಾರ್ಯಗಳು
2. ಗ್ರಾಮೀಣ ಭಾಗದ ಮೂಲಸೌಕರ್ಯ ನಿರ್ಮಾಣ
3. ಜೀವನೋಪಾಯಕ್ಕೆ ಸಂಬಂಧಿತ ಮೂಲಸೌಕರ್ಯ ನಿರ್ಮಾಣ (ತರಬೇತಿ ಕೇಂದ್ರಗಳು, ಸಂತೆ ಮಾರುಕಟ್ಟೆ ನಿರ್ಮಾಣ, ಆಹಾರ ಸಂಗ್ರಹಿಸಲು ಸಲುವಾಗಿ ಕಟ್ಟಡ ನಿರ್ಮಾಣ, ಹೈನುಗಾರಿಕೆಗೆ ಸಂಬಂಧಿಸಿದ ಕಟ್ಟಡಗಳ ನಿರ್ಮಾಣ)
4. ವಿಪತ್ತು ತಡೆ ಸಂಬಂಧಿತ ನಿರ್ಮಾಣ ಕಾರ್ಯಗಳು (ನಿರಾಶ್ರಿತ ಶಿಬಿರಗಳ ನಿರ್ಮಾಣ, ಕೆರೆ–ಕಟ್ಟೆಗಳು ಉಕ್ಕಿ ಹರಿಯದಂಥ ನಿರ್ಮಾಣ ಕಾರ್ಯ, ನೈಸರ್ಗಿಕ ವಿಪತ್ತಿನಿಂದ ಹಾಳಾದ ರಸ್ತೆಗಳ ದುರಸ್ತಿ, ಬಿರುಗಾಳಿಯಿಂದ ನಾಶವಾದ ತೋಟ ಮತ್ತು ಮನೆ ಮರು ನಿರ್ಮಾಣ, ಕಾಳ್ಗಿಚ್ಚು ನಿಯಂತ್ರಣ ಕಾರ್ಯಗಳು)

‘ರಾಮನ ಹೆಸರಲ್ಲಿ ದಂಡನೆ’

ಕೇರಳದ ಸಂಸದ ಜಾನ್ ಬ್ರಿಟ್ಟಾಸ್ ಅವರು ಹೊಸ ಮಸೂದೆ ಕುರಿತು ಎಕ್ಸ್ ಪೋಸ್ಟ್ ಮಾಡಿ ನರೇಗಾದ ಈಗಿನ ಸ್ವರೂಪ ಹಾಗೂ ಹೊಸ ಕಾಯ್ದೆ ಜಾರಿಗೆ ಬಂದರೆ ಆಗುವ ಬದಲಾವಣೆಗಳ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯ ಇಲ್ಲಿದೆ:

ನರೇಗಾ ಯೋಜನೆಯ ಹೆಸರಿನಿಂದ ಮಹಾತ್ಮ ಗಾಂಧಿ ಅವರ ಹೆಸರು ತೆಗೆದುಹಾಕಿರುವುದು ಟ್ರೇಲರ್ ಮಾತ್ರ. ಈ ಮಸೂದೆಯಿಂದಾಗುವ ಹಾನಿಯು ತೀವ್ರವಾಗಿದೆ. ಹಕ್ಕು ಕೇಂದ್ರಿತವಾಗಿದ್ದ ಕಾನೂನನ್ನು ಷರತ್ತುಬದ್ಧ, ಕೇಂದ್ರ ಸರ್ಕಾರದ ಹಿಡಿತದ ಕಾನೂನಾಗಿ ಬದಲಾಯಿಸಲಾಗಿದೆ. ಈ ಕಾಯ್ದೆಯು ರಾಜ್ಯ ಸರ್ಕಾರ ಮತ್ತು ಕಾರ್ಮಿಕರ ಹಿತಾಸಕ್ತಿ ವಿರುದ್ಧ ಇದೆ. ಈ ಮಸೂದೆಯು ನರೇಗಾ ಯೋಜನೆಯ ಹೆಸರನ್ನು ಮಾತ್ರವೇ ಬದಲಾಯಿಸುತ್ತಿಲ್ಲ. ಬದಲಿಗೆ ಯೋಜನೆಯನ್ನು ಆರ್ಥಿಕವಾಗಿ, ಸಾಂಸ್ಥಿಕವಾಗಿ ಮತ್ತು ನೈತಿಕವಾಗಿ ಕೆಡವಲಾಗುತ್ತಿದೆ.

ಸತ್ಯ ಸಂಗತಿ ಏನೆಂದರೆ, ರಾಮನ ಹೆಸರಿನಲ್ಲಿ ರಾಜ್ಯಗಳು ಮತ್ತು ಬಡವರನ್ನು ದಂಡಿಸಲಾಗುತ್ತಿದೆ, ಮೋಸಗೊಳಿಸಲಾಗುತ್ತಿದೆ ಮತ್ತು ಆರ್ಥಿಕವಾಗಿ ತ್ಯಾಗ ಮಾಡಲು ಹೇರಲಾಗುತ್ತಿದೆ.

- 125 ಕೆಲಸದ ದಿನಗಳು ಎನ್ನುವುದು ತಲೆಬರಹ ಮಾತ್ರ. 60:40 ಅನುಪಾತದಲ್ಲಿ ಅನುದಾನ ಹಂಚಿಕೆ ಮಾಡಲಾಗುತ್ತದೆ ಎನ್ನುವುದನ್ನು ಸಣ್ಣದಾಗಿ ಒಳಗೆ ಸೇರಿಸಲಾಗಿದೆ: ನರೇಗಾಕ್ಕೆ ಕೇಂದ್ರ ಸರ್ಕಾರವೇ ಪೂರ್ಣ ಪ್ರಮಾಣದಲ್ಲಿ ಅನುದಾನ ನೀಡುತ್ತದೆ. ಆದರೆ, ಹೊಸ ಮಸೂದೆಯ ಪ್ರಕಾರ, ರಾಜ್ಯ ಸರ್ಕಾರವು ಶೇ 40ರಷ್ಟು ಅನುದಾನ ನೀಡಬೇಕು. ಅಂದರೆ, ರಾಜ್ಯ ಸರ್ಕಾರಗಳು ₹50 ಸಾವಿರ ಕೋಟಿಯನ್ನು ಹೆಚ್ಚುವರಿಯಾಗಿ ಖರ್ಚು ಮಾಡಬೇಕಾಗುತ್ತದೆ. ಅನುದಾನ ನೀಡುವ ಜವಾಬ್ದಾರಿಯನ್ನು ರಹಸ್ಯ ವಿಧಾನದಲ್ಲಿ ರಾಜ್ಯ ಸರ್ಕಾರಗಳ ತಲೆಮೇಲೆ ಹಾಕುವುದನ್ನು ಸುಧಾರಣೆ ಎನ್ನುವುದಿಲ್ಲ
- ನರೇಗಾವು ಬೇಡಿಕೆ ಕೇಂದ್ರಿತವಾಗಿತ್ತು: ಒಂದು ವೇಳೆ ಕಾರ್ಮಿಕನು ಕೆಲಸ ಬೇಕು ಎಂದು ಕೇಳಿದರೆ, ಕೇಂದ್ರ ಸರ್ಕಾರವು ಅದಕ್ಕೆ ಹಣ ನೀಡಬೇಕಿತ್ತು. ಆದರೆ, ಹೊಸ ಮಸೂದೆಯಲ್ಲಿ ಈ ಅವಕಾಶವನ್ನು ಕಿತ್ತುಕೊಂಡು, ಪೂರ್ವ ನಿಗದಿತ ನಿಯಮಾನುಸಾರ ಹಂಚಿಕೆ ಮತ್ತು ಗರಿಷ್ಠ ಮಿತಿಯನ್ನು ಹೇರಲಾಗಿದೆ. ಒಮ್ಮೆ ಕೇಂದ್ರ ಸರ್ಕಾರ ನೀಡಿದ ಅನುದಾನ ಮುಗಿದರೆ, ಜನರ ಹಕ್ಕು ಮೊಟಕುಗೊಳ್ಳುತ್ತದೆ
- ಪಂಚಾಯಿತಿಗಳನ್ನು ಬದಿಗೊತ್ತಿ, ಡ್ಯಾಶ್‌ಬೋರ್ಡ್‌ಗಳಿಗೆ ಅಧಿಕಾರ ನೀಡಿಕೆ: ಸ್ಥಳೀಯವಾದ ಅಗತ್ಯಕ್ಕೆ ತಕ್ಕಂತೆ ಗ್ರಾಮ ಸಭೆ ಮತ್ತು ಪಂಚಾಯಿತಿಗಳು ಕೆಲಸದ ಯೋಜನೆ ರೂಪಿಸುತ್ತಿದ್ದವು. ಆದರೆ, ಈಗ ಜಿಐಎಸ್ ತಂತ್ರಾಂಶ, ಪಿಎಂ ಗತಿ ಶಕ್ತಿ ದತ್ತಾಂಶಗಳ ಮೇಲೆ ಯೋಜನೆಗಳು ರೂಪುಗೊಳ್ಳುತ್ತವೆ. ಬಯೊಮೆಟ್ರಿಕ್, ಜಿಯೊ ಟ್ಯಾಗಿಂಗ್, ಡ್ಯಾಶ್‌ಬೋರ್ಡ್, ಕೃತಕ ಬುದ್ಧಿಮತ್ತೆ ಸಹಾಯದಿಂದ ಮಾಡುವ ಲೆಕ್ಕಪರಿಶೋಧನೆಯನ್ನು ಕಡ್ಡಾಯ ಮಾಡಲಾಗಿದೆ. ತಂತ್ರಜ್ಞಾನ ಕೈಕೊಟ್ಟರೆ ಗ್ರಾಮೀಣ ಭಾಗದ ಕೋಟಿಗಟ್ಟಲೆ ಜನರು ಕೆಲಸದಿಂದ ವಂಚಿತರಾಗುತ್ತಾರೆ
- ಇನ್ನೂ ಕೆಟ್ಟ ಅಂಶವೇನೆಂದರೆ, ನೆಟ್ಟಿ–ಕಟಾವು ಎಂಬ ಕೃಷಿ ಋತುವಿನ ಹೆಸರಿನಲ್ಲಿ 60 ಕೆಲಸ ದಿನಗಳನ್ನು ಕಡಿತ ಮಾಡಲಾಗಿದೆ. ಇದು ಕಾರ್ಮಿಕ ಗ್ಯಾರಂಟಿಯೊ ಕಾರ್ಮಿಕ ನಿಯಂತ್ರಣವೊ? ನೀವು ಕೆಲಸ ಮಾಡಬೇಡಿ, ಹಣ ಗಳಿಸಬೇಡಿ ಎಂದು ಕಾನೂನುಬದ್ಧವಾಗಿ ಕೇಂದ್ರ ಸರ್ಕಾರ ಹೇಳಿದಂತಾಗಿದೆ

ಕೇಂದ್ರ ಹೇಳುವುದೇನು?

ಕೌಶಲರಹಿತ ಕೂಲಿ ಕೆಲಸ ಮಾಡಲು ಸ್ವಯಂ-ಪ್ರೇರಿತರಾಗಿ ಬರುವ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದ ಪ್ರತಿ ವಯಸ್ಕ ವ್ಯಕ್ತಿಗೆ ಪ್ರತಿ ಹಣಕಾಸು ವರ್ಷದಲ್ಲಿ 125 ದಿನಗಳ ಕೆಲಸಕ್ಕೆ ಶಾಸನಬದ್ಧ ಖಾತರಿ ನೀಡುವುದು ಈ ಕಾಯ್ದೆಯ ಉದ್ದೇಶ. 2047ರ ಹೊತ್ತಿಗೆ ವಿಕಸಿತ ಭಾರತದ ಮುನ್ನೋಟಕ್ಕೆ ಅನುಗುಣವಾಗಿ ಗ್ರಾಮೀಣ ಚೌಕಟ್ಟನ್ನು ರೂಪಿಸಲು ಈ ಕಾಯ್ದೆ ಸಿದ್ಧಪಡಿಸಲಾಗಿದೆ. ಸಮೃದ್ಧ ಮತ್ತು ಚೈತನ್ಯಯುತ ಗ್ರಾಮೀಣ ಭಾರತಕ್ಕಾಗಿ ಸಶಕ್ತೀಕರಣ, ಪ್ರಗತಿ, ಸಮನ್ವಯ ಮತ್ತು ಪರಿಪೂರ್ಣತೆಯನ್ನು ಸಾಧಿಸುವ ಉದ್ದೇಶವನ್ನೂ ಇದು ಹೊಂದಿದೆ.



ಈ ಯೋಜನೆಯಲ್ಲಿ ಕೇಂದ್ರದ ಪಾಲನ್ನು ಗಣನೀಯ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಅನುದಾನ ಕಡಿಮೆ ಮಾಡಲೂ ಇದರಲ್ಲಿ ಅವಕಾಶವಿದೆ

ಎಂ.ಎ.ಬೇಬಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ



ನರೇಗಾ ಹೆಸರು ಬದಲಾವಣೆಯಲ್ಲ, ಇದು ಯೋಜನೆಯನ್ನೇ ಅಂತ್ಯಗೊಳಿಸುವ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಹುನ್ನಾರ. ಕೇಂದ್ರವು ಬಡವರ ಹಕ್ಕುಗಳನ್ನು ಒತ್ತಾಯಪೂರ್ವಕವಾಗಿ ಕಿತ್ತುಕೊಳ್ಳುತ್ತಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಮಹಾತ್ಮ ಗಾಂಧಿ ಅವರನ್ನು ಕೊಂದವನಿಗೆ ಹೀರೊ ಪಟ್ಟ ಕಟ್ಟಿ ಪೂಜಿಸಿದಂಥವರು ಇವರು. ಈಗ ಮಹಾತ್ಮನನ್ನು ಇತಿಹಾಸದಿಂದಲೇ ತೆಗೆದುಹಾಕಲು ಮುಂದಾಗಿದ್ದಾರೆ

ಡೆರೆಕ್ ಒಬ್ರಯಾನ್, ಟಿಎಂಸಿ ಸಂಸದ



ಬಿಜೆಪಿಯು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ, ಪ್ರಧಾನಿ ಮೋದಿ ಅವರು ನರೇಗಾವನ್ನು ‘ಗುಂಡಿ ತೋಡುವ ಯೋಜನೆ’ ಎಂದು ಜರಿದಿದ್ದರು. ಕೆಲಸದ ದಿನಗಳನ್ನು ಈಗ ಹೊಸ ಕಾಯ್ದೆ ತಂದಿದ್ದಾರೆ

ಸಪ್ತಗಿರಿ ಉಲಾಕಾ, ಸಂಸದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸದೀಯ ಸ್ಥಾಯಿ ಸಮಿತಿಯ ಮುಖ್ಯಸ್ಥ



ದೇವರು ರುಜು ಮಾಡಿದನು

ವೀರಾಜ್, ದಿವಿತಾ ರೈ

“ಸಿನಿಮಾದ ಶೇ 65ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಐಪಿಎಲ್ ಬಳಿಕ ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆ ಮಾಡುವ ಯೋಚನೆಯಲ್ಲಿದ್ದೇವೆ.
ವೀರಾಜ್, ನಟ



“ನನ್ನ ಸಿನಿಪಯಣದಲ್ಲೊಂದು ವಿಶೇಷ ಸಿನಿಮಾವಿದು. ಚಿತ್ರದ ಫೈಟ್ಸ್ ಮತ್ತು ಹಾಡಿನ ಚಿತ್ರೀಕರಣ ಬಾಕಿ ಇದೆ. ಒಂದು ಪ್ಯಾಥೋ ಹಾಡಿನ ಚಿತ್ರೀಕರಣ ಸದ್ಯದಲ್ಲೇ ನಡೆಯಲಿದೆ. ಮುಂದಿನ ಹಂತದ ಶೂಟಿಂಗ್‌ಗಾಗಿ ವೀರಾಜ್ ವಿದ್ಯಾರ್ಥಿಯ ಪಾತ್ರ ಮಾಡಬೇಕಿದ್ದು, ಇದಕ್ಕಾಗಿ ತೂಕ ಇಳಿಸಿಕೊಳ್ಳಲಿದ್ದಾರೆ.
ಸಿಂಪಲ್ ಸುನಿ, ನಿರ್ದೇಶಕ

ಸಿಂಪಲ್ ಸುನಿಯ ಹೊಸ ಪಯಣ!

‘ಗತವೈಭವ’ ಸಿನಿಮಾದ ಬಿಡುಗಡೆ ಬೆನ್ನಲ್ಲೇ ತಮ್ಮ ಮುಂದಿನ ಸಿನಿಮಾಗಳ ಬಿಡುಗಡೆಗೆ ನಿರ್ದೇಶಕ ಸಿಂಪಲ್ ಸುನಿ ತಯಾರಿ ಆರಂಭಿಸಿದ್ದಾರೆ. ಶೀರ್ಷಿಕೆ ಮೂಲಕವೇ ಕುತೂಹಲ ಹುಟ್ಟಿಸಿರುವ ಸುನಿ ನಿರ್ದೇಶನದ ‘ದೇವರು ರುಜು ಮಾಡಿದನು’ ಸಿನಿಮಾದ ಮೊದಲ ಹಾಡು ‘ಹ್ಯಾಪಿ ಬರ್ತ್‌ಡೇ’ ಇತ್ತೀಚೆಗೆ ಬಿಡುಗಡೆಯಾಗಿದೆ.

ತಮ್ಮ ಸಿನಿಮಾಗಳ ಮೂಲಕ ಚಂದನವನಕ್ಕೆ ಹೊಸ ಕಲಾವಿದರನ್ನು ಪರಿಚಯಿಸುತ್ತಾ ಬಂದಿರುವ ಸುನಿ, ಈ ಚಿತ್ರದ ಮೂಲಕ ರಂಗಭೂಮಿ ಕಲಾವಿದ ವೀರಾಜ್, ಅವರಿಗೆ ಜೋಡಿಯಾಗಿ ಕೀರ್ತಿ ಕೃಷ್ಣ ಹಾಗೂ ದಿವಿತಾ ರೈ ಅವರನ್ನು ತೆರೆಗೆ ತರುತ್ತಿದ್ದಾರೆ. ಇವರೆಲ್ಲರಿಗೂ ಇದು ಚೊಚ್ಚಲ ಸಿನಿಮಾ. ಜೊತೆಗೆ ತಮ್ಮ ಸಿನಿಮಾಗಳಲ್ಲಿ ಕಥೆಯ ಜೊತೆಗೆ ಹಾಡಿಗೂ ಪ್ರಾಮುಖ್ಯತೆ ನೀಡುವ ಸುನಿ, ಮೊದಲ ಬಾರಿಗೆ ಮ್ಯೂಸಿಕಲ್ ಜರ್ನಿ ಕಥೆ ಹೊಂದಿರುವ ಸಿನಿಮಾ ಬರೆದಿದ್ದಾರೆ. ಅವರ ಈ ಹೊಸ ಸಿನಿಮಾದಲ್ಲಿ 12 ಹಾಡುಗಳಿವೆ.

ಸಿನಿಮಾ ಕುರಿತು ಮಾಹಿತಿ ನೀಡಿದ ಸುನಿ, ‘ನನ್ನ ಅಥವಾ ನಾಯಕ ವೀರಾಜ್ ಜನ್ಮದಿನದಂದು ಈ ಹಾಡು ಬಿಡುಗಡೆಗೆ ಯೋಚಿಸಿದ್ದೆವು. ಆದರೆ ಆಗಲಿಲ್ಲ. ಈಗ ಚಿತ್ರತಂಡದ ಯಾರ ಜನ್ಮದಿನವೂ ಇಲ್ಲದ ಸಂದರ್ಭದಲ್ಲಿ ‘ಹ್ಯಾಪಿ ಬರ್ತ್‌ಡೇ’ ಹಾಡು ಬಿಡುಗಡೆಯಾಗಿದೆ. ನಾಯಕನ ಮ್ಯೂಸಿಕಲ್ ಪಯಣವೇ ಈ ಸಿನಿಮಾ. ಇದರಲ್ಲಿ ಒಟ್ಟು 12 ಹಾಡುಗಳಿವೆ. ಇಷ್ಟೊಂದು ಹಾಡುಗಳಿರುವ ನನ್ನ ಮೊದಲ ಸಿನಿಮಾವಿದು. ಈ ಹಾಡನ್ನೇ ಮೊದಲು ಬಿಡುಗಡೆ ಮಾಡಿರುವುದಕ್ಕೆ ಕಾರಣವಿದೆ. ಐಪಿಎಲ್ ಸೇರಿದಂತೆ ನಾನಾ ಕಾರಣಗಳಿಂದ ಈ ಸಿನಿಮಾ ಮುಂದಕ್ಕೆ ಹೋದರೂ, ಯಾರದೇ ಜನ್ಮದಿನ ಬಂದರೂ ಈ ಹಾಡು ಓಡುತ್ತಿರುತ್ತದೆ. ಸಿನಿಮಾದೊಳಗೆ ಈ ಹಾಡು ಬೇರೆ ರೀತಿಯಲ್ಲಿ ಬರಲಿದೆ. ಚಿತ್ರದ ನಾಯಕ ವೀರಾಜ್ ಅದ್ಭುತ ನೃತ್ಯಗಾರ. ಸಿನಿಮಾವೇ ಒಂದು ಭಾಷೆ. ಇದಕ್ಕೆ ಸ್ಫೂರ್ತಿ ಎಂಬಂತೆ ಈ ಹಾಡನ್ನು ಹಾಡಿದ ಆಂಥೋನಿ ದಾಸ್ ಅವರು ಹಾಡು ಬಿಡುಗಡೆಗೂ ಬಂದಿದ್ದಾರೆ’ ಎಂದರು.

ಈ ಹಾಡನ್ನು ನಾಗಾರ್ಜುನ ಶರ್ಮಾ ಬರೆದಿದ್ದು, ಗಾಯಕ ಆಂಥೋನಿ ದಾಸ್ ಹಾಡಿದ್ದಾರೆ. ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಹಾಡಿನಲ್ಲಿ ವೀರಾಜ್ ಹೆಜ್ಜೆ ಹಾಕಿದ್ದಾರೆ. ನಿರ್ದೇಶನದ ಜೊತೆಗೆ ಕಥೆ-ಚಿತ್ರಕಥೆ-ಸಂಭಾಷಣೆಯನ್ನೂ ಸುನಿ ಬರೆದಿದ್ದಾರೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದ್ದು, ಗ್ರೀನ್ ಹೌಸ್ ಮೂವೀಸ್ ಬ್ಯಾನರ್‌ನಡಿ ಗೋವಿಂದ್ ರಾಜ್ ಸಿಟಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.



ಚಿತ್ರದ ಮುಹೂರ್ತ ಕಾರ್ಯಕ್ರಮ

ಸೆಟ್ಟೇರಿದ ಕುಡುಕ ನನ್ಮಕ್ಳು

ನಿರ್ದೇಶಕ ಆಸ್ಕರ್ ಕೃಷ್ಣ ನಿರ್ದೇಶನದ ಎಂಟನೇ ಚಿತ್ರ ‘ಕುಡುಕ ನನ್ಮಕ್ಳು’ ಸಿನಿಮಾ ಇತ್ತೀಚೆಗೆ ಸೆಟ್ಟೇರಿತು. ಚಿತ್ರಸಾಹಿತಿ ವಿ.ನಾಗೇಂದ್ರ ಪ್ರಸಾದ್ ಚಿತ್ರದ ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

‘ತುಂಬಾ ಒಳ್ಳೆಯವರು’ ಎಂಬ ಅಡಿಬರಹವಿರುವ ಈ ಸಿನಿಮಾವನ್ನು ಅರುಣ ಶೆಟ್ಟಿ, ವೈಶಾಲಿ ಮುರಳೀಧರ್ ಕೊಟ್ಟೂರು, ಪಲ್ಲವಿ ಅರುಣ್ ಅಗ್ನಿಹೋತ್ರಿ, ಎಸ್.ಎಚ್. ಬಾಬು ತುಮಕೂರು, ನಿಂಗರಾಜು.ಬಿ, ಲೋಕೇಶ್‌ಎಸ್., ಸಿದ್ದಲಿಂಗಯ್ಯ ಮತ್ತು ರವೀಂದ್ರ ನಾಯಕ್ ಜಂಟಿಯಾಗಿ ಕಲಾ ಭೂಮಿ ಕಂಬೈನ್ಸ್ ಅಡಿಯಲ್ಲಿ ನಿರ್ಮಾಣ ಮಾಡಲಿದ್ದಾರೆ.

‘ನಿರ್ಮಾಪಕರೆಲ್ಲರೂ ಹಲವು ವರ್ಷಗಳಿಂದ ಸ್ನೇಹಿತರು. ಒಮ್ಮೆ ಔಪಚಾರಿಕವಾಗಿ ಪಾರ್ಟಿ ಮಾಡುವಾಗ ಹುಟ್ಟಿಕೊಂಡ ಕಥೆಯೇ ಇದು. ಶೀರ್ಷಿಕೆಯು ಯಾವುದೇ ಕಾರಣಕ್ಕೂ ಮದ್ಯಪಾನಿಗಳಿಗೆ ಬೈಗುಳವಲ್ಲ. ಸಹಜವಾಗಿ ನಾವು ಮಾತನಾಡುವುದನ್ನೇ ಶೀರ್ಷಿಕೆ ಇಡಲಾಗಿದೆ. ಎಲ್ಲಾ ಕುಡುಕರ ಪ್ರತಿನಿಧಿಗಳಾಗಿ 25,30,35 ಹಾಗೂ 40 ವರ್ಷ ವಯಸ್ಸಿನ ನಾಲ್ಕು ಪಾತ್ರಗಳು ಸಾಗುತ್ತವೆ. ಆಯಾ ವಯಸ್ಸಿನಲ್ಲಿ ಅವರ ಚಿಂತನೆಗಳು, ಅಭಿಪ್ರಾಯಗಳು, ನಡವಳಿಕೆ ಏನಿರುತ್ತದೆ? ಕುಡಿತದಿಂದ ದೈಹಿಕವಾಗಿ, ಮಾನಸಿಕವಾಗಿ, ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಆಗುವ ಸಮಸ್ಯೆಗಳು ಏನು ಎನ್ನುವುದನ್ನು ಚಿತ್ರದಲ್ಲಿ ತೋರಿಸಲಾಗುವುದು. ಬೆಂಗಳೂರು, ಮೈಸೂರು, ಮಂಡ್ಯದಲ್ಲಿ ಚಿತ್ರೀಕರಣ ನಡೆಯಲಿದ್ದು, ಜನವರಿ 2ರಿಂದ ಶೂಟಿಂಗ್ ಆರಂಭವಾಗಲಿದೆ’ ಎನ್ನುತ್ತಾರೆ ಆಸ್ಕರ್ ಕೃಷ್ಣ.

‘ಮಜಾಭಾರತ’, ‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಚಂದ್ರಪ್ರಭ, ವಿನೋದ್ ಗೊಬ್ಬರಗಾಲ, ಮಿಮಿಕ್ರಿ ಗೋಪಿ ಮತ್ತು ಸಚಿನ್ ಪುರೋಹಿತ್ ಸಿನಿಮಾದ ಮುಖ್ಯ ಪಾತ್ರದಲ್ಲಿದ್ದು, ಚೈತ್ರಾ ಕೊಟ್ಟೂರು, ಲಯಾ ಕೋಕಿಲ, ಧರಣಿ, ನಿಸರ್ಗ ಮಂಜುನಾಥ್, ಪ್ರಿಯಾಂಕ, ಮಮತಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ಮಂಜುಕವಿ ಸಂಗೀತ, ವಿನಯ್ ಗೌಡ ಛಾಯಾಚಿತ್ರಗ್ರಹಣ, ವೆಂಕಟ್ ಚಿತ್ರಕಥೆ, ವೈಲೆಂಟ್ ವೇಲು ಸಾಹಸ ನಿರ್ದೇಶನ ಚಿತ್ರಕ್ಕಿದೆ.



ಜೀ ಪಾಲಾದ 45 ಸಿನಿಮಾ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ನಟಿಸಿರುವ ‘45’ ಸಿನಿಮಾ ಡಿ.25ರಂದು ತೆರೆಕಾಣುತ್ತಿದೆ. ಸಿನಿಮಾ ಬಿಡುಗಡೆಗೂ ಮುನ್ನವೇ ‘ಜೀ’ ಸಂಸ್ಥೆಯು ಸಿನಿಮಾದ ಡಿಜಿಟಲ್ ಹಾಗೂ ಸ್ಯಾಟಲೈಟ್ ಹಕ್ಕುಗಳನ್ನು ಖರೀದಿಸಿದೆ.

ಸಿನಿಮಾಗೆ ಸೆನ್ಸಾರ್ ಮಂಡಳಿಯು ‘ಯು/ಎ’ ಪ್ರಮಾಣ ಪತ್ರ ನೀಡಿದೆ. ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಕರ್ನಾಟಕದಾದ್ಯಂತ ವಿತರಣೆ ಮಾಡಲಿದೆ. ಯುಗಾಂಡದ ಘೆಟೋ ಕಿಡ್ಸ್ ಜೊತೆಗಿನ ‘ಆ್ಯಫ್ರೊ ಟಪಾಂಗ್’ ಹಾಡಿನ ಮೂಲಕ ಸಿನಿಮಾದ ಪ್ರಚಾರ ಆರಂಭಿಸಿದ್ದ ಚಿತ್ರತಂಡ ಸೋಮವಾರ(ಡಿ.15) ಟ್ರೇಲರ್ ಬಿಡುಗಡೆ ಮಾಡಿದೆ. ನಟ ರಿಷಬ್ ಶೆಟ್ಟಿ ಟ್ರೇಲರ್ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ‘ನನ್ನ ಮೊದಲ ನಿರ್ದೇಶನದ ಸಿನಿಮಾಗೆ ಅರ್ಜುನ್ ಜನ್ಯ ಅವರೇ ಸಂಗೀತ ನಿರ್ದೇಶಕರಾಗಿದ್ದರು. ತಮ್ಮ ನಿರ್ದೇಶನದ ಮೊದಲ ಸಿನಿಮಾದಲ್ಲೇ ಒಂದು ದೊಡ್ಡ ಪ್ರಾಜೆಕ್ಟ್‌ನ ಸವಾಲು ಕೈಗೆತ್ತಿಕೊಂಡು ಅರ್ಜುನ್ ಅವರು ಅದನ್ನು ಗೆದ್ದಿದ್ದಾರೆ. ನನ್ನ ನೆಚ್ಚಿನ ನಟರಾದ ಶಿವಣ್ಣ ಹಾಗೂ ಉಪೇಂದ್ರ ಅವರ ಕಾಂಬಿನೇಷನ್‌ನಲ್ಲಿ ಸಿನಿಮಾ ಮೂಡಿಬಂದಿದೆ. ಅವರನ್ನು ತೆರೆಯಲ್ಲಿ ನೋಡುವುದೇ ಹಬ್ಬ’ ಎಂದಿದ್ದಾರೆ ರಿಷಬ್.

‘ಪ್ರೀತ್ಸೆ’, ‘ಲವ ಕುಶ’ ಚಿತ್ರಗಳಲ್ಲಿ ಉಪೇಂದ್ರ ಜೊತೆ ಶಿವರಾಜ್‌ಕುಮಾರ್ ನಟಿಸಿದ್ದರು. ರಾಜ್ ಬಿ. ಶೆಟ್ಟಿ ಜೊತೆಗೆ ಇದು ಅವರ ಮೊದಲ ಚಿತ್ರ. ಎಂ. ರಮೇಶ್ ರೆಡ್ಡಿ ‘45’ ಸಿನಿಮಾವನ್ನು ನಿರ್ಮಿಸಿದ್ದಾರೆ.



ಶರತ್ ಚಕ್ರವರ್ತಿ ಮತ್ತು ಶಿವರಾಜ್ ಕೆ.ಆರ್.ಪೇಟೆ

ಶಿವರಾಜ್ ಕೆ.ಆರ್.ಪೇಟೆ ಸಿನಿಮಾ ಪೂರ್ಣ

ಶರತ್ ಚಕ್ರವರ್ತಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ನಟ ಶಿವರಾಜ್ ಕೆ.ಆರ್.ಪೇಟೆ ಮುಖ್ಯಭೂಮಿಕೆಯಲ್ಲಿರುವ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ.

ಈ ಸಿನಿಮಾದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದ್ದು, ಲಲಿತಾ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. ಚಿತ್ರತಂಡವು ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸ ಆರಂಭಿಸಿದೆ.

ಹಳ್ಳಿಗಾಡಿನ ಸೊಗಡಿನ ಈ ಸಿನಿಮಾವನ್ನು ಬೆಂಗಳೂರು, ಹಾಸನ ಸುತ್ತಮುತ್ತಲ ಪ್ರದೇಶಗಳಲ್ಲಿ ಮೂರು ಹಂತಗಳಲ್ಲಿ ಚಿತ್ರೀಕರಿಸಲಾಗಿದೆ. ನಿರೀಕ್ಷ ರಾವ್ ನಾಯಕಿಯಾಗಿರುವ ಈ ಚಿತ್ರದಲ್ಲಿ ಜಹಂಗೀರ್, ಬಲ ರಾಜವಾಡಿ ಸೇರಿದಂತೆ ಹಲವು ಕಲಾವಿದರಿದ್ದಾರೆ. ತಾಂತ್ರಿಕ ವರ್ಗದ ಮಾಹಿತಿಯನ್ನು ಮುಂದಿನ ಹಂತಗಳಲ್ಲಿ ಪರಿಚಯಿಸಲಾಗುವುದು ಎಂದಿದೆ ಚಿತ್ರತಂಡ. ಚಿತ್ರದ ಶೀರ್ಷಿಕೆಯನ್ನೂ ಸದ್ಯದಲ್ಲೇ ಅನಾವರಣಗೊಳಿಸಲಾಗುವುದು ಎಂದಿದ್ದಾರೆ ನಿರ್ದೇಶಕ ಶರತ್ ಚಕ್ರವರ್ತಿ.

ಪಹಲ್ಗಾಮ್: ದೋಷಾರೋಪ ಸಲ್ಲಿಕೆ

ಲಷ್ಕರ್–ಎ–ತಯಬಾ ಕಮಾಂಡರ್ ಸಾಜಿದ್ ಜಾಟ್ ಪ್ರಮುಖ ಸಂಚುಕೋರ

ಶ್ರೀನಗರ: ಏಪ್ರಿಲ್ 22ರಂದು ನಡೆದ ಪಹಲ್ಗಾಮ್ ದಾಳಿಯ ತನಿಖೆ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಮಂಗಳವಾರ 1,597 ಪುಟಗಳ ದೋಷಾರೋಪ ಪಟ್ಟಿಯನ್ನು ಜಮ್ಮುವಿನಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತಯಬಾ (ಎಲ್‌ಇಟಿ) ಕಮಾಂಡರ್ ಸಾಜಿದ್ ಜಾಟ್ ಸೇರಿದಂತೆ ಏಳು ಆರೋಪಿಗಳನ್ನು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ. ಪಾಕಿಸ್ತಾನ ಪಂಜಾಬ್ ಪ್ರಾಂತ್ಯದ ನಿವಾಸಿಯಾಗಿರುವ ಸಾಜಿದ್, ಪಾಕಿಸ್ತಾನದ ಹ್ಯಾಂಡ್ಲರ್ ಆಗಿದ್ದು, ಈತನೇ ದಾಳಿಯ ಪ್ರಮುಖ ಸಂಚುಕೋರ ಎಂದು ಉಲ್ಲೇಖಿಸಲಾಗಿದೆ.

ಅಲ್ಲದೇ ಎಲ್‌ಇಟಿ ಮತ್ತು ಅದರ ಸಹ ಸಂಘಟನೆ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಉಗ್ರರು ಈ ದಾಳಿ ನಡೆಸಿದ್ದಾರೆ ಎಂದು ತಿಳಿಸಲಾಗಿದ್ದು, ಈ ಮೂಲಕ ದಾಳಿಯ ಹಿಂದಿನ ಪಾಕಿಸ್ತಾನದ ಪಿತೂರಿಯನ್ನು ಔಪಚಾರಿಕವಾಗಿ ಎನ್‌ಐಎ ಬಹಿರಂಗಪಡಿಸಿದೆ.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಶಸ್ತ್ರಾಸ್ತ್ರ ಕಾಯ್ದೆ, ಕಾನೂನು ಬಾಹಿರ ಚಟುವಟಿಕೆ (ತಡೆ) ಕಾಯ್ದೆ ಹಾಗೂ ಭಾರತದ ವಿರುದ್ಧದ ಯುದ್ಧ ನಡೆಸುವ ಅಪರಾಧಕ್ಕೆ ಸಂಬಂಧಿಸಿದ ಕಾಯ್ದೆಗಳಡಿ ಎಲ್‌ಇಟಿ, ಟಿಆರ್‌ಎಫ್ ವಿರುದ್ಧ ಎನ್‌ಐಎ ಆರೋಪಗಳನ್ನು ಹೊರಿಸಿದೆ.



ದೋಷಾರೋಪ ಪಟ್ಟಿ ಸಲ್ಲಿಸಲು ಸಾಕ್ಷ್ಯಗಳ ಸಮೇತ ಜಮ್ಮುವಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಅಧಿಕಾರಿಗಳು ಸೋಮವಾರ ಹಾಜರಾದರು

ಪಿಟಿಐ ಚಿತ್ರ

ಘಟನೆಯ ವಿವರ

ಏಪ್ರಿಲ್ 22: ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ, 25 ಮಂದಿ ಪ್ರವಾಸಿಗರು, ಒಬ್ಬ ಸ್ಥಳೀಯ ವ್ಯಕ್ತಿಯ ಹತ್ಯೆ
ಮೇ7–10: ಭಾರತ–ಪಾಕಿಸ್ತಾನದ ನಡುವೆ ಸಂಘರ್ಷ
ಜೂನ್ 22: ದಾಳಿಕೋರರಿಗೆ ನೆರವು ನೀಡಿದ್ದ ಇಬ್ಬರು ಸ್ಥಳೀಯರ ಬಂಧನ
ಜುಲೈ 28: ಆಪರೇಷನ್ ಮಹಾದೇವ ಕಾರ್ಯಾಚರಣೆಯಲ್ಲಿ ಮೂವರು ಉಗ್ರರ ಹತ್ಯೆ

ಪಹಲ್ಗಾಮ್‌ನಲ್ಲಿ ದಾಳಿ ನಡೆಸಲು ರೂಪಿಸಲಾಗಿದ್ದ ಯೋಜನೆ ಮತ್ತು ಅದಕ್ಕಾಗಿ ಗಡಿಯಾಚೆಯಿಂದ ದೊರೆತಿರುವ ಬೆಂಬಲದ ವಿವರವನ್ನೂ ದೋಷಾರೋಪ ಪಟ್ಟಿ ಒಳಗೊಂಡಿದೆ. ಜತೆಗೆ ಕಳೆದ 8 ತಿಂಗಳ ತನಿಖೆಯಲ್ಲಿ ಸಂಗ್ರಹಿಸಿದ ವಿಧಿವಿಜ್ಞಾನ, ಡಿಜಿಟಲ್ ಹಾಗೂ ತಾಂತ್ರಿಕ ಸಾಕ್ಷ್ಯಗಳನ್ನು ಒಳಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿಕೋರರಿಗೆ ನೆರವು ಒದಗಿಸಿದ್ದ ಆರೋಪದಲ್ಲಿ ಬಂಧನಕ್ಕೀಡಾಗಿರುವ ಪಹಲ್ಗಾಮ್‌ನ ಸ್ಥಳೀಯ ನಿವಾಸಿಗಳಾದ ಪರ್ವೇಜ್ ಅಹ್ಮದ್, ಬಶೀರ್ ಅಹ್ಮದ್ ಜೋಥರ್ ಹೆಸರನ್ನೂ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಬಂಧಿತರು ತನಿಖೆಯ ವೇಳೆ, ದಾಳಿಕೋರರ ಗುರುತನ್ನು ಸ್ಪಷ್ಟಪಡಿಸುವುದರ ಜತೆಗೆ ಅವರು ಗಡಿ ನಿಯಂತ್ರಣ ರೇಖೆ ದಾಟಿ ಭಾರತದ ಒಳನುಸುಳಿದ್ದ ಪಾಕಿಸ್ತಾನಿ ಪ್ರಜೆಗಳು ಎಂಬುದನ್ನು ದೃಢಪಡಿಸಿದ್ದಾರೆ ಎಂದೂ ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರದ ಪಹಲ್ಗಾಮ್ ಪಟ್ಟಣದ ಬೈಸರನ್ ಕಣಿವೆಯಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ಏಪ್ರಿಲ್ 22ರಂದು ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದರು. ಘಟನೆಯಲ್ಲಿ 25 ಮಂದಿ ಪ್ರವಾಸಿಗರು ಹಾಗೂ ಒಬ್ಬ ಸ್ಥಳೀಯ ನಿವಾಸಿ ಮೃತಪಟ್ಟಿದ್ದರು. ಈ ದಾಳಿ ನಡೆದ ಕೆಲವೇ ವಾರಗಳಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ನಾಲ್ಕು ದಿನಗಳ ಕಾಲ ಯುದ್ಧವೂ ನಡೆದಿತ್ತು.

ಹತ್ಯೆಗೀಡಾದ ಉಗ್ರರ ಹೆಸರು ಉಲ್ಲೇಖ: ಪಹಲ್ಗಾಮ್ ದಾಳಿಯ ಬಳಿಕ ಭಾರತೀಯ ಭದ್ರತಾ ಪಡೆಗಳು ಶ್ರೀನಗರದ ಹೊರವಲಯದಲ್ಲಿರುವ ದಾಚಿಗಾಮ್‌ನಲ್ಲಿ ‘ಆಪರೇಷನ್ ಮಹಾದೇವ’ ಹೆಸರಿನ ಕಾರ್ಯಾಚರಣೆ ನಡೆಸಿ, ಮೂವರು ಉಗ್ರರನ್ನು ಹೊಡೆದುರುಳಿಸಿದ್ದರು. ಹತ್ಯೆಗೀಡಾದ ಉಗ್ರರನ್ನು ಎಲ್‌ಇಟಿ ಭಯೋತ್ಪಾದಕರಾದ ಫೈಸಲ್ ಜಾಟ್ ಅಲಿಯಾಸ್ ಸುಲೇಮಾನ್ ಶಾ, ಹಬೀಬ್ ತಹೀರ್ ಅಲಿಯಾಸ್ ಜಿಬ್ರಾನ್, ಹಮ್ಜಾ ಅಫ್ಘಾನಿ ಎಂದು ಗುರುತಿಸಲಾಗಿತ್ತು. ಈ ಮೂವರ ಹೆಸರನ್ನೂ ಎನ್‌ಐಎ ತನ್ನ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ.

ಭಯೋತ್ಪಾದನೆಗೆ ಪಾಕ್ ಪ್ರಾಯೋಜಕತ್ವ

‘ದಾಳಿಕೋರರಿಗೆ ದಕ್ಷಿಣ ಕಾಶ್ಮೀರದಲ್ಲಿ ನೆರವು ದೊರೆತಿತ್ತು. ಹೀಗಾಗಿ ಅವರು ಪಹಲ್ಗಾಮ್‌ನಲ್ಲಿ ದಾಳಿ ನಡೆಸಿ, ಅಲ್ಲಿಂದ ಪರಾರಿಯಾಗಲು ಸಾಧ್ಯವಾಗಿತ್ತು. ಈ ಪ್ರಕರಣದ ತನಿಖೆಯಿಂದಾಗಿ ಪಾಕಿಸ್ತಾನವು ಜಮ್ಮು–ಕಾಶ್ಮೀರದಲ್ಲಿ ಟಿಆರ್‌ಎಫ್ ರೀತಿಯ ಉಗ್ರ ಸಂಘಟನೆಗಳನ್ನು ಬಳಸಿಕೊಂಡು ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸುವ ಕೃತ್ಯ ಮುಂದುವರೆಸುತ್ತಿದೆ ಎಂಬುದು ತಿಳಿದುಬಂದಿದೆ. ಕಣಿವೆಯಲ್ಲಿ ಸಂವಿಧಾನದ 370ನೇ ವಿಧಿ ರದ್ದಾದ ಬಳಿಕ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳಿಗೆ ಸ್ಥಳೀಯ ಸಂಘಟನೆಗಳೆಂಬ ಬಣ್ಣ ಹಚ್ಚಲು ಟಿಆರ್‌ಎಫ್ ಮಾದರಿಯ ಸಂಘಟನೆಗಳನ್ನು ರಚಿಸಲಾಗಿದೆ ಎಂದೂ ಎನ್‌ಐಎ ತಿಳಿಸಿದೆ.

ದಾಂದಲೆ; ಐವರ ಬಂಧನ ಆರು ಮಂದಿಗೆ ಸಮನ್ಸ್

ಕೋಲ್ಕತ್ತ: ಇಲ್ಲಿನ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ದಿಗ್ಗಜ, ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ತಮ್ಮ ಕಾರ್ಯಕ್ರಮವನ್ನು ಮೊಟಕುಗೊಳಿಸಿ, ಹಠಾತ್ತನೇ ನಿರ್ಗಮಿಸಿದ್ದರಿಂದ ನಿರಾಸೆಗೊಂಡ ಅವರ ಅಭಿಮಾನಿಗಳು ಆಕ್ರೋಶಗೊಂಡು ದಾಂದಲೆ ನಡೆಸಿದ್ದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮ ಆಯೋಜಿಸಿದ್ದ ಆರು ಮಂದಿಗೆ ಇಲ್ಲಿನ ಪೊಲೀಸರು ಸಮನ್ಸ್ ನೀಡಿದ್ದಾರೆ.

ಪ್ರೇಕ್ಷಕರ ಆಕ್ರೋಶದಿಂದ ಕ್ರೀಡಾಂಗಣದಲ್ಲಿ ನಡೆದ ದಾಂದಲೆಯಿಂದ ಅಂದಾಜು ₹2 ಕೋಟಿ ನಷ್ಟ ಉಂಟಾಗಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದು, ಈ ಸಂಬಂಧ ಐದು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಲಲ್ತುದಾಸ್ ಸೇರಿದಂತೆ ಕಾರ್ಯಕ್ರಮದ ಆಯೋಜಕರಿಗೆ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದಾರೆ. ಮುಖ್ಯ ಆಯೋಜಕರಾದ ಶತಾದ್ರು ದತ್ತಾ ಅವರನ್ನು ಈಗಾಗಲೇ ಬಂಧಿಸಲಾಗಿದೆ.

ರಾಜ್ಯಪಾಲರಿಂದ ಕೇಂದ್ರಕ್ಕೆ ವರದಿ ಸಲ್ಲಿಕೆ

ಕೋಲ್ಕತ್ತ (ಪಿಟಿಐ): ‘ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ನಡೆದ ಅವ್ಯವಸ್ಥೆಯು ಆಡಳಿತ ವೈಫಲ್ಯವಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪರವಾದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದು ರಾಜ್ಯಪಾಲ ಸಿ.ವಿ ಆನಂದ ಬೋಸ್ ತಿಳಿಸಿದ್ದಾರೆ.

ಇಲ್ಲಿನ ಲೋಕಭವನದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಕ್ರೀಡಾಂಗಣದಲ್ಲಿ ನಡೆದ ಘಟನೆಯಿಂದ ಎಲ್ಲೆಡೆಯಿರುವ ಫುಟ್‌ಬಾಲ್ ಅಭಿಮಾನಿಗಳ ಭಾವನೆಗಳಿಗೆ ತೀವ್ರ ನೋವುಂಟಾಗಿದೆ. ಜನಸಾಮಾನ್ಯನ, ಅದರಲ್ಲೂ ಫುಟ್‌ಬಾಲ್ ಅಭಿಮಾನಿಯನ್ನು ತೀವ್ರವಾಗಿ ಗಾಸಿಗೊಳಿಸಿದೆ’ ಎಂದು ತಿಳಿಸಿದ್ದಾರೆ.

‘ಜನಪರವಾದ ವರದಿಯನ್ನು ನಾನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದ್ದು, ರಾಜ್ಯ ಸರ್ಕಾರಕ್ಕೂ ಸಲಹೆ ನೀಡಲಿದ್ದೇನೆ’ ಎಂದು ಹೇಳಿದ್ದಾರೆ.

ಪಿಐಎಲ್ ದಾಖಲಿಸಲು ಅನುಮತಿ: ಕ್ರೀಡಾಂಗಣದಲ್ಲಿ ನಡೆದ ಅವ್ಯವಸ್ಥೆ ಕುರಿತಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಲು ಕಲ್ಕತ್ತ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸುಜಯ್ ಪೌಲ್ ಅನುಮತಿ ನೀಡಿದ್ದಾರೆ.

ಪ್ರಕರಣದ ತನಿಖೆಯನ್ನು ತಕ್ಷಣವೇ ಕೇಂದ್ರೀಯ ತನಿಖಾ ಸಂಸ್ಥೆಗೆ (ಸಿಬಿಐ) ವಹಿಸಲು ನ್ಯಾಯಾಲಯವು ಮಧ್ಯಪ್ರವೇಶಿಸುವಂತೆ ಕೋರಿ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ, ವಕೀಲರಾದ ಸಭ್ಯಸಾಚಿ ಚಟ್ಟೋಪಾಧ್ಯಾಯ ಹಾಗೂ ಮೈನಕ್ ಘೋಷಲ್ ಅವರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ಪರಿಗಣಿಸಿರುವ ಹೈಕೋರ್ಟ್, ವಿಚಾರಣೆಯನ್ನು ಮುಂದಿನ ವಾರಕ್ಕೆ ನಿಗದಿಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಬಿಜೆಪಿಯಲ್ಲಿ ಕಾರ್ಯಕರ್ತರ ಏಳ್ಗೆ: ನಿತಿನ್ ನಬೀನ್



ನಿತಿನ್ ನಬಿನ್

ಪಟ್ನಾ (ಪಿಟಿಐ): ‘ಕಾರ್ಯಕರ್ತರ ಏಳ್ಗೆಗೆ ಅವಕಾಶವಿರುವ ಏಕೈಕ ರಾಜಕೀಯ ಪಕ್ಷ ಬಿಜೆಪಿ’ ಎಂದು ಬಿಜೆಪಿಯ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷ ನಿತಿನ್ ನಬೀನ್ ಸೋಮವಾರ ಇಲ್ಲಿ ಹೇಳಿದರು.

‘ನನಗೆ ದೊರೆತ ಉನ್ನತ ಹುದ್ದೆಯು ಪಕ್ಷದ ಆಶೀರ್ವಾದ’ ಎಂದು ಇದೇ ಸಂದರ್ಭ ತಿಳಿಸಿದರು.

‘ಬಿಜೆಪಿಯು ಯುವಕರಿಗೆ ಪ್ರೋತ್ಸಾಹ ನೀಡುವ ಜೊತೆಗೆ ದೊಡ್ಡ ಗುರಿ ಸಾಧನೆಗೆ ಸೂಕ್ತ ಮಾರ್ಗದರ್ಶನ ನೀಡಲಿದೆ. ತನ್ನ ಕಟ್ಟಕಡೆಯ ಕಾರ್ಯಕರ್ತನಿಗೂ ಸೂಕ್ತ ಅವಕಾಶ ಕೊಡಲಿದೆ’ ಎಂದು ಹೇಳಿದರು.

‘ಸಂಘಟನೆಯನ್ನು ಬಲಪಡಿಸಲಿಕ್ಕಾಗಿ ಪಕ್ಷದ ಕಾರ್ಯಕರ್ತರು ತಾಳ್ಮೆಯಿಂದ ಕೆಲಸ ಮಾಡಬೇಕು’ ಎಂದರು.

ರಾಣಾ ಕಪೂರ್ ಪ್ರಶ್ನಿಸಿದ ಇ.ಡಿ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಗ್ರೂಪ್ ಕಂಪನಿಗಳ ವಿರುದ್ಧದ ಹಣದ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯ ಭಾಗವಾಗಿ ಯೆಸ್ ಬ್ಯಾಂಕ್ ಸಹ ಸಂಸ್ಥಾಪಕ ರಾಣಾ ಕಪೂರ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಪ್ರಶ್ನಿಸಿದೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ರಾಣಾ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಕಪೂರ್ ಮತ್ತು ಅನಿಲ್ ಅಂಬಾನಿ ನಡುವೆ ಸಂಶಯಾಸ್ಪದ ವಹಿವಾಟು ನಡೆದಿದೆ ಎಂದು ಇ.ಡಿ ಅಧಿಕಾರಿಗಳು ಶಂಕಿಸಿದ್ದಾರೆ.

ಜಾರಿ ನಿರ್ದೇಶನಾಲಯದ ವಿಚಾರಣೆ ಮತ್ತು ಸಂಬಂಧಿತ ಆರೋಪಗಳ ಬಗ್ಗೆ ರಾಣಾ ಅಥವಾ ಅವರ ವಕೀಲರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಕಾಂಗ್ರೆಸ್ ಅಧಿಕಾರ ತ್ಯಜಿಸಲಿ’

ಹೈದರಾಬಾದ್ (ಪಿಟಿಐ): ‘ಮತಕಳವಿನ’ ಬಗ್ಗೆ ಆರೋಪ ಮಾಡುತ್ತಿರುವ ಕಾಂಗ್ರೆಸ್ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ಬಂಡಿ ಸಂಜಯ ಕುಮಾರ್, ‘ತೆಲಂಗಾಣ ಮತ್ತು ಕರ್ನಾಟಕದಲ್ಲಿ ಅಧಿಕಾರ ತ್ಯಜಿಸುವ ಮೂಲಕ ಕಾಂಗ್ರೆಸ್ ಪಕ್ಷ ಮಾದರಿ ನಡೆ ಅನುಸರಿಸಲಿ’ ಎಂದಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸುಳ್ಳು ಆರೋಪಗಳನ್ನು ಮಾಡುವ ಮೂಲಕ ಇಡೀ ದೇಶದ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ಕಾಂಗ್ರೆಸ್ ಪಕ್ಷವು ನಿಜವಾಗಿಯೂ ಚುನಾವಣೆಗಳಲ್ಲಿ ಮತಕಳವು ನಡೆದಿದೆ ಎಂದು ನಂಬಿದರೆ, ತೆಲಂಗಾಣ ಮತ್ತು ಕರ್ನಾಟಕದಲ್ಲಿ ಅಧಿಕಾರವನ್ನು ತ್ಯಜಿಸಿ ಪೂರ್ವನಿದರ್ಶನ ಸ್ಥಾಪಿಸಲಿ. ಏಕೆಂದರೆ, ಯಾವ ಚುನಾವಣಾ ಆಯೋಗದ ವಿರುದ್ಧ ಆರೋಪಗಳನ್ನು ಮಾಡುತ್ತಿರುವಿರಾ, ಅದೇ ಆಯೋಗ ನಡೆಸಿದ ಚುನಾವಣೆಯಲ್ಲಿ ಗೆದ್ದು ಅಲ್ಲಿ ನೀವು ಸರ್ಕಾರ ರಚಿಸಿದ್ದೀರಿ’ ಎಂದು ಹೇಳಿದರು.

‘ನೀವು ಗೆದ್ದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಗಳಿ, ಸೋತಾಗ ‘ಮತಕಳವು’ ಎಂದು ಆರೋಪಿಸುವುದು ಸರಿಯಲ್ಲ’ ಎಂದು ಟೀಕಿಸಿದರು.

ಸಿಐಸಿಯಾಗಿ ಗೋಯಲ್

ನವದೆಹಲಿ (ಪಿಟಿಐ): ಮಾಜಿ ಐಎಎಸ್ ಅಧಿಕಾರಿ ರಾಜ್ ಕುಮಾರ್ ಗೋಯಲ್ ಅವರು ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರಾಗಿ (ಸಿಐಸಿ) ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಅವರೊಂದಿಗೆ ಇತರ ಎಂಟು ಮಂದಿಯನ್ನು ಮಾಹಿತಿ ಆಯುಕ್ತರನ್ನಾಗಿ ನೇಮಿಸಲಾಗಿದೆ. ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗೋಯಲ್ ಮತ್ತು ಇತರ ಆಯುಕ್ತರಿಗೆ ಪ್ರಮಾಣ ವಚನ ಬೋಧಿಸಿದರು.

ಜಯ ವರ್ಮಾ ಸಿನ್ಹಾ, ಸ್ವಾಗತ್ ದಾಸ್, ಸಂಜೀವ್ ಕುಮಾರ್ ಜಿಂದಾಲ್, ಸುರೇಂದ್ರ ಸಿಂಗ್ ಮೀನಾ ಮತ್ತು ಖುಷ್ವಂತ್ ಸಿಂಗ್ ಸೇಥಿ ಮತ್ತು ಅಶುತೋಷ್ ಚತುರ್ವೇದಿ, ಸುಧಾ ರಾಣಿ ರೇಲಂಗಿ ಹಾಗೂ ಹಿರಿಯ ಪತ್ರಕರ್ತರಾದ ಪಿ.ಆರ್. ರಮೇಶ್ ಅವರನ್ನು ಮಾಹಿತಿ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

ಕಾಂಗ್ರೆಸ್ ನಾಯಕತ್ವ ಟೀಕಿಸಿದ್ದ ಮಾಜಿ ಶಾಸಕನ ಅಮಾನತು

ಭುವನೇಶ್ವರ (ಪಿಟಿಐ): ಒಡಿಶಾ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮಾಜಿ ಶಾಸಕ ಮೊಹಮ್ಮದ್ ಮೊಕೀಮ್ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ ಎಂದು ಪಕ್ಷದ ನಾಯಕರೊಬ್ಬರು ಸೋಮವಾರ ತಿಳಿಸಿದ್ದಾರೆ.

‘ಪಕ್ಷ ವಿರೋಧಿ ಚಟುವಟಿಕೆಗಾಗಿ ಮೊಕೀಮ್ ಅವರನ್ನು ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡುವ ಪ್ರಸ್ತಾವವನ್ನು ಎಐಸಿಸಿ ಅನುಮೋದಿಸಿದೆ’ ಎಂದು ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ (ಒಪಿಸಿಸಿ) ಅಧ್ಯಕ್ಷ ಭಕ್ತ ಚರಣದಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾರಾಬತಿ– ಕಟಕ್ ಕ್ಷೇತ್ರದ ಮಾಜಿ ಶಾಸಕ ಮೊಕೀಮ್ ಅವರು ಈಚೆಗೆ ಎಐಸಿಸಿ ನಾಯಕತ್ವದ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರಲ್ಲದೆ, ಪಕ್ಷದ ನಾಯಕಿ ಸೋನಿಯಾ ಗಾಂಧಿಗೆ ಪತ್ರವನ್ನು ಬರೆದಿದ್ದರು.

‘ರಾಹುಲ್ ಗಾಂಧಿ ಅವರನ್ನು ಕಾರ್ಯಕರ್ತರು ಭೇಟಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸ್ವತಃ ನಾನೇ ಕಳೆದ 3 ವರ್ಷಗಳಿಂದ ಪ್ರಯತ್ನಿಸುತ್ತಿದ್ದರೂ, ಅವರ ಭೇಟಿಗೆ ಅವಕಾಶ ಸಿಗುತ್ತಿಲ್ಲ’ ಎಂದು ಅವರು ಪತ್ರದಲ್ಲಿ ಟೀಕಿಸಿದ್ದರು.

ಐವರು ನೋಡಲ್ ಅಧಿಕಾರಿಗಳ ನೇಮಕ

ಕೋಲ್ಕತ್ತ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಪೂರ್ವಭಾವಿಯಾಗಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳ ಮೊದಲ ಹಂತದ ಪರಿಶೀಲನೆಗಾಗಿ ಚುನಾವಣಾ ಆಯೋಗವು ಐದು ಮಂದಿಯನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಿದೆ.

‘ಈ ಎಲ್ಲಾ ಅಧಿಕಾರಿಗಳು ಬೇರೆ ರಾಜ್ಯಕ್ಕೆ ಸೇರಿದವರು’ ಎಂದು ಆಯೋಗವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಆಯೋಗ ಜಾರಿ ಮಾಡಿದ ಕಾನೂನಿನಂತೆ, ಇವಿಎಂಗಳಲ್ಲಿ ಪ್ರತಿ ಅಭ್ಯರ್ಥಿಯ ಭಾವಚಿತ್ರ ಪ್ರಕಟಿಸಲಾಗುತ್ತದೆ.

ನೋಡಲ್ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ಮೊದಲ ಹಂತದಲ್ಲಿ ಬೇರೆ ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ನಿಯೋಜಿಸಲಾಗುತ್ತದೆ.

ಅಧಿಕಾರಿಗಳಾದ ಸಾನಿಯಾ ಕಯೆಮ್ ಮಿಜೆ (ಉಪ ಸಿಇಒ ಅರುಣಾಚಲಪ್ರದೇಶ), ಯೋಗೇಶ್ ಗೋಸಾವಿ (ಉಪ ಸಿಇಒ ಮಹಾರಾಷ್ಟ್ರ) ಪಿ.ಕೆ. ಬೊರೊ (ಹೆಚ್ಚುವರಿ ಸಿಇಒ ಮೇಘಾಲಯ), ಇಥೆಲ್ ರೊಥಂಗ್‌ಪುಜಿ (ಜಂಟಿ ಸಿಇಒ ಮಿಝೋರಾಂ) ಹಾಗೂ ಕಾನಿಷ್ಕಾ ಕುಮಾರ್ (ಅಧೀನ ಕಾರ್ಯದರ್ಶಿ, ಕೇಂದ್ರ ಚುನಾವಣಾ ಆಯೋಗ) ಅವರನ್ನು ನೇಮಿಸಲಾಗಿದೆ.

2021ರ ಚುನಾವಣೆ ಸಂದರ್ಭದಲ್ಲಿ ಪಶ್ಚಿಮ ಬಂಗಾಳದಲ್ಲಿ 80 ಸಾವಿರ ಮತಗಟ್ಟೆಗಳಿದ್ದವು. ಈ ಬಾರಿ ಇನ್ನೂ 10 ಸಾವಿರ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಜಾಬ್ ಎಳೆದ ನಿತೀಶ್

ಪಟ್ನಾ (ಪಿಟಿಐ): ಬಿಹಾರದಲ್ಲಿ ಸೋಮವಾರ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವೈದ್ಯೆಯೊಬ್ಬರ ಮುಖದಿಂದ ಹಿಜಾಬ್ ತೆಗೆದಿದ್ದು ವಿವಾದಕ್ಕೆ ಕಾರಣವಾಗಿದೆ.

ಹೊಸದಾಗಿ ನೇಮಕಗೊಂಡ ಆಯುಷ್ ವೈದ್ಯರಿಗೆ ನೇಮಕಾತಿ ಪತ್ರ ನೀಡುವ ಕಾರ್ಯಕ್ರಮದಲ್ಲಿ ಈ ಘಟನೆ ನಡೆದಿದ್ದು, ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ವೈದ್ಯೆ ನುಸ್ರತ್ ಪರ್ವೀನ್ ಅವರು ಮುಖವನ್ನು ಮರೆಮಾಚುವ ರೀತಿಯಲ್ಲಿ ಹಿಜಾಬ್ ಧರಿಸಿ ನೇಮಕಾತಿ ಪತ್ರ ಸ್ವೀಕರಿಸಲು ಬಂದಿದ್ದರು. ಅವರಿಗೆ ನೇಮಕಾತಿ ಪತ್ರ ನೀಡುವಾಗ ನಿತೀಶ್, ಮುಖದ ಮೇಲಿನ ಬಟ್ಟೆಯನ್ನು ಏಕಾಏಕಿ ಹಿಡಿದೆಳೆದಿದ್ದಾರೆ.

ಸ್ಥಳದಲ್ಲಿದ್ದ ಅಧಿಕಾರಿಯೊಬ್ಬರು ಈ ವೇಳೆ ವೈದ್ಯೆಯನ್ನು ಹಿಂದಕ್ಕೆ ಎಳೆಯುವ ಹಾಗೂ ವೇದಿಕೆಯಲ್ಲಿದ್ದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ನಿತೀಶ್ ಅವರನ್ನು ತಡೆಯಲು ಮುಂದಾದ ದೃಶ್ಯ ವಿಡಿಯೊದಲ್ಲಿದೆ.

ಆರ್‌ಜೆಡಿ ಮತ್ತು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ವಿಡಿಯೊ ಕ್ಲಿಪ್ ಹಂಚಿಕೊಂಡಿದ್ದು, ಜೆಡಿಯು ಮುಖ್ಯಸ್ಥರ ‘ಮಾನಸಿಕ ಆರೋಗ್ಯ ಹದಗೆಟ್ಟಿರುವುದಕ್ಕೆ’ ಈ ಘಟನೆ ಹೊಸ ಪುರಾವೆಯಾಗಿದೆ ಎಂದು ವ್ಯಂಗ್ಯವಾಡಿವೆ.

‘ನಲುಗುತ್ತಿದೆ ವರದಕ್ಷಿಣೆ ವಿರೋಧಿ ಕಾನೂನು’

ನವದೆಹಲಿ (ಪಿಟಿಐ): ಅಸ್ತಿತ್ವದಲ್ಲಿರುವ ವರದಕ್ಷಿಣೆ ವಿರೋಧಿ ಕಾನೂನು ಪರಿಣಾಮಕಾರಿಯಾಗಿಲ್ಲದ ಕಾರಣ ದುರ್ಬಳಕೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿತು.

ಇದೇ ಸಂದರ್ಭದಲ್ಲಿ, ‘ವರದಕ್ಷಿಣೆ ಎಂಬ ಕರಾಳ ಪದ್ಧತಿ ಈಗಲೂ ವ್ಯಾಪಕವಾಗಿದೆ. ಇದನ್ನು ಕಿತ್ತೊಗೆಯಬೇಕಿರುವುದು ಸಾಂವಿಧಾನಿಕ ಮತ್ತು ಸಾಮಾಜಿಕ ತುರ್ತು’ ಎಂದು ನ್ಯಾಯಮೂರ್ತಿ ಸಂಜಯ್ ಕರೋಲ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ನೇತೃತ್ವದ ನ್ಯಾಯಪೀಠವು ಹೇಳಿತು.

ಕೇರಳ: 25 ಲಕ್ಷ ಜನರ ಎಣಿಕೆ ಬಾಕಿ

ತಿರುವನಂತಪುರ: ಕೇರಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪೂರ್ಣಗೊಳ್ಳಲು 3 ದಿನ ಉಳಿದಿದ್ದು, 25 ಲಕ್ಷಕ್ಕೂ ಹೆಚ್ಚು ಮತದಾರರ ಗಣತಿ ಇನ್ನೂ ಬಾಕಿ ಇದೆ.

ಇತ್ತೀಚಿನ ಮತದಾರರ ಪಟ್ಟಿ ಪ್ರಕಾರ, ಕೇರಳದಲ್ಲಿ ಒಟ್ಟು ಮತದಾರರ ಸಂಖ್ಯೆ 2.78 ಕೋಟಿ.

ಸೋಮವಾರ ನಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಮುಖ್ಯ ಚುನಾವಣಾಧಿಕಾರಿ ರತನ್ ಖೇಲ್ಕರ್ ಮಾತನಾಡಿ, ‘ಮೃತ ಮತದಾರರನ್ನು ಮರಣ ನೋಂದಣಿಗಳ ಸಹಾಯದಿಂದ ಪತ್ತೆಹಚ್ಚಲಾಗುತ್ತಿದೆ. ಕಾಸರಗೋಡು, ವಯನಾಡ್ ಮತ್ತು ಕೊಲ್ಲಂ ಜಿಲ್ಲೆಗಳಲ್ಲಿ ಗಣತಿ ಕಾರ್ಯ ಪೂರ್ಣಗೊಂಡಿದೆ’ ಎಂದು ಹೇಳಿದರು.

ರಾಮ ಜನ್ಮಭೂಮಿ ಚಳವಳಿ ಮುಖಂಡ ವೇದಾಂತಿ ನಿಧನ

ರೇವಾ (ಪಿಟಿಐ): ರಾಮ ಜನ್ಮಭೂಮಿ ಚಳವಳಿಯ ಮುಖಂಡ, ಬಿಜೆಪಿಯ ಮಾಜಿ ಸಂಸದ ರಾಮ್ ವಿಲಾಸ್ ವೇದಾಂತಿ (67) ಅವರು ಹೃದಯಾಘಾತದಿಂದ ಸೋಮವಾರ ಮೃತಪಟ್ಟಿದ್ದಾರೆ.



ವೇದಾಂತಿ

ರಕ್ತದ ವಿಷ ಸೋಂಕಿನಿಂದ ಬಳಲುತ್ತಿದ್ದ ವೇದಾಂತಿ ಅವರನ್ನು ನಗರದ ಶ್ಯಾಮ್ ಶಾ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭಾನುವಾರ ಬೆಳಿಗ್ಗೆ ದಾಖಲಿಸಲಾಗಿತ್ತು. ಬಹು ಅಂಗಾಂಗ ವೈಫಲ್ಯಕ್ಕೊಳಗಾದ ಅವರು ನಿಧನರಾದರು ಎಂದು ಆಸ್ಪತ್ರೆಯ ಅಧೀಕ್ಷಕ ಅಕ್ಷಯ್ ಶ್ರೀವಾಸ್ತವ ತಿಳಿಸಿದ್ದಾರೆ.

ವೇದಾಂತಿ ಅವರು ಶ್ರೀರಾಮ ಜನ್ಮಭೂಮಿ ಟ್ರಸ್ಟ್‌ನ ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದರು. ಉತ್ತರ ಪ್ರದೇಶದ ಪ್ರತಾಪ್‌ಗಢ ಮತ್ತು ಮಛಲಿಶಹರ್ ಕ್ಷೇತ್ರಗಳಿಂದ ಲೋಕಸಭೆಗೆ ಆಯ್ಕೆಯಾಗಿದ್ದರು.

ಪ್ರಸ್ತುತ ರೇವಾ ಜಿಲ್ಲೆಯಲ್ಲಿ ‘ಕಥಾ ಭತ್ವಾ’ ನಿರೂಪಿಸುತ್ತಿದ್ದರು. 1958ರ ಅ.7ರಂದು ಗುಡ್ವಾದಲ್ಲಿ ಜನಿಸಿದ್ದರು. ಅಂತಿಮ ವಿಧಿಗಳನ್ನು ಅಯೋಧ್ಯೆಯಲ್ಲಿ ನಡೆಸಲಾಗುವುದು ಎಂದು ವೇದಾಂತಿ ಅವರ ಶಿಷ್ಯ ಛೋಟೆ ದಾಸ್ ಮಹಾರಾಜ್ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜಗತ್ತಿನಲ್ಲಿ ಯಾರು ಏನನ್ನೂ ಕಳೆದುಕೊಂಡಿಲ್ಲವೋ ಅವರು ಏನನ್ನೂ ಪಡೆದಿಲ್ಲ.

–ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

‘ಮನರೇಗಾ’ ಹೆಸರು ಬದಲಾವಣೆ ಯತ್ನ ‘ವಿಕಸಿತ ಭಾರತ’ಕ್ಕೆ ಗಾಂಧೀಜಿ ಬೇಡವೆ?

‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ’ (ಮನರೇಗಾ) ಹೆಸರನ್ನು ‘ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ)’ ಎಂದು ಬದಲಾಯಿಸುವ ಕೇಂದ್ರ ಸರ್ಕಾರದ ಪ್ರಯತ್ನ ರಾಜಕೀಯಪ್ರೇರಿತ ಕ್ರಮವಾಗಿದೆ. ಗ್ರಾಮೀಣ ಭಾಗದ ಬಡಜನರಿಗೆ ವರ್ಷದಲ್ಲಿ 125 ದಿನಗಳ ಕೆಲಸವನ್ನು ಖಾತರಿಪಡಿಸುವ ‘ಮನರೇಗಾ’ ಬರೀ ಒಂದು ಕಲ್ಯಾಣ ಯೋಜನೆಯಷ್ಟೇ ಆಗಿರದೆ, ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ನ್ಯಾಯದ ಸಂಕೇತವೂ ಆಗಿದೆ. ಮಹಾತ್ಮ ಗಾಂಧಿ ಅವರ ಹೆಸರನ್ನು ಹೊಂದುವ ಮೂಲಕ ಯೋಜನೆಗೆ ನೈತಿಕ ಮೌಲ್ಯದ ಆಯಾಮವೂ ದೊರೆತಿದೆ. ಹಳ್ಳಿಗಳ ಏಳಿಗೆಯಲ್ಲಿ ದೇಶದ ಅಭಿವೃದ್ಧಿಯನ್ನು ಕಾಣುತ್ತಿದ್ದ ಗಾಂಧೀಜಿ ಅವರ ಹೆಸರು, ಗ್ರಾಮೀಣರ ಬದುಕಿನೊಂದಿಗೆ ಬೆಸೆದುಕೊಂಡ ಯೋಜನೆಗೆ ಅರ್ಥಪೂರ್ಣವೂ ಆಗಿತ್ತು. ಇದೀಗ ಯೋಜನೆಯ ಹೆಸರನ್ನು ಬದಲಾಯಿಸಲು ಸರ್ಕಾರ ಮುಂದಾಗಿರುವುದಕ್ಕೂ, ಗಾಂಧೀಜಿ ಅವರೊಂದಿಗೆ ಭಾರತೀಯ ಜನತಾ ಪಕ್ಷ ಹಾಗೂ ಸಂಘ ಪರಿವಾರಕ್ಕೆ ಇರುವ ತಾತ್ತ್ವಿಕ ಭಿನ್ನಮತಕ್ಕೂ ಸಂಬಂಧ ಇರುವಂತಿದೆ. ಸರ್ಕಾರದ ಪ್ರಯತ್ನ ಯಶಸ್ವಿಯಾಗಿ ಹೆಸರು ಬದಲಾದರೆ, ದೊಡ್ಡದೊಂದು ಆಡಳಿತ ಕಸರತ್ತು ಎದುರಾಗಲಿದೆ. ಕಾನೂನು ದಾಖಲೆಗಳು, ಬಜೆಟ್‌ಗಳು, ರಾಷ್ಟ್ರೀಯ– ಅಂತರರಾಷ್ಟ್ರೀಯ ವರದಿಗಳು ಸೇರಿದಂತೆ ವಿವಿಧೆಡೆಗಳಲ್ಲಿ ಈವರೆಗೂ ಬಳಕೆಯಾಗಿರುವ ‘ಎಂನರೇಗಾ’ ಹೆಸರು ತನ್ನ ಅಸ್ತಿತ್ವ ಕಳೆದುಕೊಳ್ಳಲಿದೆ ಹಾಗೂ ಹೊಸ ಹೆಸರಿನ ಬಳಕೆಗೆ ಸಾರ್ವಜನಿಕ ತೆರಿಗೆ ಹಣ ಪೋಲಾಗಲಿದೆ. ಜನರ ಹಣದಿಂದ ಚಾಲ್ತಿಯಲ್ಲಿರುವ ಯೋಜನೆಗಳ ಹೆಸರುಗಳನ್ನು ಸರ್ಕಾರ ತನ್ನ ಇಚ್ಛೆಗೆ ತಕ್ಕಂತೆ ಬದಲಾಯಿಸುವುದನ್ನು ಬೇಜವಾಬ್ದಾರಿಯುತ ನಡವಳಿಕೆ ಎಂದು ಭಾವಿಸಬೇಕಾಗುತ್ತದೆ.



ಗ್ರಾಮೀಣರ ಬದುಕಿನೊಂದಿಗೆ ಮಿಳಿತಗೊಂಡ ‘ಮನರೇಗಾ’ ಹೆಸರನ್ನು ಬದಲಾಯಿಸುವ ಸರ್ಕಾರದ ಪ್ರಯತ್ನ ಸರಿಯಲ್ಲ. ಇದು ಜನಹಿತದ ಹಿತಾಸಕ್ತಿಯಿಂದ ದೂರವಾದ ರಾಜಕೀಯ ನಡವಳಿಕೆ.

‘ಮನರೇಗಾ’ ಯೋಜನೆ ಹೆಸರನ್ನು ಬದಲಿಸುವ ಕೇಂದ್ರ ಸರ್ಕಾರದ ಪ್ರಯತ್ನ ಸಾರ್ವಜನಿಕರಲ್ಲಿ ಗೊಂದಲ ಮೂಡಿಸುವಂತಿದೆ ಹಾಗೂ ಪಾರದರ್ಶಕತೆಯ ಕೊರತೆಯಿಂದ ಕೂಡಿದೆ. ಯೋಜನೆಯ ಹೆಸರನ್ನು ‘ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಖಾತರಿ’ ಎಂದು ಬದಲಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಈಗ ಸಂಸತ್‌ನ ಮುಂದೆ ಮಂಡನೆಯಾಗಲಿರುವ ಮಸೂದೆಯಲ್ಲಿ ‘ಪೂಜ್ಯ ಬಾಪು’ ಎನ್ನುವುದೂ ಕಣ್ಮರೆಯಾಗಿದ್ದು, ಗಾಂಧೀಜಿ ಹೆಸರನ್ನು ಸಂಪೂರ್ಣವಾಗಿ ಹೊರಗಿಟ್ಟು ಯೋಜನೆಗೆ ಹೊಸ ಹೆಸರು ನೀಡಲಾಗಿದೆ. ಹಳೆಯ ಯೋಜನೆಗೆ ಹೊಸ ಹೆಸರು ನೀಡುವ ಮೂಲಕ, ಜನಪ್ರಿಯ ಕಲ್ಯಾಣ ಕಾರ್ಯಕ್ರಮವೊಂದರ ಯಶಸ್ಸನ್ನು ತನ್ನದಾಗಿಸಿಕೊಳ್ಳುವುದು ಸರ್ಕಾರದ ಉದ್ದೇಶ ಆಗಿರುವಂತಿದೆ. ಸರ್ಕಾರದ ಉದ್ದೇಶ ಪ್ರಾಂಜಲವೇ ಆಗಿದ್ದಲ್ಲಿ, ಗ್ರಾಮೀಣ ಭಾರತಕ್ಕೆ ಅನುಕೂಲವಾಗುವ ಹೊಸ ಯೋಜನೆಯೊಂದನ್ನು ರೂಪಿಸಬಹುದಾಗಿತ್ತು. 2047ರ ‘ವಿಕಸಿತ ಭಾರತ’ ಗುರಿಸಾಧನೆಗೆ ‘ವಿಬಿ–ಜಿ ರಾಮ್ ಜಿ’ ಯೋಜನೆ ಪೂರಕವಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಹಾಗಾದರೆ, ‘ವಿಕಸಿತ ಭಾರತ’ಕ್ಕೆ ಗಾಂಧೀಜಿಯ ಅಗತ್ಯವಿಲ್ಲ ಎಂದು ಸರ್ಕಾರ ಭಾವಿಸಿದೆಯೆ? ಗಾಂಧೀಜಿ ಅವರ ವರ್ಚಸ್ಸಿಗೆ ಧಕ್ಕೆ ಉಂಟುಮಾಡುವ ಹೊಸ ಹೊಸ ಸಂಕಥನಗಳು ಚಲಾವಣೆಗೆ ಬರುತ್ತಿರುವ ಸಂದರ್ಭದಲ್ಲಿ, ಆ ಪ್ರಯತ್ನಗಳ ಭಾಗವಾಗಿಯೇ ಹೊಸ ಯೋಜನೆಯನ್ನು ನೋಡುವುದಕ್ಕೆ ಸರ್ಕಾರವೇ ಅವಕಾಶ ಕಲ್ಪಿಸಿದೆ.

ಯೋಜನೆಯೊಂದನ್ನು ಪರಿಷ್ಕರಿಸುವುದು, ಅದರ ಹೆಸರನ್ನು ಬದಲಿಸುವುದು ಸಮಸ್ಯೆ ಏನಲ್ಲ. ಆದರೆ, ಸ್ಪಷ್ಟ ಕಾರಣ ಇಲ್ಲದೆ ಹೆಸರು ಬದಲಾಯಿಸುವುದು ಅಪ್ರಬುದ್ಧ ರಾಜಕಾರಣ ಆಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿದ್ದ ಹಲವು ಯೋಜನೆಗಳನ್ನೂ ಬಿಜೆಪಿ ಸರ್ಕಾರ ಮರುನಾಮಕರಣ ಪ್ರಕ್ರಿಯೆಗೆ ಒಳಪಡಿಸಿದೆ. ಹೆಸರು ಬದಲಿಸುವ ಈ ಅಭ್ಯಾಸ, ದ್ವೇಷ ರಾಜಕಾರಣದ ಸಂಕೇತದಂತಿದೆ ಹಾಗೂ ಹೊಸ ಯೋಜನೆಗಳನ್ನು ರೂಪಿಸುವುದಕ್ಕೆ ಅಗತ್ಯವಾದ ಸೃಜನಶೀಲ ಒಳನೋಟಗಳ ಕೊರತೆ ಸರ್ಕಾರಕ್ಕೆ ಇರುವುದನ್ನು ಸೂಚಿಸುವಂತಿದೆ. ಗಾಂಧೀಜಿಯನ್ನು ನಿರ್ದಿಷ್ಟ ಪಕ್ಷವೊಂದಕ್ಕೆ ಸಂಬಂಧಿಸಿದ ಆಸ್ತಿ ಅಥವಾ ವ್ಯಕ್ತಿ ಎಂದು ಸರ್ಕಾರ ಭಾವಿಸಿರುವಂತಿದೆ. ‘ಮನರೇಗಾ’ ಯೋಜನೆಯ ಮರುನಾಮಕರಣವನ್ನು, ಜನರ ಮನಸ್ಸಿನಿಂದ ಗಾಂಧೀಜಿ ಹೆಸರನ್ನು ಅಳಿಸಿಹಾಕುವ ಹುನ್ನಾರ ಎಂದು ಕಾಂಗ್ರೆಸ್ ಆರೋಪಿಸಿದೆ. ಯೋಜನೆಯೊಂದರ ಮೂಲಕ ಉಳಿಯುವ ಅಥವಾ ಅಳಿಯುವ ದುರ್ಬಲ ವ್ಯಕ್ತಿತ್ವ ಗಾಂಧೀಜಿ ಅವರದಲ್ಲ. ಮಹಾತ್ಮನ ಹೆಸರನ್ನು ಹೊಂದುವುದರಿಂದ ಯೋಜನೆಯ ಹಾಗೂ ಸರ್ಕಾರದ ಘನತೆ ಹೆಚ್ಚಾಗುತ್ತದೆ ಎನ್ನುವ ಸತ್ಯ ಹಾಗೂ ವಿವೇಕವನ್ನು ಸರ್ಕಾರ ಮರೆತರೆ, ದೇಶದೊಳಗೆ ಮಾತ್ರವಲ್ಲ, ವಿಶ್ವದೆದುರೂ ತನ್ನ ಸಂಕುಚಿತ ನಡವಳಿಕೆಯನ್ನು ಪ್ರದರ್ಶಿಸಿದಂತಾಗುತ್ತದೆ.

ಕನ್ನಡದ ಕೆಲಸ



ಯಾವುದೇ ಪಂಥದವರ ಕಾರ್ಯಸೂಚಿಗಾಗಿ ಕನ್ನಡ ಕಾರ್ಯಕರ್ತರು ಕೆಲಸ ಮಾಡುವುದಿಲ್ಲ. ಕನ್ನಡ ಮತ್ತು ಕನ್ನಡಿಗರ ಹಿತಾಸಕ್ತಿ ರಕ್ಷಣೆ ಕಾರ್ಯಕರ್ತರ ಏಕೈಕ ಉದ್ದೇಶ; ಆ ಹಿತಾಸಕ್ತಿಯ ಮುಂದೆ ಬೇರಾವುದೂ ಮುಖ್ಯವಲ್ಲ.

ಗಣೇಶ್ ಚೇತನ್, ಕನ್ನಡ ಕಾರ್ಯಕರ್ತ, ‘ಎಕ್ಸ್’ನಿಂದ

ಕಿಡಿನುಡಿ



ದೇಶದಾದ್ಯಂತ ಬೆಳೆ ವಿಮೆ ಯೋಜನೆ ಜಾರಿಯಾದ ದಿನದಿಂದ ಈವರೆಗೆ ವಿಮಾ ಕಂಪನಿಗಳು ಉದ್ಧಾರ ಆಗಿವೆಯೇ ಹೊರತು, ರೈತರಲ್ಲ. ಬೆಳೆ ವಿಮೆ ಎನ್ನುವುದು ಬಿಜೆಪಿ ಪ್ರಾಯೋಜಿತ ಪಕ್ಕಾ ಗೋಲ್‌ಮಾಲ್ ಯೋಜನೆ.

ಈಶ್ವರ ಖಂಡ್ರೆ, ಅರಣ್ಯ ಸಚಿವ

25 ವರ್ಷಗಳ ಹಿಂದೆ

ಶನಿವಾರ, 16-12-2000

● ಗುಂಡಿಗೆ ನಕ್ಸಲೀಯ ಬಲಿ

ತುಮಕೂರು, ಡಿ. 15– ತುಮಕೂರು ತಾಲ್ಲೂಕು ರ‍್ಯಾಪ್ಟೆ ಗ್ರಾಮ ಪಂಚಾಯ್ತಿ ಅಧ್ಯಕ್ಷ ತಿಮ್ಮಾರೆಡ್ಡಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಮತ್ತು ಕುಖ್ಯಾತ ನಕ್ಸಲೀಯ ನಾಯಕ ಮಂಡ್ಲಿ ಪ್ರಭಾಕರ್ ಆಂಧ್ರಪ್ರದೇಶದ ಪೆನುಗೊಂಡ ತಾಲ್ಲೂಕಿನ ಸೋಮಂದಪಲ್ಲಿಯಲ್ಲಿ ಪೊಲೀಸರ ಜೊತೆ ನಡೆದ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದಾನೆ. ಆರೋಪಿ ಪ್ರಭಾಕರ್, ಸೆ. 21ರಂದು ಗ್ರಾ.ಪಂ. ಅಧ್ಯಕ್ಷ ತಿಮ್ಮಾರೆಡ್ಡಿ ಅವರನ್ನು ಬಸ್ಸಿನಿಂದ ಎಳೆದು, ಮಚ್ಚಿನಿಂದ ಕೊಚ್ಚಿ, ರುಂಡ ತೆಗೆದುಕೊಂಡು ಹೋಗಿದ್ದ.

● ಸಿನಿಮಾ ನಟನೆ ಗೀಳಿನ ಅಧಿಕಾರಿಗಳಿಗೆ ಕಡಿವಾಣ

ಬೆಂಗಳೂರು, ಡಿ. 15– ರಾಜ್ಯ ಸರ್ಕಾರದ ಅಧಿಕಾರಿಗಳು ವಾಣಿಜ್ಯ ಚಲನಚಿತ್ರಗಳಲ್ಲಿ ನಟಿಸುವುದಾಗಲಿ ಅಥವಾ ಅವುಗಳ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂದು ರಾಜ್ಯದ ಮುಖ್ಯ ಕಾರ್ಯದರ್ಶಿ ಬಿ.ಕೆ. ಭಟ್ಟಾಚಾರ್ಯ ಇಂದು ಇಲ್ಲಿ ಆದೇಶ ನೀಡಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 16-12-1950

● ಉಕ್ಕಿನಾಳು ವಲ್ಲಭಭಾಯ್, ನಮ್ಮ ‘ಸರದಾರ್’ ಇನ್ನೆಲ್ಲಿ...

ಮುಂಬಯಿ, ಡಿ. 15– ಉಪಪ್ರಧಾನಿ ಸರದಾರ ವಲ್ಲಭಭಾಯಿ ಪಟೇಲರು ಈ ದಿನ ಬೆಳಿಗ್ಗೆ 9 ಗಂಟೆ 37 ನಿಮಿಷಕ್ಕೆ ದೈವಾಧೀನರಾದರು. ಕೊನೆ ಉಸಿರೆಳೆವಾಗ ಸರದಾರರ ಹಾಸಿಗೆಯ ಬಳಿ ಪುತ್ರ ದಯಾಭಾಯ್, ಪುತ್ರಿ ಮಣಿಬೆನ್, ಸೊಸೆ, ಮೊಮ್ಮಕ್ಕಳು, ಮುಂಬಯಿ ಮುಖ್ಯಮಂತ್ರಿ ಖೇರ್, ಮಂತ್ರಿ ಮುರಾರ್ಜಿ, ಮೇಯರ್ ಪಾಟೀಲ್, ಇವರಿದ್ದರು.

ಅಂತಿಮ ಯಾತ್ರೆಯ ದೃಶ್ಯ: ಅಧ್ಯಕ್ಷ ರಾಜೇಂದ್ರ ಪ್ರಸಾದ್, ಪ್ರಧಾನಿ ಪಂಡಿತ ನೆಹರೂ ಮತ್ತಿತರ ರಾಷ್ಟ್ರನಾಯಕರು ಪಾರ್ಥಿವ ಶರೀರಕ್ಕೆ ಅಂತಿಮಪ್ರಣಾಮ ಅರ್ಪಿಸಿದ ನಂತರ, ಬಿರ್ಲಾ ಭವನದಿಂದ ಚರಮಯಾತ್ರೆ ಆರಂಭವಾಯಿತು.

ಮಹಾತ್ಮ ಗಾಂಧಿಯವರು ಮುಂಚೆ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದ ಬಿರ್ಲಾ ಭವನದ ಹಚ್ಚನೆಯ ಹೊರಾಂಗಣದಲ್ಲಿ ಸಂಜೆಯ ಹೊಂಬಣ್ಣದ ಬಿಸಿಲು ಚೆಲ್ಲಿತ್ತು. ಸುಮಾರು ಐದು ಲಕ್ಷದ ದಟ್ಟ ಜನಸಂದಣಿ ಕಡೆಯ ದರ್ಶನಕ್ಕಾಗಿ ಹಾತೊರೆಯುತ್ತಿತ್ತು.

ಎಲ್ಲ ಕಡೆ ನೀರವತೆ. ಜನಸ್ತೋಮ ಒಮ್ಮೆಲೇ ತಲೆಬಾಗಿ ಸರದಾರರಿಗೆ ಅಂತಿಮ ಗೌರವ ಕಾಣಿಕೆಯಿತ್ತಿತು. ಶೋಕ ತಡೆಯಲಾರದೆ ಅನೇಕರು ಕಣ್ಣೀರು ಸುರಿಸಿದರು.

ಸಾವಿನತ್ತ ಭಾಷೆ–ತತ್ತ್ವಶಾಸ್ತ್ರ?



ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

> ಮಾರುಕಟ್ಟೆಯ ಜಗತ್ತಿಗೆ ತಕ್ಕಂತೆ ಶಿಕ್ಷಣವೂ ಬದಲಾವಣೆ ಹೊಂದಿರುವುದರ ಪರಿಣಾಮ ಭಾಷೆ ಮತ್ತು ತತ್ತ್ವಶಾಸ್ತ್ರದ ಮೇಲಾಗಿದೆ. ಶಿಕ್ಷಣವು ಪ್ರಾದೇಶಿಕ ಅನನ್ಯತೆಗೆ ಬೆನ್ನುಹಾಕಿದೆ ಹಾಗೂ ಸ್ಥಳೀಯ ಭಾಷೆಗಳ ಜಾಗವನ್ನು ಇಂಗ್ಲಿಷ್ ಆವರಿಸಿಕೊಂಡಿದೆ. ಇದೆಲ್ಲದರ ಪರಿಣಾಮ, ಭಾಷೆ–ತತ್ತ್ವಶಾಸ್ತ್ರ ಅಪಾಯ ಎದುರಿಸುತ್ತಿವೆ.

ಪ್ರತಿಯೊಂದು ಭಾಷೆಗೂ ಅದರದೇ ಲೋಕ ದೃಷ್ಟಿಯಿರುತ್ತದೆ. ಅದುವೇ ಅದರ ತತ್ತ್ವವೂ ಹೌದು. ಭಾಷೆ ಬರೀ ಸಂವಹನ ಸಾಧನವಲ್ಲ, ಅದು ನಮ್ಮ ಚಿಂತನೆಯನ್ನು ವಿವರಿಸುವ ಮತ್ತು ರೂಪಿಸುವ ಶಕ್ತಿಯನ್ನೂ ಹೊಂದಿರುತ್ತದೆ. ಕಣ್ಣಿಗೆ ಕಾಣುವ ಮರ, ಮನೆ ಇತ್ಯಾದಿಗಳನ್ನು ಅನುಭವಕ್ಕೆ ತರುವ ಹಾಗೆ, ಕಣ್ಣಿಗೆ ಕಾಣದ ದೇವರು, ಸ್ವರ್ಗ ಇತ್ಯಾದಿಗಳನ್ನೂ ನಂಬುವಂತೆ ಮಾಡುವ ಶಕ್ತಿ ಭಾಷೆಗಿದೆ. ವೇದ ಆಗಮಗಳೂ ಭಾಷಿಕ ರಚನೆಗಳೇ ಹೌದು. ಮೀಮಾಂಸಶಾಸ್ತ್ರಕ್ಕೂ ಶಬ್ದ ಪ್ರಮಾಣವೇ ಆಧಾರ. ಹೀಗಾಗಿ ಭಾರತೀಯ ದರ್ಶನಗಳು ಭಾಷೆಯನ್ನು ತತ್ತ್ವಶಾಸ್ತ್ರದ ಅಂಗವೆಂದೇ ಪರಿಗಣಿಸಿದವು. ಭರ್ತೃಹರಿಯು ವ್ಯಾಕರಣವನ್ನು ದರ್ಶನಗಳ ವರ್ಗಕ್ಕೆ ಸೇರಿಸಿದ. ಭಾಷೆ ಮತ್ತು ಅದರೊಳಗೆ ಅಂತರ್ಗತವಾಗಿರುವ ತತ್ತ್ವಶಾಸ್ತ್ರದ ಪದಗಳು ವ್ಯಕ್ತಿ ಮತ್ತು ಆತ ಬದುಕುತ್ತಿರುವ ಪ್ರಪಂಚದ ನಡುವಣ ಆಳವಾದ ಸಂಬಂಧಗಳನ್ನು ಮುನ್ನೆಲೆಗೆ ತರುತ್ತದೆ. ಜಗತ್ತಿನ ಪ್ರತಿಯೊಂದು ಭಾಷೆಯೂ ಆಲೋಚನೆಗಳನ್ನು ಸಾಕಾರಗೊಳಿಸುವ ವಿಶಿಷ್ಟ ಮಾರ್ಗಗಳನ್ನು ತಾನೇ ತಾನಾಗಿ ಕಂಡುಕೊಂಡಿರುತ್ತದೆ.

ಇವತ್ತು ಮಾರುಕಟ್ಟೆ ಕೇಂದ್ರಿತವಾದ ಜಾಗತೀಕರಣವು ತನಗೆ ಬೇಕಾದ ಜಾಹೀರಾತು ಮಾದರಿಯ ಭಾಷೆಯೊಂದನ್ನು ಸೃಷ್ಟಿಸಿಕೊಂಡಿದೆ. ಧರ್ಮವೂ ಸೇರಿದಂತೆ, ತನ್ನಲ್ಲಿರುವ ಏನನ್ನಾದರೂ ವ್ಯಾವಹಾರಿಕವಾಗಿಸುವುದು ಅದರ ಪ್ರಧಾನ ಕೆಲಸ. ಇಂಥ ಗುಣಗುಳ್ಳ ಭಾಷೆಯು ಜಗತ್ತಿನ ಎಲ್ಲೆಡೆಯೂ ಒಂದೇ ರೀತಿಯಲ್ಲಿ ವ್ಯವಹರಿಸುತ್ತಾ, ರಾಷ್ಟ್ರಗಳು, ವ್ಯವಹಾರಗಳು ಮತ್ತು ವ್ಯಕ್ತಿಗಳು ಸಂಪರ್ಕ ಸಾಧಿಸುವ ವಿಧಾನವನ್ನು ತನಗೆ ಬೇಕಾದಂತೆ ಬದಲಾಯಿಸಿಕೊಂಡಿದೆ. ತಾಂತ್ರಿಕ ಏಕೀಕರಣದ ಮಾದರಿಯನ್ನು ಭಾಷೆಯೂ ಅನುಸರಿಸಿದಾಗ ಅದರ ಸೃಜನಶೀಲತೆ ಏಕಮುಖವಾಗಿ ಬೆಳೆಯುತ್ತಾ ಬತ್ತಿ ಹೋಗುತ್ತದೆ.

ವಿದ್ಯಾಪ್ರೇಮ ಮತ್ತು ಜ್ಞಾನಾನುರಾಗದ ದಾರ್ಶನಿಕ ಚಿಂತನೆಗಳು ಜಾಹೀರಾತಿನ ಭಾಷೆ ಆಧರಿಸಿದ್ದರಿಂದ ಪತನಮುಖಿಯಾಗುತ್ತಿವೆ. ‘ವಾಕ್ಕು’ ಒಂದು ಅದ್ಭುತ ಎಂದು ಕಂಡುಕೊಂಡವರೂ ಈ ದಿನಗಳಲ್ಲಿ ಭಾಷೆಯನ್ನು ವರ್ತಮಾನದ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಮಾರುಕಟ್ಟೆ ವಿಸ್ತರಣೆಯತ್ತ ನಡೆಯುತ್ತಿರುವ ಒಂದು ಚಳವಳಿಯಂತೆ ಕಾಣುತ್ತಿರುವ ಜಾಗತೀಕರಣವು, ಭಾಷೆ ಮತ್ತು ತತ್ತ್ವಶಾಸ್ತ್ರಗಳನ್ನು ತನಗೆ ಬೇಕಾದಂತೆ ಮರುರೂಪಿಸಿಕೊಂಡಿದೆ. ಇದನ್ನು ಅರ್ಥಮಾಡಿಕೊಳ್ಳಲು ನಾವು ಬಹುಮಟ್ಟಿಗೆ ವಿಫಲರಾಗಿರುವುದರಿಂದಾಗಿ, ಅವುಗಳ ಕುರಿತಾದ ಅಧ್ಯಯನಗಳೂ ಕುಂಠಿತವಾಗಿದೆ. ಭಾಷೆ ಮತ್ತು ತತ್ತ್ವಶಾಸ್ತ್ರಗಳ ಅಧ್ಯಯನಗಳನ್ನು ‘ಅನುತ್ಪಾದಕ’ ಎಂದು ಸರ್ಕಾರಗಳೂ, ಜನರೂ ಭಾವಿಸುತ್ತಿದ್ದಾರೆ. ಸ್ಪರ್ಧಾತ್ಮಕ ಆರ್ಥಿಕತೆಯ ಹಿಂದೆ ಬಿದ್ದಿರುವ ಜನರಿಗೆ ಭಾಷೆ–ತತ್ತ್ವಶಾಸ್ತ್ರ ಬೇಡವಾಗಿವೆ. ಇಂಥಲ್ಲಿ ಸಹಜವಾಗಿಯೇ ಪ್ರಶ್ನಿಸುವುದನ್ನು ಕಲಿಸುವ, ಇತಿಹಾಸವನ್ನು ಶೋಧಿಸುವ, ರಾಜಕೀಯ ವಿನ್ಯಾಸಗಳನ್ನು ವಿಶ್ಲೇಷಿಸುವ, ಮಾನವೀಯ ಸಂಬಂಧಗಳನ್ನು ಪರಿಶೋಧಿಸುವ ಭಾಷೆ ಮತ್ತು ತತ್ತ್ವಶಾಸ್ತ್ರಗಳ ಮಹತ್ವ ಕಡಿಮೆಯಾಗುತ್ತಿದೆ. ಭಾಷೆಗಳ ಕುರಿತು ತಿಳಿವಳಿಕೆಗಳನ್ನು ಹೆಚ್ಚಿಸಿ, ಮುಕ್ತಚಿಂತನೆಗೆ ಮತ್ತು ವಿಮರ್ಶೆಗೆ ಅವಕಾಶ ಮಾಡಿಕೊಡುವುದು ಪ್ರಜಾಪ್ರಭುತ್ವವಾದೀ ಸರ್ಕಾರಗಳ ಜವಾಬ್ದಾರಿ ಎಂಬುದನ್ನು ಪ್ರಭುತ್ವಗಳು ಮರೆತಿವೆ. ಸಾಮಾಜಿಕ ಜಾಲತಾಣಗಳೂ ಸೇರಿದಂತೆ, ಮಾಧ್ಯಮಗಳು ಕೂಡಾ ಇಂಥ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಒಂದು ಅಧ್ಯಯನದ ಪ್ರಕಾರ, ಮುಂದಿನ ನೂರು ವರ್ಷಗಳಲ್ಲಿ ವಿಶ್ವದ ಶೇ 92 ಜನರು, ಶೇ 8 ಜನರ ಭಾಷೆಗಳನ್ನು ಮಾತಾಡುತ್ತಿರುತ್ತಾರೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿಶ್ವದ ಶೇ 8 ಜನರ ಕೈಯಲ್ಲಿ ಶೇ 92 ಜನರ ಸಂಪತ್ತು ಇರುತ್ತದೆ.

ಇಂಥ ಬೆಳವಣಿಗೆಗಳ ಪರಿಣಾಮವೆಂಬಂತೆ, ವಿಶ್ವದ ಕುರಿತಾದ ತಾತ್ತ್ವಿಕ ಚಿಂತನೆಗಳು ಇವತ್ತು ತೀವ್ರ ಬಿಕ್ಕಟ್ಟುಗಳನ್ನು ಇದಿರಿಸುತ್ತಿವೆ. ಭಾರತವೂ ಸೇರಿದಂತೆ 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡ ಚಿಂತಕರು ಇವತ್ತು ನಮ್ಮ ನಡುವೆ ಇಲ್ಲ. ವಸಾಹತು ಕಾಲಘಟ್ಟದಲ್ಲಿ ಭಾರತೀಯ ಪರಂಪರೆಯನ್ನು ಪರಿಷ್ಕರಿಸಿ ಒಪ್ಪಿಕೊಳ್ಳಲು ಹೇಳಿದ, ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ವಿವೇಕಾನಂದ, ಅರವಿಂದ, ರವೀಂದ್ರನಾಥ ಟ್ಯಾಗೋರ್, ಆನಂದ ಕುಮಾರಸ್ವಾಮಿ, ನಾರಾಯಣಗುರು, ಮಹಾತ್ಮಾ ಗಾಂಧಿ, ಅಂಬೇಡ್ಕರ್, ಕುವೆಂಪು ಮೊದಲಾದವರು ಭಾರತದ ನವೋದಯವನ್ನು ಬಲಿಷ್ಠವಾಗಿ ಕಟ್ಟಿದರು. ಇವರೆಲ್ಲರೂ ಸಮಾಜ ಸುಧಾರಣೆ, ಧರ್ಮ, ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರಗಳ ಮೇಲೆ ನಿರ್ಣಾಯಕ ಪ್ರಭಾವ ಬೀರಿದ್ದರು. ಸತಿಪದ್ಧತಿ, ಜಾತಿಪದ್ಧತಿ, ಅಸ್ಪೃಶ್ಯತೆಯಂಥ ಘೋರ ವಿಷಯಗಳ ವಿರುದ್ಧ ಧ್ವನಿ ಎತ್ತಿದ್ದಲ್ಲದೆ, ಅವುಗಳ ನಾಶಕ್ಕೂ ಹೋರಾಡಿದರು. ಹೀಗೆ ಮಾಡುವುದರ ಮೂಲಕ ಭಾಷೆಯನ್ನು ಹೊಸದುಗೊಳಿಸಿ, ಆಧುನಿಕ ಭಾರತದ ತತ್ತ್ವಶಾಸ್ತ್ರ ಮತ್ತು ಚಿಂತನೆಗೆ ಕೊಡುಗೆ ನೀಡಿದರು. ಯುರೋಪಿನಲ್ಲೂ ಇಂಥದ್ದೇ ಬೆಳವಣಿಗೆಗಳು ನಡೆದುವು. ‘ನಾನು ಯೋಚಿಸುತ್ತೇನೆ, ಆದ್ದರಿಂದ ನಾನು ಇದ್ದೇನೆ’ ಎಂದು ಹೇಳಿದ ಡೆಕಾರ್ಟೆ, ರಾಜಕೀಯ ತತ್ತ್ವಶಾಸ್ತ್ರದಲ್ಲಿ ಇರಲೇಬೇಕಾದ ಸಹಜ ಹಕ್ಕುಗಳ ಬಗ್ಗೆ ಬರೆದ ಜಾನ್ ಲಾಕ್, ತಾರ್ಕಿಕತೆ ಮತ್ತು ಅನುಭವದ ವಿಶ್ಲೇಷಣೆ ನಡೆಸಿದ ಕಾಂಟ್, ಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಪಾದಿಸಿದ ವೋಲ್ಟೇರ್, ದ್ವಂದ್ವಮಾನ ಭೌತಿಕವಾದವನ್ನು ಪ್ರತಿಪಾದಿಸಿದ ಹೆಗೆಲ್ ಮತ್ತು ಮಾರ್ಕ್ಸ್ ಮೊದಲಾದವರು 20ನೇ ಶತಮಾನಕ್ಕೆ ಬೇಕಾದ ಪರಿಭಾಷೆ ಮತ್ತು ತತ್ತ್ವಶಾಸ್ತ್ರಗಳನ್ನು ರೂಪಿಸಿದರು. ಫ್ರೆಂಚ್ ತತ್ವಶಾಸ್ತ್ರಜ್ಞನಾದ ಡೆರಿಡಾ ತನಗಿಂತ ಪೂರ್ವದಲ್ಲಿ ಜನಪ್ರಿಯವಾಗಿದ್ದ ಅಸ್ತಿತ್ವವಾದ, ರಾಚನಿಕವಾದವೇ ಮೊದಲಾದ ತಾತ್ವಿಕ ಚಿಂತನೆಗಳನ್ನು ಸಂಶಯದಿಂದ ನೋಡಿದ. ಅವನ ವಾದಗಳು ಜಡವಾಗಿದ್ದ ಚಿಂತನಾಕ್ರಮಗಳನ್ನು ಪುನಶ್ಚೇತನಗೊಳಿಸಿದವು. 2004ರಲ್ಲಿ ಡೆರಿಡಾ ಸತ್ತುಹೋದ ಅನಂತರ ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಹೊಸತೇನೂ ಹುಟ್ಟಲಿಲ್ಲ. ನಾವೀಗ ಜಗತ್ತಿನ ಬಗ್ಗೆ ಮಾತಾಡುವಾಗ, ಸತ್ತವರನ್ನೇ ನೆನಪಿಸಿಕೊಳ್ಳುತ್ತಿರುವುದು ನಾವು ಎದುರಿಸುತ್ತಿರುವ ಸಮಸ್ಯೆಯ ಗಾಂಭೀರ್ಯವನ್ನು ವಿವರಿಸುತ್ತದೆ.

ಇಪ್ಪತ್ತನೇ ಶತಮಾನದ ಉದ್ದಕ್ಕೂ ನಾವು ‘ಪಶ್ಚಿಮದ ಚಿಂತನೆಗಳು’, ‘ಮೂರನೇ ಜಗತ್ತಿನ ರಾಷ್ಟ್ರಗಳು’, ‘ಶೀತಲ ಯುದ್ಧ’ ಎಂದೆಲ್ಲ ಮಾತಾಡುತ್ತಿದ್ದೆವು. 1990ರ ದಶಕದ ನಂತರ ನಮಗೆ ಈ ಪದಗಳನ್ನು ಉಪಯೋಗಿಸಲು ಅಸಾಧ್ಯವಾಯಿತು. ಏಕೆಂದರೆ, ಇವತ್ತು ಜಗತ್ತಿನ ಭಾಷೆಗಳ ವ್ಯಾಕರಣವನ್ನು ಏಕರೂಪಿಯಾಗಿ ಮಾರ್ಪಡಿಸಲಾಗಿದೆ. 1980ರ ದಶಕದಲ್ಲಿ ರಷ್ಯಾದಲ್ಲಿ ನಡೆದ ಪೆರೆಸ್ಟ್ರೋಯಿಕಾದ ನಂತರ ‘ಮೂರನೇ ರಾಷ್ಟ್ರಗಳು’ ಎಂಬ ಪದ ಬಿದ್ದೇಹೋಯಿತು. ಶಿಕ್ಷಣದ ಅಂತರರಾಷ್ಟ್ರೀಕರಣವು ಜಗತ್ತಿನ ಗಡಿರೇಖೆಗಳನ್ನು ದುರ್ಬಲವಾಗಿಸಿದೆ. 2005ರಲ್ಲಿ ಜ್ಯಾರಿಗೆ ಬಂದ ‘ಗ್ಯಾಟ್’ ಮತ್ತು ‘ಡಬ್ಲ್ಯುಟಿಒ’ ಒಪ್ಪಂದಗಳು ಶಿಕ್ಷಣವನ್ನು ಕೈಗಾರಿಕೆಗಳ ಭಾಗವಾಗಿ ಪರಿಗಣಿಸುವಂತೆ ಮಾಡಿದವು. ಪರಿಣಾಮವಾಗಿ ಶಿಕ್ಷಣವು ಲಾಭ–ನಷ್ಟದ ವಿಷಯವಾಯಿತು; ಮಾನವ ಅಭ್ಯುದಯದ ವಿಷಯವಾಗಲೇ ಇಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ, ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಜಾರಿಗೆ ಬಂದುವು. ಇದರಿಂದಾಗಿ, ಪೂರ್ವ–ಪಶ್ಚಿಮಗಳ ನಡುವಣ ವ್ಯತ್ಯಾಸಗಳೂ ಗೌಣವಾದುವು. ಈಗ ಖಾಸಗಿ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳು ವಿದೇಶಿ ಶಾಲಾ ಕಾಲೇಜುಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿವೆ. ದೆಹಲಿಯ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ವಿದೇಶೀ ಅಧ್ಯಾಪಕರು ಪಾಠ ಮಾಡುತ್ತಿದ್ದಾರೆ. ಇಂದಿನ ಶಿಕ್ಷಣವು ಸ್ಥಳೀಯ ಭಾಷೆಗಳ ಸಾಂಸ್ಕೃತಿಕ ಮತ್ತು ಪ್ರಾದೇಶಿಕ ವಿಶಿಷ್ಟತೆಗಳನ್ನು ಅಳಿಸಿಹಾಕುತ್ತಿದೆ. ಸ್ಥಳೀಯ ಭಾಷೆಗಳ ಜಾಗವನ್ನು ಇಂಗ್ಲಿಷ್ ಆಕ್ರಮಿಸಿಕೊಂಡಿದೆ.

ಬದಲಾಗುತ್ತಿರುವ ಮಾರುಕಟ್ಟೆ ಕೇಂದ್ರಿತ ಜಗತ್ತಿನ ಪರಿಕಲ್ಪನೆಗೆ ಸರಿಯಾಗಿ ವಿದ್ಯಾರ್ಥಿಗಳನ್ನು ರೂಪಿಸುವ ಕೆಲಸಗಳನ್ನು ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ ನಿಜ. ಅದೇ ಹೊತ್ತಲ್ಲಿ ಅವು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಆಲೋಚನೆಗಳು ಬೆಳೆಯದಂತೆ ಮಾಡಿವೆ. ಇವತ್ತಿನ ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳಲ್ಲಿ ವಿಮರ್ಶೆಗೆ ಅವಕಾಶಗಳೇ ಇಲ್ಲ. ಲೋಕಸೇವಾ ಆಯೋಗದ ಪರೀಕ್ಷೆಗಳು ಸರಿ–ತಪ್ಪುಗಳನ್ನು ಗುರುತಿಸುವುದಕ್ಕೆ ಸೀಮಿತವಾಗಿವೆ. ಇಂಥ ಪರೀಕ್ಷೆಗಳು ಪುಸ್ತಕವೊಂದರ ಓದುವ ಖುಷಿಯನ್ನೇ ಕಸಿದುಕೊಂಡಿವೆ. ಇವತ್ತು ತಾಂತ್ರಿಕತೆಯೇ ಅಂತಿಮವಾದ್ದರಿಂದ, ಅದನ್ನು ಆಧರಿಸಿ ಆನ್‌ಲೈನ್ ಪರೀಕ್ಷೆಗಳು ನಡೆಯುತ್ತವೆ. ಮೌಲ್ಯಮಾಪಕರು ಗಣಿತದ ನಿಖರತೆಯನ್ನು ಭಾಷೆ ಮತ್ತು ತತ್ತ್ವಶಾಸ್ತ್ರದಲ್ಲೂ ಬಯಸುತ್ತಿದ್ದಾರೆ. ಇದು ತತ್ತ್ವಶಾಸ್ತ್ರದ ಸಾವು, ಭಾಷೆಯ ಸಾವು.

ಶಿಕ್ಷಣ ಕ್ಷೇತ್ರದಲ್ಲಿ ಭಾಷೆಗಳ ಅಧ್ಯಯನ ಈಗಾಗಲೇ ಪ್ರಸ್ತುತತೆ ಕಳೆದುಕೊಂಡಿದೆ. ತತ್ತ್ವಶಾಸ್ತ್ರದ ವಿಭಾಗಗಳತ್ತ ವಿದ್ಯಾರ್ಥಿಗಳು ಬರುತ್ತಿಲ್ಲ. ಹಣದ ಕೊರತೆಯಿಂದ ಮಾನವಿಕಗಳು ಮುಚ್ಚಿಹೋಗುತ್ತಿವೆ. ವಿಶ್ವವಿದ್ಯಾಲಯಗಳಿಂದ ಹೊರಗಡೆ ಇರುವವರು ಮಾರ್ಟಿನ್ ಹೈಡೆಗ್ಗರ್ ಹೇಳಿದಂತೆ, ‘ಮರು ಓದುವಿಕೆ’ಯನ್ನು ಹುಟ್ಟುಹಾಕುತ್ತಿಲ್ಲ. ಇದರಿಂದಾಗಿ ಭಾಷೆ ಮತ್ತು ತತ್ತ್ವಶಾಸ್ತ್ರಗಳ ಕುರಿತಾದ ನಮ್ಮ ಚಿಂತನೆಗಳು ರೂಪಾಂತರಗೊಂಡಾದರೂ ಉಳಿಯುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹೆಚ್ಚಿನವರು ತಮ್ಮ ತಕ್ಷಣದ ಲಾಭಕ್ಕಾಗಿ, ಪ್ರಭುತ್ವ ಹೇಳಿದುದನ್ನು ಅಧಿಕೃತಗೊಳಿಸಿ ದೃಢೀಕರಿಸುತ್ತಿದ್ದಾರೆ. ಹೊಸತನ್ನು ಹುಡುಕುವುದಕ್ಕಿಂತ ಪ್ರಭುತ್ವದ ಪರವಾಗಿದ್ದೇನೆ ಎಂದು ಘೋಷಿಸಿಕೊಳ್ಳುವುದು ಇವತ್ತು ಸುಲಭದ ಕೆಲಸವಾಗಿದೆ. ಈ ಬೆಳವಣಿಗೆಗಳು ನಾವು ಕೇಳಬಹುದಾದ ಪ್ರಶ್ನೆಗಳಿಗೆ ಮೊದಲೇ ಸಿದ್ಧಮಾಡಿಟ್ಟುಕೊಂಡ ಉತ್ತರಗಳನ್ನು ನೀಡುವಂತೆ ಮಾಡಿದೆ. ಇದನ್ನು ತತ್ತ್ವಶಾಸ್ತ್ರದ ಪೊಳ್ಳು ಮಾದರಿಗಳೆಂದು ಕರೆಯಬಹುದು. ಈ ನಕಲಿ ಮಾದರಿಗಳು ರಾಜಕಾರಣದ ಅಸಲಿ ಜಾಹೀರಾತುಗಳಂತೆ ಕೆಲಸ ಮಾಡುತ್ತಿವೆ. ಇಂಥ ದುರ್ಭರ ಸನ್ನಿವೇಶದಲ್ಲಿ ಹೀಗೇ ಎಲ್ಲವನ್ನೂ ಕೊನೆಗೊಳ್ಳಲು ಬಿಡಬೇಕೋ ಅಥವಾ ಹೋರಾಟಗಳ ಮೂಲಕ ಭಾಷೆ, ತತ್ತ್ವಶಾಸ್ತ್ರಗಳನ್ನು ಉಳಿಸಿಕೊಳ್ಳಬೇಕೋ?



ವಾಚಕರ ವಾಣಿ

ಚುನಾವಣೆ: ಲೇಖಕಿಯರಿಗೇಕೆ ನಿರಾಸಕ್ತಿ?

ಡಿ. 14ರಂದು ನಡೆದ ಕರ್ನಾಟಕ ಲೇಖಕಿಯರ ಸಂಘದ ಚುನಾವಣೆಯಲ್ಲಿ ಶೇ 50ಕ್ಕೂ ಕಡಿಮೆ ಮತದಾನ ನಡೆದಿರುವುದು ವಿಷಾದದ ಸಂಗತಿ. ಮಹಿಳಾ ಮೀಸಲಾತಿ ಮತ್ತು ಸಮಾನತೆಗಾಗಿ ಹೋರಾಟಗಳು ನಡೆಯುತ್ತಿರುವ ಸಂದರ್ಭ ಇಂದಿನದು. ಪೂರ್ಣ ಮಹಿಳೆಯರೇ ಇರುವ, ಪ್ರಬುದ್ಧ ಎನ್ನಿಸಿಕೊಂಡು ಮಾದರಿ ಆಗಿರಬೇಕಾದ ಸಂಸ್ಥೆಯೊಂದರ ಚುನಾವಣೆಯಲ್ಲಿ ಅರ್ಧದಷ್ಟು ಲೇಖಕಿಯರು ಮತದಾನದಿಂದ ದೂರ ಉಳಿದಿರುವುದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

‘ಶಾಂತಿಯ ತೋಟ’ಕ್ಕೆ ದ್ವೇಷ ಭಾಷಣ ಸಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ದ್ವೇಷ ಭಾಷಣ ತಡೆಗೆ ಕಾನೂನು ತರುತ್ತಿರುವುದು ಸ್ವಾಗತಾರ್ಹ. ದ್ವೇಷ ಭಾಷಣಗಳು ಸಾಮಾಜಿಕ ಜಾಲತಾಣಗಳ ಮೂಲಕ ಕ್ಷಿಪ್ರವಾಗಿ ಜನರನ್ನು ತಲಪುತ್ತವೆ. ಈ ಭಾಷಣಗಳಿಂದ ಪ್ರಚೋದನೆಗೊಳ್ಳುವ ಜನ, ವಿಶೇಷವಾಗಿ ಯುವಜನ ಅಹಿತಕರ ಘಟನೆಗಳಲ್ಲಿ ಭಾಗಿಯಾಗುವ ಸಾಧ್ಯತೆಯಿದೆ. ಕೋಮು, ಧರ್ಮ, ಗಡಿ, ಭಾಷೆ ಸೇರಿದಂತೆ ಯಾವುದೇ ಕಾರಣಕ್ಕಾಗಿ ನಡೆಯುವ ಸಂಘರ್ಷದಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗಿ, ನಾಡಿನ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ದ್ವೇಷ ಭಾಷಣ ತಡೆ ಕಾನೂನು ಸಮರ್ಪಕವಾಗಿ ಜಾರಿಗೆ ಬಂದರೆ, ಕುವೆಂಪು ಅವರ ಆಶಯದ ‘ಸರ್ವ ಜನಾಂಗದ ಶಾಂತಿಯ ತೋಟ’ ರೂಪುಗೊಳ್ಳುತ್ತದೆ.

ಎಸ್.ಎಂ. ಸಕ್ರಿ, ರಾಮದುರ್ಗ

ಶಾಮನೂರು: ವಿರೋಧಾಭಾಸಗಳ ವ್ಯಕ್ತಿತ್ವ

ಒಂದು ಮಟ್ಟದ ವಾಣಿಜ್ಯ ನಗರಿಯಾಗಿದ್ದ ದಾವಣಗೆರೆಯನ್ನು ಭರ್ಜರಿ ವ್ಯಾಪಾರ ನಗರಿಯನ್ನಾಗಿಸಿದ್ದಲ್ಲದೆ, ಮೌಲಿಕ ವಿದ್ಯಾನಗರಿಯನ್ನಾಗಿಯೂ ಮಾಡಿದ ಕೀರ್ತಿ ಶಾಮನೂರು ಶಿವಶಂಕರಪ್ಪ (ನಿಧನ: ಡಿ. 14) ಅವರದು. ಈ ಹಾದಿಯಲ್ಲಿ ಅವರು ಹೆಸರುಗಳಿಸಿದರು, ಅಪಾರ ಹಣವನ್ನೂ ಗಳಿಸಿದರು. ವಿದ್ಯಾಕ್ಷೇತ್ರಕ್ಕೆ ದೊಡ್ಡ ಕೊಡುಗೆಯನ್ನು ನೀಡಿದರು; ಅದೇ ವೇಳೆ, ವೈದ್ಯಕೀಯ ವಿದ್ಯಾಭ್ಯಾಸವು ದುಬಾರಿ ಆಗುವಲ್ಲಿ ಪ್ರಮುಖ ಪಾತ್ರವನ್ನೂ ವಹಿಸಿದರು. ಒಂದಷ್ಟು ಕಾಲ ಹಲವು ಪ್ರಮುಖ ರಾಜಕಾರಣಿಗಳನ್ನು ಬೆರಳ ತುದಿಯಲ್ಲಿ ಕುಣಿಸಿದವರು ಅವರು. ಈ ಎಲ್ಲಾ ಕಾರಣಗಳಿಂದಾಗಿ ಅವರು ನನಗೆ ಅತಿ ವಿಶೇಷ ವ್ಯಕ್ತಿಯ ರೂಪದಲ್ಲಿ ಕಾಣಿಸುತ್ತಿದ್ದರು!

ದಾವಣಗೆರೆಯಲ್ಲಿ ಅವರ ಬಗ್ಗೆ ಒಂದು ಜೋಕ್ ಹರಿದಾಡುತ್ತಿತ್ತು. ಗೆಳೆಯರೊಡನೆ ಅವರು ತಾಜ್ ಮಹಲ್ ನೋಡಲು ಹೋದರಂತೆ. ತಾಜ್ ಎದುರಿಗೆ ಕುಳಿತು ಅದರ ಸೌಂದರ್ಯವನ್ನು ಸವಿಯುವ ಬದಲು, ಗೆಳೆಯರೊಡನೆ ಅಕ್ಕಿ ವ್ಯಾಪಾರದ ಬಗ್ಗೆ ಮಾತಾಡತೊಡಗಿದರಂತೆ!

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ದ್ವೇಷ ಭಾಷಣ!

ದ್ವೇಷವಿಲ್ಲದ ಭಾಷಣ
ಅದಾವುದಯ್ಯಾ?
ದ್ವೇಷವೇ
ಭಾಷಣಕ್ಕೆ ಭೂಷಣ!
ಭಾಷಣ ಮಾಡುವುದೇ
ದ್ವೇಷ ಕಾರುವುದಕ್ಕಾಗಿ!
ದ್ವೇಷ ಭಾಷಣಕ್ಕೆ ತಡೆ
ಭಾಷಣಕ್ಕೇ
ತಡೆ ಒಡ್ಡಿದಂತೆ!

ಪಿ.ಜೆ. ರಾಘವೇಂದ್ರ, ಮೈಸೂರು

ವೇಗದ ಚಾಲನೆಗೆ ಪ್ರಾಣಿಗಳ ಬಲಿ ಬೇಡ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ವಾಹನ ಚಾಲಕರ ವೇಗದ ಚಾಲನೆಗೆ ಅನುಕೂಲಕರವಾಗಿದೆ. ಆ ರಸ್ತೆಯಲ್ಲಿ ಮೂಕಪ್ರಾಣಿಗಳು ಓಡಾಡುವುದನ್ನು ವಾಹನ ಸವಾರರು ಗಮನಕ್ಕೆ ತೆಗೆದುಕೊಳ್ಳಬೇಕು. ಇತ್ತೀಚೆಗೆ ಮೈಸೂರಿನಿಂದ ಮಂಡ್ಯಕ್ಕೆ ದ್ವಿಚಕ್ರ ವಾಹನದಲ್ಲಿ ಎಕ್ಸ್‌ಪ್ರೆಸ್ ಹೈವೇಯ ಸರ್ವೀಸ್ ರಸ್ತೆಯಲ್ಲಿ ಬರುವಾಗ ನಾಲ್ಕೈದು ಕಡೆ ನಾಯಿಮರಿಗಳು ರಸ್ತೆಯಲ್ಲಿ ಸತ್ತು ಅಪ್ಪಚ್ಚಿಯಾಗಿ ಇರುವುದನ್ನು ನೋಡಿ ಕರುಳು ಕಿವುಚಿದಂತಾಯಿತು. ಪ್ರಾಣಿಗಳದೂ ಜೀವವೇ ಎಂಬುದನ್ನು ವಾಹನ ಚಾಲನೆ ಮಾಡುವವರು ಅರಿತುಕೊಳ್ಳಬೇಕು.

ಯೋಗೇಶ್ ವೈ.ಸಿ., ಮೈಸೂರು

ನಿರುದ್ಯೋಗ ಸಮಸ್ಯೆ: ಸರ್ಕಾರ ಸ್ಪಂದಿಸಲಿ

ಸರ್ಕಾರಿ ನೌಕರಿ ಹಂಬಲದಲ್ಲಿರುವ ತರುಣ ತರುಣಿಯರು ಸರ್ಕಾರದಿಂದ ಉದ್ಯೋಗ ನೇಮಕಾತಿ ಪ್ರಕ್ರಿಯೆ ನಡೆಯದೆ ಹೋದಾಗ ನಿರಾಶರಾಗುವುದು ಸಹಜ. ಈ ನಿರಾಶೆಯಲ್ಲಿ ಕೆಲವರು ಜೀವಹಾನಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ದೇಶದಲ್ಲಿ ಕೋಟ್ಯಂತರ ನಿರುದ್ಯೋಗಿಗಳಿದ್ದಾರೆ. ಉದ್ಯೋಗ ದೊರೆಯದಿರುವುದು ವ್ಯಕ್ತಿ ಸಾಮರ್ಥ್ಯದ ಪ್ರತಿಬಿಂಬವಲ್ಲ. ನಿರಾಶೆಯನ್ನು ದಾಟಿ ಪ್ರಯತ್ನ ಮುಂದುವರಿಸುವುದು ಅಗತ್ಯ. ಸರ್ಕಾರಿ ನೌಕರಿಗಿಂತಲೂ ಉತ್ತಮವಾದ ಖಾಸಗಿ ಅವಕಾಶಗಳು ಈಗ ಸಾಕಷ್ಟಿವೆ. ಸರ್ಕಾರವೂ ನಿರುದ್ಯೋಗಿಗಳ ಭಾವನೆಗಳಿಗೆ ಸ್ಪಂದಿಸಿ ವಿಳಂಬವಿಲ್ಲದೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು.

ಲಾರೆನ್ಸ್ ಡಿಸೋಜಾ, ರಾಯಚೂರು

ನಾಡಪ್ರಭು ಪುತ್ಥಳಿ ಕತ್ತಲಿನಿಂದ ಹೊರಬರಲಿ

ಇತ್ತೀಚೆಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹೋಗುವಾಗ, ಸರ್ಕಾರ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಕಣ್ತುಂಬಿಕೊಳ್ಳಬೇಕು ಎನ್ನಿಸಿತು. ಅಲ್ಲಿಗೆ ಹೋಗುವ ಮಾರ್ಗಸೂಚಿ ಫಲಕಗಳು ಕಣ್ಣಿಗೆ ಬೀಳಲಿಲ್ಲ. ಕತ್ತಲಿನಲ್ಲೇ ಕಣ್ಣಾಡಿಸುತ್ತಾ ಸಾಗಿದಾಗ, ಎಡಭಾಗದಲ್ಲಿ ಬೃಹತ್ ಮೂರ್ತಿಯ ಪಾರ್ಶ್ವವಷ್ಟೇ ಕಣ್ಣಿಗೆ ಬಿತ್ತು. ಹಿಂದಿರುಗುವಾಗಲೂ ಪೂರ್ಣವಾಗಿ ನೋಡುವುದು ಸಾಧ್ಯವಾಗಲಿಲ್ಲ. ಪ್ರತಿಮೆ ಕತ್ತಲಿನಿಂದ ಆವೃತವಾಗಿತ್ತು. ಪ್ರತಿಮೆಯ ಬಳಿ ಸಾಗಲು ಯಾವುದೇ ಹಾದಿ ದೊರಕಲಿಲ್ಲ. ಸಾರ್ವಜನಿಕರ ದರ್ಶನಕ್ಕೆ ದೊರಕದ ಕೆಂಪೇಗೌಡರ ಮೂರ್ತಿ ಏಕಾಂತವಾಸಿಯಾಗಿದೆ ಅನ್ನಿಸಿತು. ಸರ್ಕಾರದ ಅವಗಣನೆ ಸಲ್ಲದು. ರಾತ್ರಿಯಲ್ಲಿ ದೂರದಿಂದಲೇ ಮನಸೆಳೆಯುವಂತೆ ದೀಪಾಲಂಕಾರ ಮಾಡಲಿ. ಇಲ್ಲವಾದರೆ ಇಷ್ಟು ದೊಡ್ಡ ಮೂರ್ತಿ ಪ್ರತಿಷ್ಠಾಪಿಸಿದ್ದು ವ್ಯರ್ಥವಾಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚುರುಮುರಿ



ಚೋರಿ ಪರಸಂಗ

● ಲಿಂಗರಾಜು ಡಿ.ಎಸ್.

‘ವೋಟ್ ಚೋರಿ ಅಂತ ಮಾತಾಡ್ತಾವ್ರಲ್ಲಾ... ಕಮಲದಲ್ಲಿ, ಕೈಪಕ್ಷದಲ್ಲಿ ಸೀಟು ಚೋರಿಯಾಗ್ಯದರ ಬಗ್ಗೆ ಹೈಕಮಾಂಡುಗಳು ಮಾತೇ ಆಡ್ತಿಲ್ಲವಂತೆ?’ ಅಂತು ಯಂಟಪ್ಪಣ್ಣ.

‘ಬುಡಣ್ಣೆ, ಇಂಡಿ ಇಮಾನ ಟೇಮಿಗೆ ಕರೆಟ್ಟಾಗಿ ಹಾರದೆ ಟೈಮು ಚೋರಿ, ಕಾಸು ಚೋರಿ, ನಂಬಿಕೆ ಚೋರಿ ಅಗಿತ್ತಲ್ಲ ಅದುನ್ನ ಹೇಳಿ’ ತಿಪ್ಪಣ್ಣ ಕೇಳಿದ.

‘ಡ್ರೈವರುಗಳು ನಿದ್ದೆ ಮಾಡಕ್ಕೂ ಬುಡದೇ ಇಮಾನ ಓಡಿಸಿ ಅಂತ ರೋಸ್ತರಂತೆ. ಅವರು ತೂಕಡಿಸಿ ಇಮಾನ ಮುಗ್ಗುರಿಸಿದರೆ ಏನು ಮಾಡದು?’ ಅಂತ ತುರೇಮಣೆಗೆ ಕೇಳಿದೆ.

‘ಜನ ಇಮಾನ ನಿಲ್ದಾಣದೇಲಿ ಉಂಬಕ್ಕಿಲ್ಲದೆ, ಕುಡಿಯಕ್ಕೆ ನೀರಿಲ್ದೆ ನರಕ ಕಂಡ್ರೂವೆ ಸರ್ಕಾರ ಮಾತ್ರ ಊರಮ್ಯಾಲೆ ಊರು ಬಿದ್ರೂ ನನಗೇನು ಅಂತ ಸುಮ್ಮಗೆ ಕೂತುತ್ತಂತೆ? ಇಮಾನ ಹಾರದಿದ್ರೂ ಅರ್ಧ ದುಡ್ಡು ಮಾತ್ರ ವಾಪಾಸ್ ಕೊಟ್ಟವ್ರಂತೆ. ಅದ್ಯಾಕ್ಲಾ?’ ಯಂಟಪ್ಪಣ್ಣ ಆಶ್ಚರ್ಯದಲ್ಲಿತ್ತು.

‘ಇಮಾನದ ಟಿಕೆಟ್, ಆಸ್ಪತ್ರೆ ಬಿಲ್ಲು ಒಂದೇ ಕನಣ್ಣೆ. ಬೇಕೋ ಬ್ಯಾಡವೋ ಇಸದ ಜ್ವರದಂಗೆ ಏರ್ತಾ ಇರತದೆ. ಇಮಾನದ ಚಾರ್ಜಿನ ಜೊತೆಗೆ ಸರ್ಕಾರದ ಟ್ಯಾಕ್ಸು, ಇಮಾನಕ್ಕೆ ಹುಯ್ಯೋ ಎಣ್ಣೆ, ನಾವು ತಕ್ಕೋಗೋ ಟ್ರಂಕು, ಬಟ್ಟೆ ಚೀಲದ ತೂಕ, ಇಮಾನ ನಿಲ್ದಾಣದ ಟ್ಯಾಕ್ಸು ಎಲ್ಲಾ ಸೇರಿಕ್ಯಂದರೆ ರೇಟು ನಮ್ಮ ಗ್ವಾಮಾಳೆಗಂಟಾ ಬತ್ತದೆ’ ತುರೇಮಣೆ ವಿವರಿಸಿದರು.

‘ಅಲ್ಲ ಕನ್ರೋ, ಬಸ್ಸು, ಟ್ರೈನು ಚಾರ್ಜು ಪಿಕ್ಸ್ ಮಾಡ್ಯವುರಲ್ಲಾ, ಹಂಗೆ ಇಮಾನದ ಚಾರ್ಜುನೂ ಪಿಕ್ಸ್ ಮಾಡಕ್ಕೆ ಸರ್ಕಾರಕ್ಕೇನು ಮಲ್ಲಾಗರು ಬಂದದೆ?’ ಯಂಟಪ್ಪಣ್ಣ ವಿಚಾರಿಸಿತು.

‘ದಿಟ ಕನಣ್ಣೆ. ಸರ್ಕಾರ ಇಮಾನದ ಟಿಕೆಟ್ ರೇಟ್ನೂ ಬಸ್ಸಿನ ರೇಟು ಥರವೇ ಪಿಕ್ಸ್ ಮಾಡಿಬುಟ್ಟು ಸಸ್ತಾ ವಾಯುಶಕ್ತಿ ಗ್ಯಾರೆಂಟಿ ಯೋಜನೆ ಕೊಟ್ರೆ ದೇಸದ ಹೆಣ್ಣಾಳು, ಗಂಡಾಳುಗಳ ವೋಟೆಲ್ಲಾ ಕಮಲ ಪಕ್ಸಕ್ಕೇ ಸಿಕ್ತದೆ’. ಇವರೆಲ್ಲ ನಕ್ಕರೂ ಕೂಡ ನನ್ನ ಘನವಾದ ಅಲೋಚನೆ ಮೋದಿ ಮಾವಾರಿಗೆ ಮಾತ್ರ ಅರ್ಥವಾತದೆ ಕಂಡ್ರೀ.

ಸಂಗತ

‘ವಿಶೇಷ ದೃಷ್ಟಿ’ ವಿದ್ಯೆಯೆನ್ನುವ ಮೋಸದ ಸೃಷ್ಟಿ

ಒಳಗಣ್ಣನ್ನು ತೆರೆಯಿಸುತ್ತೇವೆ ಎನ್ನುವವರು, ಕಣ್ಣಿದ್ದವರನ್ನೂ ಕುರುಡರನ್ನಾಗಿಸುವವರು. ವಿಶೇಷ ದೃಷ್ಟಿಶಕ್ತಿ ಸಾಧ್ಯವಿದ್ದರೆ, ಆ ವಿದ್ಯೆಯನ್ನು ಅಂಧರ ಮೇಲೆ ಪ್ರಯೋಗಿಸಬಹುದು.

● ಡಾ. ಗಿರಿಧರ ರಾವ್ ಹವಲ್ದಾರ್

‘ಗಾಂಧಾರಿ’ ವಿದ್ಯೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿನಿ ಒಬ್ಬಳ ಬಗೆಗಿನ ‘ಪ್ರಜಾವಾಣಿ’ ವರದಿಯನ್ನು (ಡಿ. 12) ಗಮನಿಸಿದೆ. ‘ಗಾಂಧಾರಿ’ ವಿದ್ಯೆ, ‘ಮಧ್ಯ ಮೆದುಳಿನ ಸಕ್ರಿಯಗೊಳಿಸುವಿಕೆ’ ಅಥವಾ ‘ಮೂರನೇ ಕಣ್ಣು ತೆರೆಯಿಸುವುದು’ ಇತ್ಯಾದಿ ಹೆಸರುಗಳಲ್ಲಿ ಕರೆಸಿಕೊಳ್ಳುವ ಹಗಲುದರೋಡೆ ವಿದ್ಯೆಯಿದು. ಇದರ ಬಗ್ಗೆ ಸಾಮಾಜಿಕ ಎಚ್ಚರ ಮೂಡಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ದೇಶದ ಎಲ್ಲೆಡೆಗೂ ಗಾಂಧಾರಿ ವಿದ್ಯೆ ಹಬ್ಬುತ್ತಿದೆ. ಹತ್ತರಿಂದ ಹನ್ನೆರಡು ದಿನಗಳ ತರಬೇತಿಗೆ ಸಾವಿರಾರು ರೂಪಾಯಿಗಳ ದುಬಾರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ. 64 ವಿದ್ಯೆಗಳಲ್ಲಿ ‘ಗಾಂಧಾರಿ’ಯೂ ಒಂದೆಂದೂ, ಗುರುವಿನ ಮಾರ್ಗದರ್ಶನದಿಂದ ಮಾತ್ರ, ಕೆಲವು ತಂತ್ರಗಳ ಮೂಲಕ ಇದನ್ನು ಕಲಿಯಲು ಸಾಧ್ಯವೆಂದು ನಂಬಿಸಲಾಗುತ್ತಿದೆ.

‘ಗಾಂಧಾರಿ’ ವಿದ್ಯೆ ಕಲಿಯುವುದರಿಂದ ಮಕ್ಕಳಲ್ಲಿ ನೆನಪಿನ ಶಕ್ತಿ ಹೆಚ್ಚಾಗುವುದೆಂದೂ, ಮಕ್ಕಳ ಆತ್ಮವಿಶ್ವಾಸ ಮತ್ತು ಏಕಾಗ್ರತೆ ಹೆಚ್ಚುವುದೆಂದೂ, ಇದೊಂದು ಮನೋವಿಜ್ಞಾನದ ಪ್ರಯೋಗವೆಂದೂ, ಮಕ್ಕಳಲ್ಲಿ ಅತಿಯಾದ ಅಭ್ಯಾಸದಿಂದಾಗುವ ಒತ್ತಡವನ್ನು ಇದರ ಮೂಲಕ ನಿವಾರಿಸಬಹುದೆಂದು ಹೇಳಲಾಗುತ್ತಿದೆ. ಈ ತರಬೇತಿ ಪಡೆದ ಮಕ್ಕಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಮ್ಮ ಕೆಲಸಗಳನ್ನು ಮಾಡಲು ಸಮರ್ಥರಾಗುತ್ತಾರೆ ಎನ್ನುವ ಹಸಿ ಸುಳ್ಳುಗಳನ್ನು ಹೇಳಿ ಪೋಷಕರನ್ನು ಮರುಳು ಮಾಡಲಾಗುತ್ತಿದೆ. ರಾತ್ರಿ ಕಳೆದು ಬೆಳಗಾಗುವುದರೊಳಗೆ ತಮ್ಮ ಮಕ್ಕಳು ಇತರ ಮಕ್ಕಳಿಗಿಂತ ಹೆಚ್ಚು ಬುದ್ಧಿವಂತರಾಗಬೇಕು ಎಂದು ಆಸೆಪಡುವ ಪೋಷಕರು, ‘ಗಾಂಧಾರಿ’ ವಿದ್ಯೆಯ ಜಾಲಕ್ಕೆ ಸಿಲುಕುತ್ತಿದ್ದಾರೆ; ಹಣ ಕಳೆದುಕೊಳ್ಳುವುದರ ಜೊತೆಗೆ ತಮ್ಮ ಮಕ್ಕಳನ್ನು ಭ್ರಮೆಗೆ ದೂಡುತ್ತಿದ್ದಾರೆ.



ಮಕ್ಕಳ ಕಣ್ಣಿಗೆ ಬಟ್ಟೆ ಕಟ್ಟಿ, ಆ ಮಗು ಓದುವುದು, ಬರೆಯುವುದು, ಬಣ್ಣದ ಚೆಂಡುಗಳನ್ನು ಗುರುತಿಸುವುದು, ಚಿತ್ರಕ್ಕೆ ಬಣ್ಣ ತುಂಬುವುದು, ವಸ್ತುಗಳನ್ನು, ಕಾರ್ಡುಗಳನ್ನು ಸ್ಪರ್ಶಜ್ಞಾನದಿಂದಲೇ ಗುರುತಿಸಿ ಹೇಳುವುದು, ಇತ್ಯಾದಿಗಳನ್ನು ಮಾಡಿಸಿ, ಮಕ್ಕಳ ಮಧ್ಯದ ಮೆದುಳು ಸಕ್ರಿಯಗೊಂಡಿರುವುದರಿಂದ ಸೂಪರ್ ವೇಗದ ಕಲಿಕೆಗೆ ಅವರು ಒಳಗಾಗಿದ್ದಾರೆಂದು ಹೇಳಲಾಗುತ್ತದೆ. ನಮ್ಮ ಎಡ ಮತ್ತು ಬಲ ಮೆದುಳಿನ ಸಾಮರ್ಥ್ಯವನ್ನು ಗರಿಷ್ಠ ಮಟ್ಟದಲ್ಲಿ ಬಳಸಲು ಸಾಧ್ಯ ಆಗಬೇಕಾದರೆ, ಮಧ್ಯ ಇರುವ ಮೆದುಳನ್ನು ಸಕ್ರಿಯಗೊಳಿಸಲೇಬೇಕು ಎಂಬ ಸುಳ್ಳನ್ನು ಹೇಳುವ ಈ ಜಾಲವು, ಈ ಸಕ್ರಿಯೆಗೊಳಿಸುವಿಕೆಯನ್ನು ವಿಶೇಷ ಜ್ಞಾನ ಇರುವ ತಜ್ಞರಿಂದ ಕಲಿಸಲಾಗುತ್ತದೆ ಎಂದು ನಂಬಿಸುತ್ತಾರೆ.

ಮ್... ಮ್... ಮ್... ಎಂಬ ಶಬ್ದ ಹೊರಡಿಸುವುದು, ಕಣ್ಣುಗುಡ್ಡೆಗಳನ್ನು ತಿರುಗಿಸುವುದು, ಕೈ ಬೆರಳುಗಳನ್ನು ಒಂದಕ್ಕೊಂದು ನಿಧಾನವಾಗಿ ಅಥವಾ ವೇಗವಾಗಿ ಮುಟ್ಟಿಸುವುದು ಸೇರಿದಂತೆ ಹಲವು ತಂತ್ರಗಳಿಂದ ಮೆದುಳಿನ ಸಕ್ರಿಯಗೊಳಿಸುವಿಕೆ ಆಗಿದೆ ಎಂದು ಪೋಷಕರನ್ನು ನಂಬಿಸುತ್ತಾರೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಓದುವ, ಬರೆಯುವ, ಬಣ್ಣ ಗುರುತಿಸುವ ನಾಟಕವನ್ನು ತರಬೇತಿ ಪಡೆದ ಮಕ್ಕಳಿಂದ ಮಾಡಿಸುತ್ತಾರೆ. ಬೇರೆಯವರಿಗಿಂತ ವಿಶೇಷ ಜ್ಞಾನವನ್ನು ಪಡೆದಿದ್ದೇನೆ ಎಂದು ಭ್ರಮಿಸುವ ಆ ಮಕ್ಕಳು, ಕಣ್ಣಿಗೆ ಸಡಿಲವಾಗಿ ಬಟ್ಟೆ ಕಟ್ಟಿಕೊಂಡು, ತಮ್ಮ ಕಣ್ಣುಗಳ ಮಟ್ಟಕ್ಕಿಂತ ಕೆಳಗೆ ಹಿಡಿದು ತೋರಿಸುವ ನೋಟಿನ ಸಂಖ್ಯೆಯನ್ನು ಹೇಳುವುದು ಹಾಗೂ ವಿವಿಧ ಬಣ್ಣದ ಚೆಂಡುಗಳನ್ನು ಗುರುತಿಸುವುದು, ಚಿತ್ರಗಳಿಗೆ ಬಣ್ಣವನ್ನು ತುಂಬುವುದು, ಪುಸ್ತಕಗಳನ್ನು ಓದುವುದು ಹಾಗೂ ಬರೆಯುವ ಚಟುವಟಿಕೆಗಳನ್ನು ಮಾಡುತ್ತಾರೆ.

ಮಕ್ಕಳು ತಮ್ಮ ಕಣ್ಣಿನ ಮಟ್ಟಕ್ಕಿಂತ ಮೇಲೆ, ಕಣ್ಣಿನ ಎಡ ಅಥವಾ ಬಲ ಬದಿಗಳಲ್ಲಿ, ತಲೆಯ ಮೇಲೆ, ಬೆನ್ನಿನ ಹಿಂದೆ ಹಿಡಿದು ತೋರಿಸುವ ಅಥವಾ ಸ್ವಲ್ಪ ದೂರದಲ್ಲಿರುವ, ಗೋಡೆಯ ಆಚೆಗಿರುವ ವಸ್ತುಗಳನ್ನು ಗುರುತಿಸಲು, ಓದಲು ಅಥವಾ ನೋಡಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕಿದೆ. ಮಕ್ಕಳ ಕಣ್ಣುಗಳನ್ನು ಅವರ ಕಣ್ಣುಗಳ ಕೆಳಭಾಗದಲ್ಲಿ ಸಂದು ಉಳಿಯದಂತೆ ಬಿಗಿಯಾಗಿ ಕಟ್ಟುವುದು ಅಥವಾ ಕಟ್ಟಿದ ಬಟ್ಟೆಯ ಮೇಲೆ ಸ್ವಿಮ್ಮಿಂಗ್ ಮಾಡುವಾಗ ಬಳಸುವ ಗಾಗಲ್ಸ್ ಹಾಕಿ ಬಿಗಿ ಮಾಡಿದರೆ, ಮೂಗಿನ ಕೆಳಗೆ ಇಣುಕಿ ನೋಡಲು ಅವರಿಗೆ ಸಾಧ್ಯವಾಗುವುದಿಲ್ಲ. ಆಗ, ಗಾಂಧಾರಿ ವಿದ್ಯೆಯನ್ನು ಕಲಿತಿದ್ದೇನೆ ಎಂದು ಹೇಳುವ ಮಕ್ಕಳಿಗೆ ಯಾವುದೇ ವಸ್ತುಗಳನ್ನು ಓದಲು ಅಥವಾ ನೋಡಲು ಸಾಧ್ಯವಾಗುವುದಿಲ್ಲ. ಅನೇಕ ಶಾಲಾ ಕಾರ್ಯಕ್ರಮಗಳಲ್ಲಿ ‘ಈ ವಿದ್ಯೆ ಒಂದು ಮೋಸ’ ಎಂಬುದನ್ನು ನಾನು ಪ್ರಾಯೋಗಿಕವಾಗಿ ತೋರಿಸಿದ್ದೇನೆ.

ಗಾಂಧಾರಿ ವಿದ್ಯೆಯು ಸತ್ಯವೇ ಆಗಿದ್ದಲ್ಲಿ, ಅದನ್ನು ಕಣ್ಣಿರುವ ಮಕ್ಕಳಿಗೆ ಕಲಿಸುವುದರಲ್ಲಿ ಅರ್ಥವಿಲ್ಲ. ಬದಲಾಗಿ, ಕುರುಡು ಮಕ್ಕಳಿಗೆ ಆ ವಿದ್ಯೆಯನ್ನು ಕಲಿಸಿ, ಅವರು ಕುರುಡು ಆಗಿದ್ದರೂ ಎಲ್ಲವನ್ನೂ ನೋಡುವಂತೆ ದೃಷ್ಟಿ ನೀಡಬಹುದು ಅಲ್ಲವೇ?

ಮುಗ್ಧ ಮಕ್ಕಳನ್ನು ಸುಳ್ಳು ಹೇಳುವಂತೆ ಪ್ರೇರೇಪಿಸುವ ಮತ್ತು ಮೋಸದ ಉದ್ದೇಶಕ್ಕಾಗಿ ಮಕ್ಕಳನ್ನು ಬಳಸಿಕೊಳ್ಳುತ್ತಿರುವ, ಪೋಷಕರಲ್ಲಿ ಭ್ರಮೆಯನ್ನು ಹುಟ್ಟಿಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿದೆ. ಯಶಸ್ಸಿಗೆ ನೇರ ದಾರಿಗಳಿವೆಯೇ ಹೊರತು, ಅಡ್ಡ ದಾರಿಗಳಿಲ್ಲ ಎನ್ನುವುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕಾಗಿದೆ ಹಾಗೂ ತಮ್ಮ ಮಕ್ಕಳನ್ನು ಪ್ರಯೋಗಕ್ಕೆ ಒಡ್ಡುವುದನ್ನು ನಿಲ್ಲಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಉನ್ನತ ಶಿಕ್ಷಣ ಕೇಂದ್ರೀಕೃತ ನಿಯಂತ್ರಣ?



ಪ್ರಜಾವಾಣಿ ವಾರ್ತೆ

ದೇಶದ ಉನ್ನತ ಶಿಕ್ಷಣದ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲು ಹೊರಟಿರುವ ಕೇಂದ್ರ ಸರ್ಕಾರವು ಇಡೀ ವ್ಯವಸ್ಥೆಯನ್ನು ಒಂದೇ ಸಂಸ್ಥೆಯ ವ್ಯಾಪ್ತಿಯಲ್ಲಿ ತರುವ ಉದ್ದೇಶದಿಂದ 'ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ' ಮಸೂದೆ–2025 ಅನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಿದೆ.

ದೇಶದ ಉನ್ನತ ಶಿಕ್ಷಣದ ಮೇಲುಸ್ತುವಾರಿ ಮತ್ತು ನಿಯಂತ್ರಣಕ್ಕಾಗಿ 'ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ' ಎಂಬ ಹೆಸರಿನಲ್ಲಿ ಒಂದೇ ಆಯೋಗವನ್ನು ಸ್ಥಾಪಿಸುವ ಪ್ರಸ್ತಾವವನ್ನು ಶಿಕ್ಷಣ ಸಚಿವಾಲಯವು ಮಸೂದೆಯಲ್ಲಿ ಮಾಡಿದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿ ಮಸೂದೆಯನ್ನು ಸಿದ್ಧಪಡಿಸಲಾಗಿದೆ ಎಂದು ಸರ್ಕಾರ ಹೇಳಿದ್ದು, ಇದು ಕಾಯ್ದೆಯಾಗಿ ಜಾರಿಗೆ ಬಂದರೆ ಈಗಿರುವ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ), ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು (ಎನ್‌ಸಿಟಿಇ) ಹೊಸ ಆಯೋಗದೊಂದಿಗೆ ವಿಲೀನಗೊಳ್ಳಲಿವೆ.

ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಲೋಕಸಭೆಯಲ್ಲಿ ಮಸೂದೆಯನ್ನು ಸೋಮವಾರ ಮಂಡಿಸಿದರು. ತರಾತುರಿಯಲ್ಲಿ ಮಸೂದೆಯನ್ನು ಮಂಡಿಸುತ್ತಿರುವುದಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು. ಇಡೀ ಉನ್ನತ ಶಿಕ್ಷಣ ವ್ಯವಸ್ಥೆಯನ್ನೇ ಬದಲಾಯಿಸುವ ಪ್ರಸ್ತಾವ ಮಸೂದೆಯಲ್ಲಿದ್ದು, ಉನ್ನತ ಶಿಕ್ಷಣವನ್ನೂ ಕೇಂದ್ರೀಕರಣ ಮಾಡುವಂತೆ ಕಾಣುತ್ತಿದೆ. ಹೀಗಾಗಿ ಇದರ ಅಧ್ಯಯನಕ್ಕೆ ಹೆಚ್ಚು ಸಮಯ ಬೇಕು ಎಂದು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು.



ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ ಮಸೂದೆ–2025

ಮಸೂದೆಯಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳನ್ನು ಹೆಚ್ಚಿನ ಪರಿಶೀಲನೆಗೆ ಒಳಪಡಿಸುವ ಉದ್ದೇಶದಿಂದ ಅದನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಲಾಗಿದೆ.

ಮಸೂದೆಯ ಉದ್ದೇಶವೇನು?: 'ವಿವಿಗಳು ಹಾಗೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಬೋಧನೆ, ಕಲಿಕೆ, ಸಂಶೋಧನೆ ಮತ್ತು ನವೀನ ಕಲ್ಪನೆಗಳ ಅಭಿವೃದ್ಧಿಯಲ್ಲಿ ಅತ್ಯುತ್ತಮ ಸಾಧನೆ ಮಾಡುವಂತೆ ಪ್ರೇರೇಪಿಸಲು, ವಿವಿಗಳು ಮತ್ತು ಇನ್ನಿತರ ಶಿಕ್ಷಣ ಸಂಸ್ಥೆಗಳು ಸ್ವತಂತ್ರ, ಸ್ವಯಂ ಆಡಳಿತದ ಸಂಸ್ಥೆಗಳಾಗಿ ರೂಪುಗೊಳ್ಳುವುದಕ್ಕೆ ನೆರವಾಗಲು ಹಾಗೂ ಸದೃಢವಾದ, ಪಾರದರ್ಶಕವಾದ ಮಾನ್ಯತೆ ಮತ್ತು ಸ್ವಾಯತ್ತ ಹೊಂದಿರುವ ವ್ಯವಸ್ಥೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಮಸೂದೆಯನ್ನು ರೂಪಿಸಲಾಗಿದೆ' ಎಂದು ಸರ್ಕಾರ ಹೇಳಿದೆ.

'ಈಗಿನ ಉನ್ನತ ಶಿಕ್ಷಣ ವ್ಯವಸ್ಥೆ ಬಹಳ ವಿಸ್ತಾರವಾಗಿ ಬೆಳೆದಿದ್ದು, ಹಲವು ಸಾಂವಿಧಾನಿಕ ನಿಯಂತ್ರಣ ಪ್ರಾಧಿಕಾರಗಳಿವೆ. ಹೀಗಾಗಿ ಶಿಕ್ಷಣ ಸಂಸ್ಥೆಗಳು ವಿವಿಧ ಸಂಸ್ಥೆಗಳಿಂದ ಹಲವು ಅನುಮತಿ ಪಡೆಯಬೇಕಾಗುತ್ತಿದೆ. ಈ ಪ್ರಾಧಿಕಾರಗಳು ನಡೆಸುವ ಪರಿಶೀಲನೆಗಳಿಗೂ ಒಡ್ಡಿಕೊಳ್ಳಬೇಕಿದೆ. ದೇಶದ ಎಲ್ಲ ಶಿಕ್ಷಣ ವ್ಯವಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಸೇರಿದಂತೆ ಇಡೀ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರುವುದಕ್ಕಾಗಿ, ಸುಸ್ಥಿರ ಅಭಿವೃದ್ಧಿಯ ನಾಲ್ಕನೇ ಗುರಿಯೂ ಸೇರಿದಂತೆ 21ನೇ ಶತಮಾನದ ಶಿಕ್ಷಣದ ಮಹತ್ವಾಕಾಂಕ್ಷೆಯ ಗುರಿಗಳಿಗೆ ಅನುಗುಣವಾಗಿ ನಮ್ಮ ದೇಶದ ಸಂಪ್ರದಾಯ ಮತ್ತು ಮೌಲ್ಯ ವ್ಯವಸ್ಥೆಗಳಿಗೆ ಪೂರಕವಾಗಿ ಹೊಸ ವ್ಯವಸ್ಥೆ ರೂಪಿಸುವುದಕ್ಕಾಗಿ 2020ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಈ ನೀತಿಗಳಿಗೆ ಪೂರಕವಾಗಿ ಈ ಮಸೂದೆಯನ್ನು ಸಿದ್ಧಪಡಿಸಲಾಗಿದೆ' ಎಂದು ಸರ್ಕಾರ ಮಸೂದೆಯಲ್ಲಿ ವಿವರಿಸಿದೆ.

'ದೇಶದಲ್ಲಿ ಜಾಗತಿಕ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಮತ್ತು ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ (ಜಿಇಆರ್) ಹೆಚ್ಚಾಗಲು ಈ ಮಸೂದೆ ಕೊಡುಗೆ ನೀಡಲಿದೆ' ಎಂದು ಅದು ಪ್ರತಿಪಾದಿಸಿದೆ.

ಪ್ರಸ್ತಾವಿತ ಉನ್ನತ ಶಿಕ್ಷಣ ವ್ಯವಸ್ಥೆ ಹೇಗಿರಲಿದೆ?

ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ
(ಭಾರತೀಯ ಉನ್ನತ ಶಿಕ್ಷಣ ಆಯೋಗ)

ವಿಕಸಿತ ಭಾರತ ಶಿಕ್ಷಣ ಮಾನಕ ಪರಿಷತ್
(ಭಾರತೀಯ ಉನ್ನತ ಶಿಕ್ಷಣ ಮಾನದಂಡ ನಿಗದಿ ಪರಿಷತ್)
- ಅಧ್ಯಕ್ಷರು ಮತ್ತು 14 ಸದಸ್ಯರು ಇದರಲ್ಲಿ ಇರುತ್ತಾರೆ
- ಜವಾಬ್ದಾರಿ: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿರಬೇಕಾದ ಶೈಕ್ಷಣಿಕ ಗುಣಮಟ್ಟವನ್ನು ನಿಗದಿ ಮಾಡುವುದು ಮತ್ತು ಸಮನ್ವಯ ಸಾಧಿಸುವುದು

ವಿಕಸಿತ ಭಾರತ ಶಿಕ್ಷಣ ವಿನಿಯಮನ್ ಪರಿಷತ್
(ಭಾರತೀಯ ಉನ್ನತ ಶಿಕ್ಷಣ ನಿಯಂತ್ರಣ ಪರಿಷತ್)
- ಅಧ್ಯಕ್ಷರು ಮತ್ತು 14 ಸದಸ್ಯರನ್ನು ಹೊಂದಿರಲಿದೆ
- ಜವಾಬ್ದಾರಿ: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳಲು ಮತ್ತು ಉತ್ತಮ ಸಂಬಂಧ ಸಾಧಿಸಲು ಕ್ರಮಗಳನ್ನು ಕೈಗೊಳ್ಳುವುದು, ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣಕ್ಕೆ ಪ್ರೋತ್ಸಾಹ ನೀಡುವುದು ಹಾಗೂ ಶಿಕ್ಷಣ ಸಂಸ್ಥೆಗಳು ನಿಯಂತ್ರಣ ನಿಯಮಗಳ ಪಾಲನೆ ಮಾಡುವಂತೆ ನೋಡಿಕೊಳ್ಳುವುದು

ವಿಕಸಿತ ಭಾರತ ಶಿಕ್ಷಣ ಗುಣವತ್ತಾ ಪರಿಷತ್
(ಭಾರತೀಯ ಉನ್ನತ ಶಿಕ್ಷಣ ಮಾನ್ಯತಾ ಪರಿಷತ್)
- ಅಧ್ಯಕ್ಷರು ಮತ್ತು 14 ಸದಸ್ಯರು
- ಜವಾಬ್ದಾರಿ: ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು ಮತ್ತು ಮಾನ್ಯತೆ ನೀಡುವ ಸ್ವತಂತ್ರ ವ್ಯವಸ್ಥೆಯ ಮೇಲುಸ್ತುವಾರಿ

60,531 ದೇಶದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳು (ಶಿಕ್ಷಣ ಸಚಿವಾಲಯ ಮಾತ್ರವಲ್ಲದೆ ಇತರ 22 ಸಚಿವಾಲಯಗಳ ವ್ಯಾಪ್ತಿಗೆ ಬರುವ ಸಂಸ್ಥೆಗಳೂ ಸೇರಿ)

57 ಕೇಂದ್ರೀಯ ವಿಶ್ವವಿದ್ಯಾಲಯಗಳು

504 ರಾಜ್ಯ ವಿಶ್ವವಿದ್ಯಾಲಯಗಳು

512 ಖಾಸಗಿ ವಿ.ವಿಗಳ ಸಂಖ್ಯೆ

145 ಡೀಮ್ಡ್ ವಿಶ್ವವಿದ್ಯಾಲಯಗಳು

46,624 ದೇಶದಾದ್ಯಂತ ಇರುವ ಕಾಲೇಜುಗಳು

12,543 ಸ್ವತಂತ್ರ ಶಿಕ್ಷಣ ಸಂಸ್ಥೆಗಳು

146 ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳು (ಐಎನ್‌ಐ)

4 ಕೋಟಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು

ದೇಶಕ್ಕೊಂದೇ ಸಂಸ್ಥೆ

ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ ದೇಶದ ಉನ್ನತ ಶಿಕ್ಷಣದ ಆಗು ಹೋಗುಗಳನ್ನು ನೋಡುವುದಕ್ಕಾಗಿ ಮತ್ತು ವ್ಯವಸ್ಥೆಯನ್ನು ನಿಯಂತ್ರಿಸುವುದಕ್ಕಾಗಿ ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ ಅಥವಾ ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪನೆಯಾಗಲಿದೆ (ಸೆಕ್ಷನ್ 5). ಇದು ದೇಶದ ಉನ್ನತ ಶಿಕ್ಷಣದ ಅತ್ಯುನ್ನತ ಸಂಸ್ಥೆಯಾಗಲಿದೆ. ಈ ಆಯೋಗವು ಒಬ್ಬ ಅಧ್ಯಕ್ಷ ಹಾಗೂ ಗರಿಷ್ಠ 12 ಸದಸ್ಯರನ್ನು ಹೊಂದಿರಲಿದೆ. ಕೇಂದ್ರ ಸರ್ಕಾರದ ಶಿಫಾರಸಿನ ಮೇರೆಗೆ ರಾಷ್ಟ್ರಪತಿಯವರು ಅಧ್ಯಕ್ಷರನ್ನು ನೇಮಿಸಲಿದ್ದಾರೆ. ಅಧ್ಯಕ್ಷರ ಆರಂಭಿಕ ಅಧಿಕಾರಾವಧಿ ಮೂರು ವರ್ಷ. ಅದನ್ನು ಐದು ವರ್ಷಗಳವರೆಗೆ ವಿಸ್ತರಿಸಬಹುದು. ಒಮ್ಮೆ ನೇಮಕಗೊಂಡ ಅಧ್ಯಕ್ಷರನ್ನು ಮತ್ತೊಂದು ಅವಧಿಗೆ ನೇಮಕ ಮಾಡುವುದಕ್ಕೂ ಮಸೂದೆ ಅವಕಾಶ ಕಲ್ಪಿಸುತ್ತದೆ.

ಆಯೋಗದ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣಕ್ಕಾಗಿ (ವಿಕಸಿತ ಭಾರತ ಶಿಕ್ಷಾ ವಿನಿಯಮನ್ ಪರಿಷತ್) (ಸೆಕ್ಷನ್–10), ಮಾನ್ಯತೆಯನ್ನು ನೀಡುವುದಕ್ಕೆ (ವಿಕಸಿತ ಭಾರತ ಶಿಕ್ಷಾ ಗುಣವತ್ತಾ ಪರಿಷತ್) (ಸೆಕ್ಷನ್–13) ಹಾಗೂ ಮಾನದಂಡ ನಿಗದಿ ಮಾಡುವುದಕ್ಕೆ (ವಿಕಸಿತ ಭಾರತ ಶಿಕ್ಷಾ ಮಾನಕ ಪರಿಷತ್) (ಸೆಕ್ಷನ್ 15) ಮೂರು ಪ್ರತ್ಯೇಕ ಪರಿಷತ್ತುಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವವನ್ನು ಮಸೂದೆಯಲ್ಲಿ ಮಾಡಲಾಗಿದೆ. ಪ್ರತಿ ಪರಿಷತ್ ಕೂಡ ಅಧ್ಯಕ್ಷ ಮತ್ತು 14 ಸದಸ್ಯರನ್ನು ಹೊಂದಿರಲಿದೆ. ಶೋಧ ಮತ್ತು ಆಯ್ಕೆ ಸಮಿತಿ ಮಾಡುವ ಶಿಫಾರಸಿನ ಆಧಾರದಲ್ಲಿ ರಾಷ್ಟ್ರಪತಿ ಅವರು ಈ ಪರಿಷತ್ತುಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲಿದ್ದಾರೆ.

ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರದಲ್ಲಿ ತೊಡಗಿರುವವರು, ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು, ರಾಜ್ಯ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ರಾಷ್ಟ್ರೀಯ ಪ್ರಾಮುಖ್ಯದ ಸಂಸ್ಥೆಗಳ ಪ್ರತಿನಿಧಿಗಳನ್ನು ಅಧಿಷ್ಠಾನ ಮತ್ತು ಪರಿಷತ್ತುಗಳ ಸದಸ್ಯರಾಗಲಿದ್ದಾರೆ.

ಅಧಿಷ್ಠಾನದ ಪ್ರಮುಖ ಜವಾಬ್ದಾರಿ

- ಉನ್ನತ ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನಿರ್ದೇಶನ ನೀಡುವುದು
- ಮೂರೂ ಪರಿಷತ್ತುಗಳಿಗೆ ಮಾರ್ಗದರ್ಶನ ಮಾಡುವುದು ಮತ್ತು ಅವುಗಳ ನಡುವೆ ಸಮನ್ವಯ ಇರುವಂತೆ ನೋಡಿಕೊಳ್ಳುವುದು
- ಪರಿಷತ್ತುಗಳ ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಹಣಕಾಸಿನ ಮತ್ತು ಆಡಳಿತಾತ್ಮಕ ನೆರವು ಕೊಡುವುದು
- ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ವಿಚಾರಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು

ಭಾರಿ ದಂಡ

ಮಸೂದೆಯ ಸೆಕ್ಷನ್ 33 ನಿಯಮ ಉಲ್ಲಂಘನೆಗೆ ವಿಧಿಸಲಾಗುವ ದಂಡದ ಬಗ್ಗೆ ಪ್ರಸ್ತಾಪಿಸುತ್ತದೆ. ಕೇಂದ್ರ ಸರ್ಕಾರ ಅಥವಾ ಆಯಾ ರಾಜ್ಯ ಸರ್ಕಾರಗಳ ಅನುಮತಿ ಇಲ್ಲದೆ ವಿಶ್ವವಿದ್ಯಾಲಯ ಅಥವಾ ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪನೆ ಮಾಡುವವರಿಗೆ ₹2 ಕೋಟಿ ದಂಡ ವಿಧಿಸುವ ಪ್ರಸ್ತಾವವನ್ನು ಮಸೂದೆಯಲ್ಲಿ ಮಾಡಲಾಗಿದೆ.



ಯಾವುದಕ್ಕೆಲ್ಲ ಅನ್ವಯ?

- ದೇಶದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳು (ಕೇಂದ್ರೀಯ, ರಾಜ್ಯ, ಖಾಸಗಿ, ಡೀಮ್ಡ್), ಅವುಗಳ ವ್ಯಾಪ್ತಿಗೆ ಬರುವ ಕಾಲೇಜುಗಳು, ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಶಿಕ್ಷಣ ಸಂಸ್ಥೆಗಳು, ಐಐಟಿ, ಎನ್‌ಐಟಿ, ಐಐಎಸ್‌ಇಆರ್, ಐಐಎಂ, ಐಐಐಟಿಗಳು ಸೇರಿದಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಪ್ರಾಮುಖ್ಯದ ಶಿಕ್ಷಣ ಸಂಸ್ಥೆಗಳು ಎಂದು ಘೋಷಿಸಿರುವ ಸಂಸ್ಥೆಗಳು ಈ ಮಸೂದೆಯ ವ್ಯಾಪ್ತಿಗೆ ಬರುತ್ತವೆ (ಸದ್ಯ ಐಐಟಿ ಮತ್ತು ಐಐಎಂಗಳು ಯುಜಿಸಿ ನಿಯಂತ್ರಣಕ್ಕೆ ಬರುವುದಿಲ್ಲ)
- ಮಸೂದೆಯು 1956ರ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಕಾಯ್ದೆ, 1987ರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಕಾಯ್ದೆ ಮತ್ತು 1993ರ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ಕಾಯ್ದೆಯನ್ನು ರದ್ದು ಮಾಡಲಿದೆ
- 1972ರ ವಾಸ್ತುಕಲೆ ಕಾಯ್ದೆಯ ಅಡಿಯಲ್ಲಿ ಸ್ಥಾಪಿಸಲಾದ ವಾಸ್ತುಕಲೆ ಪರಿಷತ್ (ಸಿಇಎ) ಅನ್ನು ವೃತ್ತಿಪರ ಮಾನದಂಡ ನಿಗದಿ ಸಂಸ್ಥೆಯಾಗಿ (ಪಿಎಸ್‌ಎಸ್‌ಬಿ) ಪರಿಗಣಿಸುವ ಪ್ರಸ್ತಾವವನ್ನು ಮಸೂದೆಯಲ್ಲಿ ಮಾಡಲಾಗಿದೆ. ಈ ಸಂಸ್ಥೆಯು ಮಾನದಂಡ ನಿಗದಿ ಪರಿಷತ್‌ನ ಸದಸ್ಯನಾಗಿ ಪಠ್ಯಕ್ರಮ ರಚನೆ, ಶಿಕ್ಷಣದ ಮಾನದಂಡ ನಿಗದಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದೆ. ಆದರೆ, ನಿಯಂತ್ರಣದ ಜವಾಬ್ದಾರಿ ಇದಕ್ಕೆ ಇರದು
- ವೈದ್ಯಕೀಯ ಶಿಕ್ಷಣ, ಕಾನೂನು ಶಿಕ್ಷಣ, ನರ್ಸಿಂಗ್, ಫಾರ್ಮಸಿ, ದಂತವೈದ್ಯಕೀಯ, ಪಶುವೈದ್ಯಕೀಯ ಮುಂತಾದ ವೃತ್ತಿಪರ ಶಿಕ್ಷಣದ ಜವಾಬ್ದಾರಿ ಹೊತ್ತಿರುವ ಸರ್ಕಾರಿ ಸಂಸ್ಥೆಗಳು (ಉದಾ: ರಾಷ್ಟ್ರೀಯ ವೈದ್ಯಕೀಯ ಆಯೋಗ, ರಾಷ್ಟ್ರೀಯ ದಂತ ಆಯೋಗ, ಭಾರತೀಯ ವಕೀಲರ ಪರಿಷತ್ತು ಇತ್ಯಾದಿ) ಈ ಮಸೂದೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಚೀನಾವು ಅರುಣಾಚಲ ಪ್ರದೇಶದ ಬಳಿ ಸೇನೆಯನ್ನು ಭಾರಿ ಪ್ರಮಾಣದಲ್ಲಿ ಜಮಾವಣೆ ಮಾಡುತ್ತಿದೆ' ಎಂದು ಪ್ರತಿಪಾದಿಸುತ್ತಾ '@JuKcrick_' ಎಂಬ ಎಕ್ಸ್ ಬಳಕೆದಾರರೊಬ್ಬರು ಚೀನಾ ಸೇನೆಯು (ಪಿಎಲ್‌ಎ) ಸಮರಾಭ್ಯಾಸ ನಡೆಸುತ್ತಿರುವ 1.34 ನಿಮಿಷದ ವಿಡಿಯೊವನ್ನು ಪೋಸ್ಟ್ ಮಾಡಿದ್ದಾರೆ. ಇನ್ನೂ ಕೆಲವರು ಈ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ. 'ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವರು ಯಾಕೆ ಇನ್ನೂ ಸುಮ್ಮನಿದ್ದಾರೆ' ಎಂದು ಪ್ರಶ್ನಿಸಿದ್ದಾರೆ. ಆದರೆ. ಇದು ಸುಳ್ಳು ಸುದ್ದಿ.

ಇದು ಚೀನಾ ಸೇನೆಯ ಸಮರಾಭ್ಯಾಸದ ವಿಡಿಯೊ ಎನ್ನುವುದು ನಿಜ. ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಚೀನಾದ ಗ್ಲೋಬಲ್ ಟೆಲಿವಿಷನ್ ನೆಟ್‌ವರ್ಕ್ (ಸಿಜಿಟಿಎನ್) ಕಳೆದ ತಿಂಗಳು (ನವೆಂಬರ್) 13ರಂದು ಈ ವಿಡಿಯೊವನ್ನು ಪೋಸ್ಟ್ ಮಾಡಿರುವುದು ಕಂಡು ಬಂತು. ಪಿಎಲ್‌ಎಯ ಭೂ ಸೇನಾ ಪಡೆಯು ಅತ್ಯಾಧುನಿಕ ತಂತ್ರಜ್ಞಾನದ ಡ್ರೋನ್‌ಗಳು ಮತ್ತು ರೊಬೊಟಿಕ್ ಶ್ವಾನಗಳನ್ನು ಬಳಸಿಕೊಂಡು ಸಮರಾಭ್ಯಾಸ ನಡೆಸುತ್ತಿದೆ' ಎಂದು ಸರ್ಕಾರಿ ಸ್ವಾಮ್ಯದ ಈ ಮಾಧ್ಯಮವು ತನ್ನ ಪೋಸ್ಟ್‌ನಲ್ಲಿ ಹೇಳಿದೆ. ಮಂಗೋಲಿಯಾ, ರಷ್ಯಾ ಮತ್ತು ಉತ್ತರ ಕೊರಿಯಾದೊಂದಿಗೆ ಗಡಿ ಹಂಚಿಕೊಂಡಿರುವ ಚೀನಾದ ಈಶಾನ್ಯ ಭಾಗದಲ್ಲಿ ಸೇನಾ ಕಾರ್ಯಾಚರಣೆಯ ಜವಾಬ್ದಾರಿ ಹೊತ್ತಿರುವ 78ನೇ ಸೇನಾ ಘಟಕವು ಈ ಸಮರಾಭ್ಯಾಸ ನಡೆಸಿದೆ. ಅರುಣಾಚಲ ಪ್ರದೇಶದೊಂದಿಗೆ ಹಂಚಿಕೊಂಡಿರುವ ಗಡಿ ಪ್ರದೇಶವು ಚೀನಾ ಸೇನೆಯ ಪಶ್ಚಿಮ ಕಮಾಂಡ್ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ಸಂಬಂಧವೇ ಇಲ್ಲದ ವಿಡಿಯೊವನ್ನು ಪೋಸ್ಟ್ ಮಾಡಿ, ಅರುಣಾಚಲ ಪ್ರದೇಶದ ಬಳಿ ಚೀನಾ ಸೇನೆ ಜಮಾವಣೆ ಮಾಡುತ್ತಿದೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳೋಣ

ನುಡಿ ಬೆಳಗು — ದೀಪಾ ಹಿರೇಗುತ್ತಿ



ಒಂದು ಕಾಡಿನಲ್ಲಿ ಒಂದು ಮೊಲವಿತ್ತು. ಅದಕ್ಕೆ ಬೇಸಿಗೆಯೆಂದರೆ ತುಂಬ ಇಷ್ಟ. ಎಳೆಬಿಸಿಲಿನಲ್ಲಿ ಹುಲ್ಲುಗಾವಲಿನಲ್ಲಿ ಹಾರಾಡುತ್ತ, ಚಿಟ್ಟೆಗಳೊಂದಿಗೆ ಆಟವಾಡುತ್ತ, ಎಳೆಗರಿಕೆಯನ್ನು ಮೆಲ್ಲುತ್ತ ಜಿಗಿದಾಡಿಕೊಂಡು ಕುಣಿದಾಡಿಕೊಂಡು ಇರುವುದೆಂದರೆ ಅದಕ್ಕೆ ಬಲು ಇಷ್ಟ. ಆದರೆ ಕಪ್ಪು ಮೋಡಗಳು ದಟ್ಟೈಸಿದಾಗಲೆಲ್ಲ ಮೊಲಕ್ಕೆ ಬೇಸರ. ನಾಲ್ಕು ಹನಿ ಮಳೆ ಬಿದ್ದರೆ ಕಳವಳ. ಮಳೆಗಾಲ ಆರಂಭವಾದರಂತೂ ಹೇಳತೀರದ ಸಂಕಟ.

ಒಂದು ಮಧ್ಯಾಹ್ನ ಮೊಲ ಬಿಸಿಲಲ್ಲಿ ಆಡುತ್ತಿರುವಾಗಲೇ ಮಳೆ ಹನಿಗಳು ಬೀಳಲು ಶುರುವಾದವು. 'ಥೋ ನಾನೀಗ ಏನೂ ಮಾಡುವಂತಿಲ್ಲ, ಈ ಮಳೆಯಲ್ಲಿ ಮಜವೂ ಇಲ್ಲ ಖುಷಿಯೂ ಇಲ್ಲ' ಎಂದು ಗೊಣಗುತ್ತ ಒಂದು ಮೂಲೆಯಲ್ಲಿ ಬೆಚ್ಚಗಿನ ಜಾಗ ನೋಡಿ ಕುಳಿತಿತ್ತು ಮೊಲ. ಅಷ್ಟು ಹೊತ್ತಿಗೆ ಅದರ ಗೆಳೆಯ ಕಪ್ಪೆ ಅಲ್ಲಿಗೆ ಬಂತು. 'ಅದೇನು ಮಾರಾಯ, ನೀನು ಮಳೆ ಅಂದರೆ ಗೊಣಗುತ್ತೀಯಲ್ಲ. ಬಾ ಮಳೆಗಾಲವೂ ಎಷ್ಟು ಅದ್ಭುತ ಅಂತ ತೋರಿಸ್ತೀನಿ' ಎಂದು ಮೊಲವನ್ನು ಒತ್ತಾಯ ಮಾಡಿ ಅದನ್ನು ಎಬ್ಬಿಸಿ ಕರೆದುಕೊಂಡು ಹೋಯಿತು.

ರಸ್ತೆಯ ಮೇಲೆ ನೀರು ತುಂಬಿದ ಸಣ್ಣ ಸಣ್ಣ ಗುಂಡಿಗಳಿದ್ದವು. ಅದರ ಮೇಲೆ ಹಾರಿ ತೋರಿಸಿದ ಕಪ್ಪೆ, 'ಹೀಗೆಯೇ ಹಾರು' ಎಂದಿತು ಮೊಲಕ್ಕೆ. ಆ ಮಣ್ಣು ನೀರಲ್ಲಿ ಏನು ಹಾರುವುದೆಂದು ಮೊಲ ಮೂಗು ಮುರಿಯುತ್ತ ಸುಮ್ಮನೆ ನಿಂತಿತ್ತು. ಆದರೆ ಕಪ್ಪೆಯ ಕುಣಿತ ಜಿಗಿತ ಅದರ ನಿಲ್ಲದ ನಗುವನ್ನು ನೋಡಿ ಮೊಲಕ್ಕೆ ಈ ಕೊಳಕು ನೀರಿನ ಗುಂಡಿ ಹಾರುವುದರಲ್ಲಿ ಅದೇನು ಮಜವಿದೆಯೋ ನೋಡೋಣವೆಂದು ತಾನೂ ಕಪ್ಪೆಯನ್ನು ಸೇರಿಕೊಂಡಿತು. ಕೆಸರನ್ನು ತುಳಿದು ನೀರನ್ನು ಎರಚಾಡಿ ಖುಷಿಪಟ್ಟವು ಕಪ್ಪೆ ಮತ್ತು ಮೊಲ. ಮಣ್ಣಿನಲ್ಲಿರುವ ಪುಟ್ಟ ಪುಟ್ಟ ಹುಳುಗಳನ್ನು ನೋಡಿ ಅಚ್ಚರಿಪಟ್ಟವು. ಮೊಲ ಅದೆಷ್ಟು ಸಂಭ್ರಮಿಸಿತೆಂದರೆ ಅರೇ, ಬೆಚ್ಚನೆಯ ಬಿಸಿಲಿನ ದಿನಗಳಲ್ಲೂ ತಾನು ಇಷ್ಟು ಸಂತೋಷಪಟ್ಟಿರಲಿಲ್ಲವಲ್ಲ ಎಂದು ಅದಕ್ಕೆ ಅನ್ನಿಸಿತು. ಇದು ತನ್ನ ಬದುಕಿನ ಅತ್ಯಂತ ಖುಷಿಯ ದಿನಗಳಲ್ಲಿ ಒಂದು ಎಂದು ಅದಕ್ಕೆ ಅರ್ಥವಾಗಿತ್ತು. ಕಪ್ಪೆಗೆ ಧನ್ಯವಾದ ಹೇಳಿ ವಾಪಸು ಹೊರಟ ಮೊಲದ ಕುಪ್ಪಳಿಸುವಿಕೆಯಲ್ಲಿ ಹೊಸ ಉಲ್ಲಾಸವಿತ್ತು. ಈ ಸಾಹಸದ ನಂತರ ಮೊಲ ಮಳೆಯ ಬಗ್ಗೆ ಮೋಡದ ಬಗ್ಗೆ ಎಂದೂ ಗೊಣಗಲಿಲ್ಲ. ಸಂತೋಷವಿರುವುದು ವಾತಾವರಣದಲ್ಲಲ್ಲ, ನಮ್ಮ ನಮ್ಮ ದೃಷ್ಟಿಕೋನದಲ್ಲಿ ಎಂಬುದನ್ನು ಅದು ಚೆನ್ನಾಗಿ ಅರ್ಥ ಮಾಡಿಕೊಂಡಿತು. ವಾತಾವರಣ ಯಾವುದಾದರೇನು? ಅದರಲ್ಲಿ ಒಳ್ಳೆಯದನ್ನು ಹುಡುಕುವುದರ ಮೂಲಕ ನೆಮ್ಮದಿಯನ್ನು ಕಾಪಾಡಿಕೊಳ್ಳುವುದು ಹೇಗೆಂದು ಮೊಲಕ್ಕೆ ಗೊತ್ತಾಗಿತ್ತು.


ನಾವು ಬಹಳ ಸಂದರ್ಭಗಳಲ್ಲಿ ಈ ಮೊಲದಂತೆಯೇ ವರ್ತಿಸುತ್ತಿರುತ್ತೇವೆ. ನಮ್ಮೆದುರಿಗಿರುವ ಅಪಾರ ಸಾಧ್ಯತೆಗಳಿಗೆ ನಿರುತ್ಸಾಹದಿಂದ ನಾವೇ ತಡೆಗೋಡೆ ನಿರ್ಮಿಸಿಕೊಂಡು ಬಿಡುತ್ತೇವೆ. ಆದರೆ ಕೊಂಚ ತೆರೆದ ಮನಸ್ಸು ಮತ್ತು ಧನಾತ್ಮಕ ದೃಷ್ಟಿಕೋನವನ್ನಿಟ್ಟುಕೊಳ್ಳುವ ಮೂಲಕ ಸಂದರ್ಭ ಹೇಗಿದ್ದರೂ ಅದನ್ನು ಅರ್ಥಪೂರ್ಣವಾಗಿಸಿಕೊಳ್ಳಬಹುದು. ಬದುಕಿನಲ್ಲಿ ಪರಿಪೂರ್ಣತೆ ಎಂಬುದು ಎಂದಿಗೂ ಸಾಧ್ಯವಿಲ್ಲ. ಹೀಗಾಗಿ ಅರ್ಥಪೂರ್ಣ ಗಳಿಗೆಗಳನ್ನು ಸೃಷ್ಟಿಸಿಕೊಳ್ಳಲು ನಾವೇ ಪ್ರಯತ್ನಿಸುತ್ತಿರಬೇಕು. ನಕಾರಾತ್ಮಕ ಸಂಗತಿಗಳನ್ನು ಮುನ್ನೆಲೆಗೆ ತರದೇ ಧನಾತ್ಮಕವಾಗಿ ಯೋಚಿಸುತ್ತ ಆಶಾವಾದದಿಂದ ನಮ್ಮ ಕೆಲಸವಗಳನ್ನು ನಾವು ಮಾಡುತ್ತ ಮುನ್ನಡೆಯಬೇಕು. ಏಕೆಂದರೆ, ಮಳೆ, ಬಿಸಿಲು ಮತ್ತು ಚಳಿಯ ನಡುವೆಯೇ ಬದುಕು ಸಾಗುತ್ತಿರಬೇಕು.

ಪದಬಂಧ 6255

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಆಜ್ಞೆ ಮಾಡುವವನು (4)
3.ಜರೂರಾಗಿ ಮಾಡಿರುವ ಪಂಚನಾಮೆ (4)
5.ಇದು ತುಂಬಾ ಹೊಸತು (3)
6.ಪುಷ್ಪದ ಮೇಲೆ ಬಿದ್ದಿರುವ ಸೂರ್ಯನ ಕಾವು (4)
8.ನಂಜಿನಿಂದ ಕೂಡಿರುವ ಸಂಗತಿ (3)
10.ಕೇಳಲು ಇಂಪಾಗಿರುವುದು (3)
12.ದ್ರವರೂಪದ ಲೋಹ (4)
15.ಒಳ್ಳೆಯ ವಂಶ (3)
16.ತನ್ನ ಬಗೆಗೆ ಇರುವ ಗೌರವ (4)
17.ಕನ್ನಡಿಗನ ಚಾಳೀಸು (4)

ಮೇಲಿಂದ ಕೆಳಕ್ಕೆ
1.ಪುಷ್ಪಗಳನ್ನಿಡುವ ಕರಂಡಕವು ಉಲ್ಟಾ ಆಗಿಬಿಟ್ಟಿದೆ (3)
2.ನಕಲು ನೋಡಿ ಈ ರೀತಿ ಕೋಪಗೊಳ್ಳು (3)
3.ಮನದಿಂದ ಮಾಡಿಕೊಂಡ ಅರಿಕೆ (3)
4.ಭಯಂಕರ ರೂಪದ ಶಿವ (2)
7.ಹೀಗೆ ಕಷ್ಟದ ಅನುಭವ ಮಾಡಿಸು (5)
9.ನರಕಾಧಿಪತಿಯ ಸೇವಕನಿವನು (5)
11.ವ್ಯವಸಾಯಗಾರನ ಅಳಲು (3)
12.ಪಾಲನೆ ಮಾಡುವವನು ಇಲ್ಲಿದ್ದಾನೆ (3)
13.ಈತ ಸರಿಸಮಾನನಾದವನು (3)
14.ದೀರ್ಘವಲ್ಲದ ಅಕ್ಷರ ಕೊನೆಗೆ ದೀರ್ಘವಾಗಿದೆ! (2)



6254ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮೀಕ್ಷಕ 3.ಪಂಕ್ತಿ 4.ರುದ್ರನಾಟಕ 6.ಹಸೆಮಣೆ 7.ಜಲ 8.ರಿಪು 9.ನಗ 10.ಕಾರ್ಮಿಕ 11.ಮಾಸ 13.ಸ್ವರ 14.ಧನ 16.ಸಂಪ್ರದಾಯ 17.ವಿಚಾರವಂತ 18.ಹಾಲು 19.ಸಮಾಧಾನ

ಮೇಲಿಂದ ಕೆಳಕ್ಕೆ:
1.ಸಮೂಹಗಾನ 2.ಕರುಣೆ 3.ಪಂಕಜ 5.ನಾಗರಿಕ 10.ಕಾರವಾರ 12.ಸಹಾಯಧನ 15.ನವಿಲು 16.ಸಂತಸ

ಸುಡೊಕು 6639

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

6638 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಡಿಸೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣದ್ವಾದಶಿ ಗಂ. 23-58 ನಕ್ಷತ್ರ: ಸ್ವಾತಿ ಗಂ. 14-10 ಯೋಗ: ಅತಿಗಂಡ ಗಂ. 13-23 ಕರಣ: ಕೌಲವ ಗಂ. 10-39 ವೃಶ್ಚಿಕ ಮಾಸದ 30 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-49 ಸೂರ್ಯಾಸ್ತ : 06-02, ಮುಸ್ಲಿಂ ದಿನಾಂಕ : 24 ಜುಮಾದುಸ್ಸಾನಿ, ಅದೃಷ್ಟ ಸಂಖ್ಯೆ : 3, 9

ಮೇಷ: ಕೆಲಸಗಳೆಲ್ಲ ಇಂದಿನಿಂದ ವೇಗಗತಿಯನ್ನು ಪಡೆದುಕೊಳ್ಳುತ್ತವೆ. ಮದುವೆಯ ವಿಚಾರದಲ್ಲಿ ಆತುರದ ನಿರ್ಧಾರ ತಪ್ಪಿಸಿ. ಅದರ ಬಗ್ಗೆ ಕುಟುಂಬದವರೊಂದಿಗೆ ಮಾತುಕತೆ ನಡೆಸಿ.

ವೃಷಭ: ವ್ಯವಹಾರದಲ್ಲಿ ಜಾಗರೂಕತೆ ಮುಖ್ಯ. ಕೆಲಸದಲ್ಲಿ ಗಡಿಬಿಡಿ ಮಾಡದೆ ಶಾಂತವಾಗಿ ವರ್ತಿಸಿ. ಸಾಯಂಕಾಲದ ವೇಳೆಯಲ್ಲಿ ವಾಯುವಿಹಾರದಿಂದ ಮನಸ್ಸು ಪ್ರಫುಲ್ಲವಾಗುವುದು.

ಮಿಥುನ: ಹೊಸ ಜನರೊಂದಿಗೆ ಮಾತುಕತೆ ನಡೆಸುವುದು ಇದ್ದಲ್ಲಿ ಅದರಿಂದ ಲಾಭ ಹೊಂದುವಿರಿ. ಮಕ್ಕಳ ವಿಚಾರದಲ್ಲಾಗಲಿ ಅಥವಾ ಭವಿಷ್ಯದ ವಿಚಾರದಲ್ಲಾಗಲಿ ಯೋಚನೆಗಳನ್ನು ತೆಗೆದುಹಾಕಿ.

ಕರ್ಕಾಟಕ: ಜೊತೆಗಾರರಲ್ಲಿ ಭಾವನಾತ್ಮಕ ಸಂಬಂಧಗಳು ಉಂಟಾಗಲಿವೆ. ಬಿಡುವಿಲ್ಲದ ಕೆಲಸದ ಮಧ್ಯದಲ್ಲೂ ದೇಹಕ್ಕೆ ಬೇಕಾದಷ್ಟು ವಿಶ್ರಾಂತಿ ಕೊಡುವ ಬಗ್ಗೆ ಯೋಚಿಸಿ. ಜಾಗ ಖರೀದಿ ಮಾಡಬಹುದು.

ಸಿಂಹ: ಗೃಹ ಸಾಮಗ್ರಿ ವಸ್ತುಗಳ ಖರೀದಿಯಿಂದ ಖರ್ಚು ಬರುವುದು. ವೃತ್ತಿಯ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಬೇಕಾಗಬಹುದು. ನೀರಿನಿಂದ ಸೋಂಕು ಉಂಟಾಗಬಹುದು.

ಕನ್ಯಾ: ಜಮೀನು ಖರೀದಿಸುವ ಬಗ್ಗೆ ಯೋಚನೆಗಳು ಬರಲಿವೆ. ಅವು ಯೋಚನೆಯಾಗಿಯೇ ಉಳಿಯಲಿದೆ. ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ.

ತುಲಾ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ಸಮಸ್ಯೆಗಳ ಸರಮಾಲೆಗಳು ನಿವಾರಣೆಯಾಗಲಿವೆ.

ವೃಶ್ಚಿಕ: ಧಾರ್ಮಿಕವಾಗಿ ಏಕಾಗ್ರತೆ ಹಾಗೂ ಉತ್ತಮ ರೀತಿಯಲ್ಲಿನ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ. ಮಗನೊಡನೆ ಗಹನ ಮಾತುಕತೆ ನಡೆಯುವ ಸಂಭವವಿದೆ.

ಧನು: ಪ್ರಾರಂಭಿಸಿದ ಕೆಲಸಗಳಲ್ಲಿಯೂ ಯಶಸ್ಸು, ಲಾಭ, ಅಭಿವೃದ್ಧಿಗಳಿಂದ ಮನಸ್ಸಿಗೆ ಸಂತೋಷ ಸಿಗಲಿದೆ. ಕಹಿಯಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರಿ. ಪ್ರತಿಸ್ಪರ್ಧಿಗಳು ದೂರಾಗುವರು.

ಮಕರ: ಭೂಮಿಯ ಖರೀದಿಯ ವಿಚಾರದಲ್ಲಿ ಮೋಸವಾಗುವ ಸಾಧ್ಯತೆಗಳಿವೆ. ಸಿವಿಲ್ ಎಂಜಿನಿಯರ್‌ಗಳಿಗೆ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ಅಧಿಕಾರವನ್ನು ಚಲಾಯಿಸಬೇಡಿ.

ಕುಂಭ: ಶ್ರೇಯಸ್ಸು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗುವುದು. ಮೃಗದ ಚರ್ಮದಿಂದ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಬರಲಿದೆ. ಷೇರು ಬಂಡವಾಳದಲ್ಲಿ ಲಾಭದ ಸೂಚನೆ ಇದೆ.

ಮೀನ: ಹಣಕಾಸಿನ ವ್ಯವಹಾರ ನಡೆಸುವವರು ನೂತನ ಯೋಜನೆಗಳನ್ನು ಕೆಲವು ಕಡೆಯಲ್ಲಿ ವಿಸ್ತರಿಸಬಹುದು. ನಿರುದ್ಯೋಗಿಗಳು ಬಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನಿಸಿ.

ಗುಂಡಣ್ಣ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದಲ್ದು, ಮೋಡ ಕವಿದ ವಾತಾವರಣ ಇರಲಿದೆ.

ಚಲಿಸುತ್ತಿದ್ದ ರೈಲಿನ ಚೈನ್ ಎಳೆದು ರಾದ್ಧಾಂತ

ಆರ್‌ಪಿಎಫ್ ಸಿಬ್ಬಂದಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ



ಯಶವಂತಪುರ ರೈಲು ನಿಲ್ದಾಣದಲ್ಲಿ ನಡೆದ ಗಲಾಟೆಯ ದೃಶ್ಯ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದಿಂದ ಗೋವಾಕ್ಕೆ ಹೊರಟಿದ್ದ ಯಶವಂತಪುರ– ವಾಸ್ಕೋಡ ಗಾಮ ಎಕ್ಸ್‌ಪ್ರೆಸ್ (17309) ರೈಲಿನ ಚೈನ್ ಎಳೆದು ರಾದ್ಧಾಂತ ನಡೆಸಲಾಗಿದ್ದು, ಪ್ರಶ್ನಿಸಲು ಹೋದ ಕ್ಷಿಪ್ರ ಕಾರ್ಯ ಪಡೆಯ ಸಿಬ್ಬಂದಿ ಮೇಲೆ ಸೋಮವಾರ ಹಲ್ಲೆ ನಡೆಸಲಾಗಿದೆ.

ಕೆಲವು ಪುಂಡರು ಈ ರೀತಿಯ ವರ್ತನೆ ತೋರಿದ್ದು, ಆರೋಪಿಗಳನ್ನು ರೈಲ್ವೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ರೈಲು ತಡೆದು ಹಲ್ಲೆ ಮಾಡಿದ ಆರೋಪದಡಿ ಮೂವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

'ರೈಲಿನ ಎಸ್–3 ಬೋಗಿಯಲ್ಲಿ ಘಟನೆ ನಡೆದಿದೆ. ಆ ಬೋಗಿಯಲ್ಲಿ 14 ಮಂದಿ ಪ್ರಯಾಣಿಕರು ಇದ್ದರು. ಪುಂಡರು ರಾದ್ಧಾಂತ ನಡೆಸುತ್ತಿರುವುದನ್ನು ಅವರು ಪ್ರಶ್ನಿಸಿದ್ದರು.

ಅವರ ಮಾತನ್ನು ಆರೋಪಿಗಳು ಕೇಳಿಸಿಕೊಂಡಿಲ್ಲ. ಪ್ರಯಾಣಿಕರು ನೀಡಿದ ಮಾಹಿತಿ ಮೇರೆಗೆ ಆ ಬೋಗಿಗೆ ತೆರಳಿ ಪರಿಶೀಲನೆ ನಡೆಸಿದಾಗ ಆರ್‌ಪಿಎಫ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ಮದ್ಯದ ನಶೆಯಲ್ಲಿ ಆರೋಪಿಗಳು ಕೃತ್ಯವನ್ನು ಎಸಗಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ತಿಳಿಸಿದ್ದಾರೆ.

₹8.3 ಕೋಟಿ ಕಳೆದುಕೊಂಡ ಉದ್ಯಮಿ

ಷೇರು ಹೂಡಿಕೆಯಲ್ಲಿ ಹೆಚ್ಚಿನ ಲಾಭದ ಆಮಿಷ ತೋರಿಸಿ ಸೈಬರ್ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆ ಎಂದು ನಂಬಿಸಿ ಉದ್ಯಮಿಯಿಂದ ಸೈಬರ್ ವಂಚಕರು ₹8.3 ಕೋಟಿ ದೋಚಿದ್ದು, ಈ ಸಂಬಂಧ ಇಲ್ಲಿನ ದಕ್ಷಿಣ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿ ರಾಜೇಂದ್ರ ನಾಯ್ಡು ಅವರು ಹಣ ಕಳೆದುಕೊಂಡಿದ್ದಾರೆ.

ರಾಜೇಂದ್ರ ನಾಯ್ಡು ಅಯೋಧ್ಯೆಯ ರಾಮಮಂದಿರಕ್ಕೆ ಬೆಳ್ಳಿಯ ಪೂಜಾ ಸಾಮಗ್ರಿಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಈ ಹಿಂದೆ ರಿಲಯನ್ಸ್ ಕ್ಯಾಪಿಟಲ್‌ನಲ್ಲಿ ಸಾಲ ಪಡೆದು ಅದನ್ನು ಸಂಪೂರ್ಣವಾಗಿ ತೀರಿಸಿದ್ದರು.

ಈ ಮಾಹಿತಿಯನ್ನು ಸಂಗ್ರಹಿಸಿಕೊಂಡಿದ್ದ ಸೈಬರ್ ವಂಚಕರು, ನಾಯ್ಡು ಅವರಿಗೆ ಕರೆ ಮಾಡಿ 'ನಿಮ್ಮ ಸಿಬಿಲ್ ಸ್ಕೋರ್ ಉತ್ತಮ ಆಗಿದೆ' ಎಂದು ನಂಬಿಸಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ವಂಚಕರ ಮಾತು ನಂಬಿದ ರಾಜೇಂದ್ರ ಅವರು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಕೆಲವು ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದ ರಾಜೇಂದ್ರ ನಾಯ್ಡು ಅವರು ಸ್ವಲ್ಪ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಅದರಿಂದ ಬರುವ ಹಣವನ್ನು ಸಾಮಾಜಿಕ ಕಾರ್ಯಗಳಿಗೆ ಉಪಯೋಗಿಸಬಹುದು ಎಂದು ಭಾವಿಸಿ ಹೂಡಿಕೆ ಮಾಡಲು ಇಚ್ಛಿಸಿದ್ದರು ಎಂದು ಮೂಲಗಳು ಹೇಳಿವೆ.

ದುರುದ್ದೇಶದಿಂದ ಕರೆ ಮಾಡಿದ್ದ ವಂಚಕರು, ಫೋನ್‌ನಲ್ಲಿ ಆ್ಯಪ್ ವೊಂದನ್ನು ಇನ್‌ಸ್ಟಾಲ್ ಮಾಡಿಸಿದ್ದರು. ಆ್ಯಪ್ ಮೂಲಕ ಆರಂಭದಲ್ಲಿ ₹25 ಲಕ್ಷ ಹೂಡಿಕೆ ಮಾಡಿದ್ದ ರಾಜೇಂದ್ರ ನಾಯ್ಡು ನಂತರ ಹಂತಹಂತವಾಗಿ ಒಟ್ಟು ₹8.3 ಕೋಟಿ ಹಣ ವರ್ಗಾಯಿಸಿದ್ದರು. ಅದಾದ ಕೆಲವೇ ದಿನಗಳಲ್ಲಿ ಆ ಆ್ಯಪ್‌ನಲ್ಲಿ ₹59.4 ಕೋಟಿ ಲಾಭಾಂಶ ಬಂದಿರುವಂತೆ ತೋರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಲಾಭಾಂಶದಲ್ಲಿ ₹15 ಕೋಟಿ ವಾಪಸ್ ಪಡೆಯಲು ದೂರುದಾರರು ಪ್ರಯತ್ನಿಸಿದಾಗ ಅದು ಸಾಧ್ಯವಾಗಿರಲಿಲ್ಲ. ವಂಚಕರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದಾಗ ಶೇ.18ರಷ್ಟು ಸೇವಾ ಶುಲ್ಕವಾಗಿ ₹2.70 ಕೋಟಿ ಪಾವತಿಸುವಂತೆ ಬೇಡಿಕೆ ಇಟ್ಟಿದ್ದರು.

ಇದರಿಂದ ಅನುಮಾನಗೊಂಡ ರಾಜೇಂದ್ರ ಅವರು ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಿ ದೂರು ದಾಖಲಿಸಿದ್ದಾರೆ ಎಂದು ಮೂಲಗಳು ಹೇಳಿವೆ.

₹60 ಲಕ್ಷ ಹಣ ವರ್ಗಾವಣೆಗೆ ತಡೆ

ವಂಚನೆಯಾದ ₹8.3 ಕೋಟಿ ಪೈಕಿ, ವಂಚಕರ ಖಾತೆಯಲ್ಲಿದ್ದ ಸುಮಾರು ₹60 ಲಕ್ಷವನ್ನು ಫ್ರೀಜ್ (ಹಣ ವರ್ಗಾವಣೆಗೆ ತಡೆ) ಮಾಡಲಾಗಿದೆ. ಆರೋಪಿಗಳ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಠಾಣೆಯ ಪೊಲೀಸರು ತಿಳಿಸಿದರು.

ಸೈಬರ್ ವಂಚನೆಗೆ ಒಳಗಾಗಿ ಹಣ ಕಳೆದುಕೊಂಡವರು ಗಾಬರಿಗೊಳ್ಳದೆ ಸಮಯ ವ್ಯರ್ಥ ಮಾಡದೇ (ಒಂದು ಗಂಟೆಯ ಒಳಗಾಗಿ) ರಾಷ್ಟ್ರೀಯ ಸೈಬರ್ ಸಹಾಯವಾಣಿ (ಎನ್‌ಸಿಆರ್‌ಪಿ) 1930ಕ್ಕೆ ಕರೆ ಮಾಡಿ ದೂರು ದಾಖಲಿಸಬೇಕು. ಸಮೀಪದ ಠಾಣೆಗೆ ತೆರಳಿ ತ್ವರಿತವಾಗಿ ದೂರು ದಾಖಲಿಸಬೇಕು. ತ್ವರಿತವಾಗಿ ದೂರು ದಾಖಲಿಸಿದರೆ ಹಣವು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಆಗುವುದನ್ನು ತಡೆಯಬಹುದು ಎಂದು ಪೊಲೀಸರು ಹೇಳಿದರು.

ಮುಖ್ಯಮಂತ್ರಿ ಪದಕದ ನಗದು ಹೆಚ್ಚಳ

ಬೆಂಗಳೂರು: ಸಾರಿಗೆ ನಿಗಮಗಳ ವಾಹನಗಳು ಮತ್ತು ವಿವಿಧ ಇಲಾಖೆಗಳ ಚಾಲಕರಿಗೆ ನೀಡುವ ಮುಖ್ಯಮಂತ್ರಿ ಚಿನ್ನದ ಪದಕ, ಬೆಳ್ಳಿ ಪದಕ ಪುರಸ್ಕೃತರಿಗೆ ನೀಡುವ ನಗದು ಹಾಗೂ ಇತರೆ ಭತ್ಯೆಗಳನ್ನು ಹೆಚ್ಚಳ ಮಾಡಲಾಗಿದೆ.

ಚಿನ್ನದ ಪದಕ ಪುರಸ್ಕೃತರಿಗೆ ನೀಡುತ್ತಿದ್ದ ₹5,000 ನಗದನ್ನು ₹10 ಸಾವಿರಕ್ಕೆ ಏರಿಸಲಾಗಿದೆ. ತಿಂಗಳ ಭತ್ಯೆ ₹ 500 ಅನ್ನು ₹1000ಕ್ಕೆ ಏರಿಸಲಾಗಿದೆ. ಬೆಳ್ಳಿ ಪದಕ ಪುರಸ್ಕೃತರಿಗೆ ನಗದು ಬಹುಮಾನವನ್ನು ₹ 2,500ರಿಂದ ₹ 5,000ಕ್ಕೆ, ತಿಂಗಳ ಭತ್ಯೆ ₹250 ಅನ್ನು ₹ 500ಕ್ಕೆ ಏರಿಸಲಾಗಿದೆ.

ಪರಿಷ್ಕೃತ ನಗದು ಪುರಸ್ಕಾರವು 2026ರ ಜನವರಿ 1ರಿಂದ ಜಾರಿಗೆ ಬರಲಿದೆ. ಈ ಹಿಂದೆ ಪುರಸ್ಕಾರ ಪಡೆದವರಿಗೂ 2026ರಿಂದ ಪರಿಷ್ಕೃತ ಭತ್ಯೆ ಸಿಗಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದ್ದಾರೆ.

ಪಾರ್ಟಿ ನಡೆಸುತ್ತಿದ್ದ ವೇಳೆ ಕೊಠಡಿಗೆ ನುಗ್ಗಿದ ಪೊಲೀಸರು

ಬಾಲ್ಕನಿಯಿಂದ ಜಿಗಿದ ಯುವತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತರೊಂದಿಗೆ ಲಾಡ್ಜ್‌ನಲ್ಲಿ ಪಾರ್ಟಿ ಮಾಡುವಾಗ ಪೊಲೀಸರು ಬಂದಿದ್ದರಿಂದ ಗಾಬರಿಗೊಂಡ ಯುವತಿ, ಬಾಲ್ಕನಿಯಿಂದ ಕೆಳಕ್ಕೆ ಜಿಗಿಯುವ ವೇಳೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಎಚ್‌ಎಎಲ್ ಠಾಣೆ ವ್ಯಾಪ್ತಿಯ ಕುಂದನಹಳ್ಳಿಯ ಎಇಸಿಎಸ್ ಲೇಔಟ್ 'ಸಿ' ಬ್ಲಾಕ್‌ನ ಬ್ರೂಕ್ ಫೀಲ್ಡ್‌ನಲ್ಲಿರುವ ಸೀ ಎಸ್ಟಾ ಲಾಡ್ಜ್‌ನಲ್ಲಿ ನಡೆದಿದೆ.

ಮಾರತ್ತಹಳ್ಳಿ ನಿವಾಸಿ ವೈಷ್ಣವಿ (21) ಗಾಯಗೊಂಡವರು. ಮಹಾನಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವೈಷ್ಣವಿ ಅವರ ತಂದೆ ಆಂಥೋಣಿ ರಾಜ್ ಅವರು ದೂರು ನೀಡಿದ್ದು, ಸೀ ಎಸ್ಟಾ ಲಾಡ್ಜ್ ಮಾಲೀಕರು ಸೇರಿದಂತೆ ಇತರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 125(ಬಿ) ಅಡಿ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಗಾಯಾಳು ವೈಷ್ಣವಿ ಡಿ.14ರಂದು ತಡರಾತ್ರಿ 1 ಗಂಟೆ ಸುಮಾರಿಗೆ ಎಇಸಿಎಸ್ ಲೇಔಟ್‌ನಲ್ಲಿರುವ ಸೀ ಎಸ್ಟಾ ಲಾಡ್ಜ್‌ನಲ್ಲಿ ತನ್ನ 7 ಮಂದಿ ಸ್ನೇಹಿತರ ಜತೆ ಪಾರ್ಟಿ ಮಾಡಲು ತೆರಳಿದ್ದರು. ಸಂಗೀತ ಹಾಕಿಕೊಂಡು ಡಾನ್ಸ್ ಮಾಡುತ್ತಿದ್ದರು. ಅದರಿಂದ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾಗಿತ್ತು. ಹೀಗಾಗಿ, ಸ್ಥಳೀಯರು ಪೊಲೀಸ್ ಸಹಾಯವಾಣಿ 112ಕ್ಕೆ ದೂರು ನೀಡಿದ್ದರು. ಎಚ್‌ಎಎಲ್ ಠಾಣೆ ಪೊಲೀಸರು ಮುಂಜಾನೆ 5ರ ಸುಮಾರಿಗೆ ಲಾಡ್ಜ್‌ಗೆ ಬಾಡಿವೋರ್ನ್ ಕ್ಯಾಮೆರಾ ಹಾಕಿಕೊಂಡು ತಪಾಸಣೆಗೆ ಹೋಗಿದ್ದರು. ಅದನ್ನು ಕಂಡ ವೈಷ್ಣವಿ ಭಯಗೊಂಡು ಲಾಡ್ಜ್‌ನ ಬಾಲ್ಕನಿಗೆ ಹೋಗಿ ಪೈಪ್ ಹಿಡಿದುಕೊಂಡು ಕೆಳಗೆ ಇಳಿಯಲು ಯತ್ನಿಸುತ್ತಿದ್ದರು. ಆಗ ನಿಯಂತ್ರಣ ತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಕೂಡಲೇ ಸ್ನೇಹಿತರು ಆಕೆಯನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳದಲ್ಲಿದ್ದ ಪುತ್ರಿಯ ಸ್ನೇಹಿತರು, ಲಾಡ್ಜ್ ಸಿಬ್ಬಂದಿ ಹಾಗೂ ಸ್ಥಳಕ್ಕೆ ಬಂದ ಪೊಲೀಸರನ್ನು ವಿಚಾರಣೆ ನಡೆಸಿ ನ್ಯಾಯ ಕೊಡಿಸಬೇಕು ಎಂದು ಆಂಥೋಣಿ ರಾಜ್ ದೂರಿನಲ್ಲಿ ಕೋರಿದ್ದಾರೆ.

ಪೊಲೀಸರ ವಿರುದ್ಧ ಆರೋಪ – ತನಿಖೆ: 'ಬಾಡಿವೋರ್ನ್ ಕ್ಯಾಮೆರಾ ಹಾಕಿಕೊಂಡು ಸ್ಥಳಕ್ಕೆ ಬಂದಿದ್ದ ಪೊಲೀಸರು ಹಣ ಕೇಳಿದರು. ಫೋನ್– ಪೇ ಮಾಡುವುದಾಗಿ ಹೇಳಿದಾಗ ನಗದು ರೂಪದಲ್ಲಿ ಹಣ ನೀಡಿ ಎಂದು ಬೇಡಿಕೆ ಇಟ್ಟಿದ್ದರು' ಎಂಬ ಆರೋಪವಿದೆ. ಪೊಲೀಸರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಡಿಸಿಪಿ ಪರಶುರಾಮ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ

ಇಯರ್ ಫೋನ್ ಟ್ರ್ಯಾಕಿಂಗ್ ಬಳಸಿ ಆರೋಪಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಕಸಂದ್ರ ಪೇಯಿಂಗ್ ಗೆಸ್ಟ್ (ಪಿ.ಜಿ)ನಲ್ಲಿ ಲ್ಯಾಪ್‌ಟಾಪ್, ಆ್ಯಪಲ್ ಇಯರ್ ಫೋನ್ ಕಳವು ಮಾಡಿ ಪರಾರಿಯಾಗಿದ್ದ ಕಳ್ಳನನ್ನು ಇಯರ್ ಫೋನ್‌ನ ಟ್ರ್ಯಾಕಿಂಗ್ ಸೌಲಭ್ಯ ಬಳಸಿ 11 ತಾಸಿನೊಳಗೆ ಬಂಧಿಸುವಲ್ಲಿ ಆಡುಗೋಡಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಮಿಳುನಾಡಿನ ಹೊಸೂರು ಜಿಲ್ಲೆಯ ರಾಮನಗರ ನಿವಾಸಿ ರಾಘವ ಎಂಬಾತ ಶುಕ್ರವಾರ ಬೆಳಿಗ್ಗೆ ಪಿ.ಜಿ ಪ್ರವೇಶಿಸಿ, ಲ್ಯಾಪ್‌ಟಾಪ್, ಎರಡು ಮೊಬೈಲ್ ಫೋನ್‌ಗಳು, ಡಾಂಗಲ್, ಹೆಡ್‌ಫೋನ್, ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್‌ಗಳು ಮತ್ತು ಒಂದು ಆಪಲ್ ಏರ್‌ಪಾಡ್ ಕದ್ದು ಪರಾರಿಯಾಗಿದ್ದ.

ಪೇಯಿಂಗ್ ಗೆಸ್ಟ್‌ನ ಎರಡನೇ ಮಹಡಿಯ ಒಂದೇ ಕೊಠಡಿಯಲ್ಲಿರುವ ಚಂದ್ರಶೇಖರ್ ರೆಡ್ಡಿ, ಕೆ. ಭರತ್, ಹಾಗೂ ಬೆತು ನಾಗಮಣಿಕಾಂತ ಅವರಿಗೆ ಸೇರಿದ ವಸ್ತುಗಳನ್ನು ಕಳವು ಮಾಡಲಾಗಿತ್ತು.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯಲ್ಲಿ ಆರೋಪಿ ಪಿ.ಜಿ ಕಟ್ಟಡ ಪ್ರವೇಶಿಸಿ, ಎರಡನೇ ಮಹಡಿಗೆ ತೆರಳಿ ಕೊಠಡಿಯೊಳಗೆ ನುಸುಳಿರುವುದು ಕಾಣಿಸುತ್ತದೆ. ಭರತ್ ಅವರು ತಮ್ಮ ಪಕ್ಕದಲ್ಲೇ ಲ್ಯಾಪ್‌ಟಾಪ್ ಇಟ್ಟುಕೊಂಡು ನಿದ್ರಿಸುತ್ತಿದ್ದರು.

ಆರೋಪಿ ಮೂರು ನಿಮಿಷದೊಳಗೆ ಕಳ್ಳತನ ನಡೆಸಿದ್ದ. ಇಯರ್ ಫೋನ್‌ನ ಟ್ರ್ಯಾಕಿಂಗ್ ಸೌಲಭ್ಯ ಹಾಗೂ ತಂತ್ರಜ್ಞಾನ ಬಳಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

'ಪೊಲೀಸರೇ ಸಂಚಾರ ನಿಯಮ ಪಾಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಂಚಾರ ಪೊಲೀಸ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿ, ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಅವರು ಆದೇಶಿಸಿದ್ದಾರೆ.

ಕಾನೂನು ಜಾರಿಗೆ ತರುವ ಪೊಲೀಸರು ಸಂಚಾರ ನಿಯಮಗಳನ್ನು ಪಾಲಿಸದೇ ವಾಹನ ಚಾಲನೆ ಮಾಡುತ್ತಿರುವ ಪ್ರಕರಣಗಳು ನಗರದಲ್ಲಿ ಕಂಡುಬರುತ್ತಿವೆ. ಸೀಟ್‌ಬೆಲ್ಟ್/ ಹೆಲ್ಮೆಟ್ ಧರಿಸದೇ ಇರುವುದು ಹಾಗೂ ವಾಹನಗಳನ್ನು ಚಲಾಯಿಸುವ ವೇಳೆ ಮೊಬೈಲ್ ಬಳಕೆ ಮತ್ತಿತರ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ.



ಕಾರ್ತಿಕ್ ರೆಡ್ಡಿ

ಸಂಚಾರ ನಿಯಮಗಳನ್ನು ನಾಗರಿಕರು ಪಾಲನೆ ಮಾಡುವುದರ ಜತೆಗೆ ಕರ್ತವ್ಯದಲ್ಲಿರುವ ಪೊಲೀಸ್ ಅಧಿಕಾರಿಗಳು– ಸಿಬ್ಬಂದಿ ಸಹ ಪಾಲನೆ ಮಾಡಬೇಕು. ಕಾನೂನು ಜಾರಿಗೊಳಿಸುವ ಸಂಚಾರ ಪೊಲೀಸರೇ ಸಂಚಾರ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸಾರ್ವಜನಿಕರಿಗೆ ಹೇಳುವ ಯಾವುದೇ ಅಧಿಕಾರ ಇರುವುದಿಲ್ಲ ಎಂದು ಕಾರ್ತಿಕ್ ರೆಡ್ಡಿ ಎಚ್ಚರಿಸಿದ್ದಾರೆ. 'ನಾವು ಶಿಸ್ತು ಪಾಲಿಸಿದರೆ ನಮ್ಮನ್ನು ಅನುಸರಿಸುವ ಜನರಿಗೆ ಸಂಚಾರ ನಿಯಮ ಪಾಲಿಸುವ ಬಗ್ಗೆ ಶಿಸ್ತು ಮೂಡಿಸುವುದಲ್ಲೇ ಸಂಚಾರ ನಿಯಮಗಳಿಗೆ ಗೌರವ ನಿರೀಕ್ಷೆ ಮಾಡಬಹುದು' ಎಂದಿದ್ದಾರೆ.

ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ, ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸಬೇಕು. ಜತೆಗೆ, ಸಂಚಾರ ನಿಯಮ ಪಾಲಿಸಬೇಕು. ನಿಯಮ ಉಲ್ಲಂಘನೆ ಪ್ರಕರಣಗಳು ಕಂಡುಬಂದರೆ, ಅಂತಹ ಸಿಬ್ಬಂದಿಯ ವಿರುದ್ಧ ಐಎಂವಿ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

ನಕಲಿ ಸಹಿ: ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಅಪರಾಧಿಕ ಒಳಸಂಚು ರೂಪಿಸಿ ಸ್ಥಿರಾಸ್ತಿ ಖರೀದಿಸಿದಲ್ಲದೆ, ಚೆಕ್‌ಗಳ ಮೇಲೆ ನಕಲಿ ಸಹಿ ಮಾಡಿ ವಂಚಿಸಿರುವ ಆರೋಪದಡಿ ಮೂವರ ವಿರುದ್ಧ ಇಲ್ಲಿನ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊತ್ತನೂರು ನಿವಾಸಿ ತೇಜಸ್ವಿ ಮರಿಯಪ್ಪ ಅವರು ನೀಡಿದ ದೂರಿನ ಮೇರೆಗೆ ಅಕ್ರಮ್ಯಾಕ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ರಜತ್ ವೆಂಕಟೇಶ್, ಸ್ನೇಹ ರಾಕೇಶ್, ಮಧ್ಯವರ್ತಿ ರಾಬಿನ್ ಫ್ರಾನ್ಸಿಸ್ ವಿರುದ್ಧ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬನಶಂಕರಿಯ ಇಂಡಸ್ಟ್ರಿಯಲ್ ಲೇಔಟ್‌ನಲ್ಲಿ ದೂರುದಾರ ತೇಜಸ್ವಿ ಮರಿಯಪ್ಪ ಅವರು ಕಟ್ಟಡ ಹೊಂದಿದ್ದಾರೆ. ಆ ಕಟ್ಟಡವನ್ನು ರಾಬಿನ್ ಫ್ರಾನ್ಸಿಸ್ ಮೂಲಕ ರಜತ್ ವೆಂಕಟೇಶ್, ಸ್ನೇಹ ರಾಕೇಶ್ ಅವರಿಗೆ ₹17.50 ಕೋಟಿಗೆ 2022ರಲ್ಲಿ ಮಾರಾಟ ಮಾಡಿದ್ದರು. ಖಾಸಗಿ ಬ್ಯಾಂಕ್‌ನ ನಾಲ್ಕು ಚೆಕ್‌ಗಳನ್ನು ಆರೋಪಿಗಳು ನೀಡಿದ್ದರು.

ಹೀಗಾಗಿ, ಶಾಂತಿನಗರದ ಉಪ ನೋಂದಾಣಾಧಿಕಾರಿಗಳ ಕಚೇರಿಯಲ್ಲಿ ಆಸ್ತಿ ಮಾರಾಟ ಕುರಿತು ಸೇಲ್ ಡೀಡ್ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. 'ಆರೋಪಿಗಳು ನೀಡಿದ್ದ ಚೆಕ್‌ಬೌನ್ಸ್ ಆಗಿತ್ತು. ಆಗ ಹಣ ನೀಡುವಂತೆ ಕೇಳಿದಾಗ ಆರೋಪಿಗಳು ವಿನಾಕಾರಣ ಮುಂದೂಡುತ್ತಾ ಹೋದರು.

ಹಣ ಕೊಡುವಂತೆ ಮತ್ತೊಮ್ಮೆ ಪ್ರಶ್ನೆ ಮಾಡಿದಾಗ ಜೀವ ಬೆದರಿಕೆ ಹಾಕಿದ್ದಾರೆ. ಹೀಗಾಗಿ ಕಟ್ಟಡ ಖರೀದಿಸಿ ವಂಚಿಸಿದ ಮೂವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ತೇಜಸ್ವಿ ಮರಿಯಪ್ಪ ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಳ್ಳಸಾಗಣೆ: ₹11 ಕೋಟಿ ಮೌಲ್ಯದ ಗಾಂಜಾ ವಶ

ದೇವನಹಳ್ಳಿ: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ವೇಳೆ ಮಾರಾಟಕ್ಕೆ ವಿದೇಶದಿಂದ ಕಳ್ಳಸಾಗಣೆ ಮಾಡುತ್ತಿದ್ದ ₹10.70 ಕೋಟಿ ಮೌಲ್ಯದ 30 ಕೆ.ಜಿಗೂ ಹೆಚ್ಚು ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಸೋಮವಾರ ವಶಪಡಿಸಿಕೊಂಡಿದ್ದಾರೆ.

ಮಾದಕ ವಸ್ತು ವಿರೋಧಿ ಆಂದೋಲನ ಅಭಿಯಾನ ಭಾಗವಾಗಿ ವೈಮಾನಿಕ ಗುಪ್ತಚರ ಹಾಗೂ ಕಸ್ಟಮ್ಸ್ ಅಧಿಕಾರಿಗಳು ನಡೆಸುತ್ತಿದ್ದ ತಪಾಸಣೆ ವೇಳೆ ಆರೋಪಿಗಳು ಬಲೆಗೆ ಬಿದಿದ್ದಾರೆ. ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕ ಸೇರಿದಂತೆ ಒಟ್ಟು ಐವರನ್ನು ಬಂಧಿಸಲಾಗಿದೆ. ಮೊದಲ ಪ್ರಕರಣ ದಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕ ಸಾಗಿಸುತ್ತಿದ್ದ ₹2.16 ಕೋಟಿ ಮೌಲ್ಯದ 6.19 ಕೆ.ಜಿ ಹೈಡ್ರೊ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಮೊತ್ತೊಂದು ಪ್ರಕರಣದಲ್ಲಿ ₹70.70 ಲಕ್ಷ ಮೌಲ್ಯದ 2.02 ಕೆ.ಜಿ ತೂಕ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. 3ನೇ ಪ್ರಕರಣದಲ್ಲಿ ಮೂವರು ಪ್ರಯಾಣಿಕರ ಬಳಿ ₹7.7 ಕೋಟಿ ಮೌಲ್ಯದ 22.04 ಕೆ.ಜಿ ಹೈಡ್ರೋ ಗಾಂಜಾ ಸಿಕಿದೆ.



ಸಂಸ ಥಿಯೇಟರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕವಯತ್ರಿ ಎಂ.ಆರ್. ಕಮಲಾ ಅವರಿಗೆ ಕೆ.ಎನ್. ವಿಜಯಲಕ್ಷ್ಮಿ ಅನುವಾದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸ್ಕೃತಿ ಚಿಂತಕರಾದ ಶೂದ್ರ ಶ್ರೀನಿವಾಸ್, ವಿಮರ್ಶಕ ಎಚ್. ದಂಡಪ್ಪ, ಕೆ.ಎನ್. ವಿಜಯಲಕ್ಷ್ಮಿ ಅವರ ಮಕ್ಕಳಾದ ಕೆ.ಎನ್. ಸಹನ, ಕೆ.ಎನ್ ಕವನ, ಕೆ.ಎನ್. ಚಂದನ, ಸಂಸ ಥಿಯೇಟರ್ ಗೌರವ ಅಧ್ಯಕ್ಷ ಎಂ. ಜಯರಾಮ, ಲೇಖಕಿಯರಾದ ಮಲರ್ ವಿಳಿ, ಶಾಕಿರ ಖಾನಂ, ಸಂಸ ಸುರೇಶ್, ಸಹ ಪ್ರಾಧ್ಯಾಪಕ ರುದ್ರೇಶ್ ಅದರಂಗಿ ಭಾಗವಹಿಸಿದ್ದರು

12ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಅಶ್ವಥಪ್ಪನವರು

ತಿಂಡ್ಲು, ವಿದ್ಯಾರಣ್ಯಪುರ – 560 097

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆಯಿತು. ನಿಮ್ಮ ಸರಳ ಜೀವನದ ಮಾರ್ಗದರ್ಶನ ನಮಗೆ ದಾರಿದೀಪ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುವ ಕುಟುಂಬದವರು ಮತ್ತು ಅಪಾರ ಬಂಧು ವರ್ಗದವರು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ

ಪತ್ನಿಯರು ಹಾಗೂ ಮಕ್ಕಳು

ಟೈ ಬ್ರೇಕರ್‌ನಲ್ಲಿ ಗೆದ್ದು ಬೀಗಿದ ತ್ರಿವಿಕ್ರಂ, ವಿಷ್ಣು

ಮೊದಲೆರಡು ಸುತ್ತುಗಳಲ್ಲಿ ಸೊನ್ನೆ ಸುತ್ತಿ, ಕೊನೆಯ ಎರಡು ಸುತ್ತುಗಳಲ್ಲಿ ಮೊದಲ ಸ್ಥಾನಕ್ಕೆ ಜಿಗಿದಿದ್ದ ವಿಹಾನ್–ಇಶಾನ್ ಜೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಎನ್‌ಪಿಎಸ್ ತಂಡ ಮತ್ತು ಇಂದಿರಾನಗರ ಶಿಶುಗೃಹ ಸೀನಿಯರ್ ಸ್ಕೂಲ್ ತಂಡ ಸಮನಾಗಿ ಅಂಕ ಗಳಿಸಿದ್ದರೂ ಟೈ ಬ್ರೇಕರ್‌ನಲ್ಲಿ ಗೋಲು ಹೊಡೆದು (ಉತ್ತರ ನೀಡಿ) ಶಿಶುಗೃಹ ಸೀನಿಯರ್ ಸ್ಕೂಲ್ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆಯಲ್ಲಿ ಬೆಂಗಳೂರು ವಲಯ ಮಟ್ಟದ ಚಾಂಪಿಯನ್ ಆಗಿ ಹೊರ ಹೊಮ್ಮಿತು.

ಜಯನಗರ ರಾಷ್ಟ್ರೀಯ ವಿದ್ಯಾಲಯ ಶಿಕ್ಷಕರ ಕಾಲೇಜಿನ ಆರ್.ವಿ. ಆಡಿಟೋರಿಯಂನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಸಪ್ರಶ್ನೆ ಸ್ಪರ್ಧೆ ರೋಚಕ ಕ್ಷಣಗಳಿಗೆ ಸಾಕ್ಷಿಯಾಯಿತು.

ಒಟ್ಟು ಐದು ಸುತ್ತುಗಳ ಈ ಸ್ಪರ್ಧೆಯಲ್ಲಿ ಮೊದಲೆರಡು ಸುತ್ತುಗಳಲ್ಲಿ ಸೊನ್ನೆ ಸುತ್ತಿದ್ದ ಕೋರಮಂಗಲ ಎನ್‌ಪಿಎಸ್ ತಂಡ ಕೊನೇ ಎರಡು ಸುತ್ತಿನಲ್ಲಿ ಪುಟಿದೆದ್ದು ಮೊದಲ ಸ್ಥಾನಕ್ಕೆ ಜಿಗಿಯಿತು. ಆದರೆ, ಟೈ ಬ್ರೇಕರ್ ಪ್ರಶ್ನೆಗೆ ಉತ್ತರ ನೀಡುವ ವೇಳೆ ಅದೃಷ್ಟ ಕೈ ಹಿಡಿಯಲಿಲ್ಲ. ಏಕಕಾಲಕ್ಕೆ ಬಝರ್ ಒತ್ತಿದ್ದರೂ ಕ್ಷಣಮಾತ್ರದಲ್ಲಿ ಶಿಶುಗೃಹ ಸೀನಿಯರ್ ತಂಡದ ಬಝರ್ ದೀಪ ಉರಿದಿದ್ದರಿಂದ ಉತ್ತರಿಸುವ ಅವಕಾಶ ಶಿಶುಗೃಹ ಸೀನಿಯರ್ ಸ್ಕೂಲ್ ಪಾಲಾಯಿತು. ಮೊದಲ ಸುತ್ತಿನಿಂದಲೇ ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದ ಶಿಶುಗೃಹ ಸೀನಿಯರ್ ತಂಡ ಟೈ ಬ್ರೇಕರ್‌ನಲ್ಲೂ ಗೆದ್ದು ಬೀಗಿತು.

ಶಿಶುಗೃಹ ಪರವಾಗಿ ತ್ರಿವಿಕ್ರಂ ಕೇಶವನ್, ವಿಷ್ಣು ಶ್ರೀಉರುಗಣೇಶ್ ಹಾಗೂ ಎನ್‌ಪಿಎಸ್ ಪರವಾಗಿ ವಿಹಾನ್ ಮಹೇಶ್ವರಿ ಮತ್ತು ಇಶಾನ್ ಕಾಳೆ ಭಾಗವಹಿಸಿದ್ದರು.

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಜಿಲ್ಲೆಗಳ 150ಕ್ಕೂ ಅಧಿಕ ವಿದ್ಯಾಸಂಸ್ಥೆಗಳ ತಂಡಗಳು ಭಾಗವಹಿಸಿದ್ದವು. ಪ್ರಾಥಮಿಕ ಹಂತದ ಪರೀಕ್ಷೆಯಲ್ಲಿ 20 ಪ್ರಶ್ನೆಗಳನ್ನು ನೀಡಿ ಆರು ತಂಡಗಳನ್ನು ಆಯ್ಕೆ ಮಾಡಲಾಯಿತು. ಈ ಆಯ್ಕೆ ಪ್ರಕ್ರಿಯೆ ಕುತೂಹಲಕಾರಿಯಾಗಿ ನಡೆಯಿತು. ಕೊನೆಗೆ ಉತ್ತರ ಗೊತ್ತಾದಾಗ ಸರಿ ಉತ್ತರ ನೀಡಿದವರ ಮುಖ ಅರಳಿತು. ತಪ್ಪು ಉತ್ತರಿಸಿದ್ದವರ ಮುಖ ಸಪ್ಪಗಾಯಿತು. ಕೆಲವರು ಸರಿ ತಪ್ಪುಗಳಿಗೆ ಭಾವನೆ ಹೊರಹಾಕದೇ ಸ್ಥಿತಪ್ರಜ್ಞರಾದರು.

ಸುತ್ತುಗಳು: ಆರ್ಕಿಡ್ ಚಾಯ್ಸ್ ಮೊದಲ ಸುತ್ತು ಆಗಿತ್ತು. ಎಲ್ಲ ತಂಡಗಳಿಗೂ ಒಂದೊಂದು ಪ್ರಶ್ನೆಗಳಿದ್ದವು. ಅದಕ್ಕೆ ಸರಿ ಉತ್ತರ ನೀಡಿದರೆ 15 ಅಂಕಗಳಿದ್ದವು. ನೇರಪ್ರಶ್ನೆ ಇರುವ ತಂಡ ಉತ್ತರ ನೀಡದೇ ಇದ್ದರೆ ಉಳಿದ ತಂಡಗಳಲ್ಲಿ ಮೊದಲು ಬಝರ್ ಒತ್ತಿದವರಿಗೆ ಅವಕಾಶ ನೀಡಲಾಗಿತ್ತು. ಅಲ್ಲಿ ಉತ್ತರ ಬಾರದಿದ್ದರೆ ಎರಡನೇ ಬಾರಿ ಉಳಿದ ತಂಡಗಳಿಗೆ ಅವಕಾಶ ಇತ್ತು. ಮೊದಲ ಬಾರಿಯಲ್ಲೇ ಸರಿ ಉತ್ತರಕ್ಕೆ 10 ಅಂಕ, ತಪ್ಪು ಉತ್ತರಿಸಿದರೆ ನಕಾರಾತ್ಮಕ 10, ಎರಡನೇ ಬಾರಿಗೆ 5 ಮತ್ತು ನಕಾರಾತ್ಮಕ 5 ಅಂಕಗಳಿದ್ದವು. ಈ ಸುತ್ತಿನಲ್ಲಿ ಶಿಶುಗೃಹ ಸೀನಿಯರ್ ಸ್ಕೂಲ್ ಮತ್ತು ಬಿಎನ್‌ಎಂ ಪಬ್ಲಿಕ್ ಸ್ಕೂಲ್ ತಲಾ 25 ಅಂಕ, ವಿದ್ಯಾನಿಕೇತನ ಎಚ್‌ಪಿಎಸ್ ಮತ್ತು ಆರ್ಕಿಡ್ ವಿವೇಕಾನಂದ ಶಾಲೆ ತಂಡ ತಲಾ 15 ಅಂಕ ಪಡೆದರೆ, ಎಚ್‌ಎಎಲ್ ಪಬ್ಲಿಕ್ ಸ್ಕೂಲ್ ಮತ್ತು ಎನ್‌ಪಿಎಸ್ ಕೋರಮಂಗಲ ಯಾವುದೇ ಅಂಕ ಪಡೆದಿರಲಿಲ್ಲ.

'ದೇಶ ಸುತ್ತು ಕೋಶ ಓದು' ಎರಡನೇ ಸುತ್ತಾಗಿದ್ದು, ಇದರಲ್ಲಿ ನಕಾರಾತ್ಮಕ ಅಂಕ ಇರಲಿಲ್ಲ. ಈ ಸುತ್ತು ಮುಗಿಯುವಾಗ ಶಿಶುಗೃಹ ಸೀನಿಯರ್ ಸ್ಕೂಲ್ 35 ಅಂಕದೊಂದಿಗೆ ದ್ವಿತೀಯ ಸ್ಥಾನದಲ್ಲಿತ್ತು. ಬಿಎನ್‌ಎಂ ಪಬ್ಲಿಕ್ ಸ್ಕೂಲ್ 40 ಅಂಕ ಗಳಿಸಿ ಮೊದಲ ಸ್ಥಾನಕ್ಕೇರಿತ್ತು. ಉಳಿದ ತಂಡಗಳ ಅಂಕದಲ್ಲಿ ಯಾವುದೇ ಬದಲಾವಣೆ ಆಗಿರಲಿಲ್ಲ.

'ಚಿತ್ರ–ವಿಚಿತ್ರ' ಮೂರನೇ ಸುತ್ತಿನಲ್ಲಿ ಶಿಶುಗೃಹ 50 ಅಂಕ ಪಡೆದು ಮೊದಲ ಸ್ಥಾನಕ್ಕೇರಿತು. 45 ಅಂಕಗಳೊಂದಿಗೆ ಬಿಎನ್‌ಎಂ ಪಬ್ಲಿಕ್ ಸ್ಕೂಲ್ ಪೈಪೋಟಿ ನೀಡಿತ್ತು. ಮೊದಲೆರಡು ಸುತ್ತುಗಳಲ್ಲಿ ಸೊನ್ನೆಯಲ್ಲೇ ಉಳಿದಿದ್ದ ಎಚ್‌ಎಎಲ್ ಪಬ್ಲಿಕ್ ಸ್ಕೂಲ್ (10 ಅಂಕ) ಮತ್ತು ಎನ್‌ಪಿಎಸ್ ಕೋರಮಂಗಲ (5 ಅಂಕ) ಈ ಸುತ್ತಿನಲ್ಲಿ ಖಾತೆ ತೆರೆದವು.

ಆ ನಂತರ ನಡೆದ 'ವಿಷಯ ವಿಶೇಷ' ಸುತ್ತು ತಂಡ ಆಯ್ಕೆ ಮಾಡಿದ ವಿಷಯದಲ್ಲಿ ಪ್ರಶ್ನೆ ಕೇಳುವುದಾಗಿತ್ತು. ಇಲ್ಲಿಂದ ಕೋರಮಂಗಲ ತಂಡದ ಕಮಾಲ್ ಶುರುವಾಯಿತು. ಈ ಸುತ್ತಿನ ಅಂತ್ಯಕ್ಕೆ 45 ಅಂಕಗಳೊಂದಿಗೆ ಎರಡನೇ ಸ್ಥಾನಕ್ಕೆ ಬಂದು ಕೂತಿತ್ತು. ಮೊದಲ ಮೂರು ಸುತ್ತಿನಲ್ಲಿ 15ರಲ್ಲೇ ಉಳಿದಿದ್ದ ವಿದ್ಯಾನಿಕೇತನ ಎಚ್‌ಪಿಎಸ್ 10 ಅಂಕ ಹೆಚ್ಚಿಸಿಕೊಂಡು 25ಕ್ಕೇರಿಸಿಕೊಂಡಿತು. ಶಿಶುಗೃಹ (50) ಸೇರಿದಂತೆ ಉಳಿದ ತಂಡಗಳ ಅಂಕ ಹಿಂದಿನ ಸುತ್ತಿನದ್ದೇ ಮುಂದುವರಿಯಿತು.

ಫಟಾಫಟ್: ಇದು ಅಂತಿಮ ಸುತ್ತು ಮಾತ್ರವಲ್ಲ ಸ್ಪರ್ಧೆಯ ಚಿತ್ರಣವನ್ನೇ ಬದಲಾಯಿಸಿದ ಸುತ್ತೂ ಆಗಿತ್ತು. ಸ್ಟೆಪ್‌ಅಪ್ ಆಯ್ಕೆ ಮಾಡಿ ಸರಿ ಉತ್ತರ ನೀಡಿದರೆ 15 ಅಂಕ, ಡಿಫಾಲ್ಟ್ ಸರಿ ಉತ್ತರಕ್ಕೆ 10 ಅಂಕ ಇತ್ತು. ಸ್ಟೆಪ್‌ಅಪ್ ಮತ್ತು ಡಿಫಾಲ್ಟ್‌ಗೆ ಕ್ರಮವಾಗಿ ನಕಾರಾತ್ಮಕ 7 ಮತ್ತು 5 ಅಂಕಗಳಿದ್ದವು.

ಸ್ಟೆಪ್‌ಅಪ್ ತೆಗೆದುಕೊಂಡು ಒಂದು ಸರಿ ಉತ್ತರ ನೀಡಿದ ಶಿಶುಗೃಹ 65 ಅಂಕ ಪಡೆಯಿತು. ಕೋರಮಂಗಲ ತಂಡವು ಎರಡು ಸರಿ ಉತ್ತರ ನೀಡಿದ್ದರೂ ಸ್ಟೆಪ್‌ಅಪ್ ತೆಗೆದುಕೊಳ್ಳದೇ ಇದ್ದಿದ್ದರಿಂದ ಈ ತಂಡದ ಮೊತ್ತವೂ 65 ಆಯಿತು. ಬಿಎನ್‌ಎಂ ಪಬ್ಲಿಕ್ ಸ್ಕೂಲ್ ಸ್ಟೆಪ್‌ಅಪ್ ತೆಗೆದುಕೊಂಡು ಒಂದು ಸರಿ, ಒಂದು ತಪ್ಪು ಉತ್ತರ ನೀಡಿದ್ದರಿಂದ ಅವರ ಅಂಕ 63ಕ್ಕೇ ಬಂದು ನಿಂತಿತು. ಈ ತಂಡದ ಆರ್ಯ ರಾಘವೇಂದ್ರ, ಗೌತಮ್ ಕೃಷ್ಣಮೂರ್ತಿ ದ್ವಿತೀಯ ರನ್ನರ್ ಅಪ್ ಆದರು. ಆರ್ಕಿಡ್ ವಿವೇಕಾನಂದದ ಪರೀಕ್ಷೀತ್ ರಾಮ್, ಋತ್ವಿಕ್ ರಾಜೀವ್ ಭಾರದ್ವಾಜ್, ವಿದ್ಯಾನಿಕೇತನ ಎಚ್‌ಪಿಎಸ್‌ನ ಉಜ್ವಲ್ ಕೃಷ್ಣ, ಸುಮುಧ ಕೆ.ಜಿ., ಎಚ್‌ಎಎಲ್ ಪಬ್ಲಿಕ್ ಸ್ಕೂಲ್‌ನ ರೋಹನ್ ಎಂ. ಮತ್ತು ಋತ್ವಿಕ್ ಸಿ.ಎನ್. ಆ ನಂತರದ ಸ್ಥಾನಗಳಿಗೆ ತೃಪ್ತಿಪಟ್ಟರು.

ಪ್ರಥಮ ಸ್ಥಾನ ಮತ್ತು ಮೊದಲ ರನ್ನರ್ ಅಪ್ ನಿರ್ಧರಿಸಲು ಒಂದು ಪ್ರಶ್ನೆ ನೀಡಲಾಯಿತು. ಮೊದಲು ಬಝರ್ ಒತ್ತಿದವರಿಗೆ ಉತ್ತರ ನೀಡಬೇಕು. ಸರಿ ಇದ್ದರೆ ಚಾಂಪಿಯನ್, ತಪ್ಪು ಉತ್ತರ ನೀಡಿದರೆ ಎದುರು ತಂಡ ಚಾಂಪಿಯನ್ ಎಂಬುದು ನಿಯಮವಾಗಿತ್ತು.

ಮಿರ್ಜಾಪುರದ ಗೋಪುರದ ಚಿತ್ರ ತೋರಿಸಿ ಅದು ಏನನ್ನು ನಿರ್ಧರಿಸುತ್ತದೆ ಎಂದು ಕೇಳಿದ ಪ್ರಶ್ನೆಗೆ ಎರಡೂ ತಂಡಗಳಿಗೆ ಉತ್ತರ ಗೊತ್ತಿದ್ದರೂ ಶಿಶುಗೃಹ ತಂಡ ಕೂದಲೆಳೆ ಅಂತರದಲ್ಲಿ ಮೊದಲು ಬಝರ್ ಒತ್ತಿ ವಿಜಯಶಾಲಿಯಾಯಿತು. ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಯಿತು.

ಸ್ಪರ್ಧಿಗಳು ಉತ್ತರಿಸಲಾಗದೇ ಪ್ರೇಕ್ಷಕರ ಕಡೆಗೆ ಬಂದ ಪ್ರಶ್ನೆಗಳಿಗೆ ಮತ್ತು ಪ್ರೇಕ್ಷಕರಿಗಾಗಿಯೇ ಸೀಮಿತವಾದ ಪ್ರಶ್ನೆಗಳಿಗೆ ಉತ್ತರಿಸಿ ಹಲವರು ಸ್ಥಳದಲ್ಲೇ ಬಹುಮಾನ ಪಡೆದರು. 'ಕ್ಯೂರಿಯೊಸಿಟಿ ಸೊಲ್ಯುಷನ್ಸ್' ಸಂಸ್ಥೆಯ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಆಕರ್ಷಕವಾಗಿ ಕ್ವಿಜ್ ನಡೆಸಿಕೊಟ್ಟರು.



ಬೆಂಗಳೂರು ವಲಯ ಮಟ್ಟದ ಪ್ರಜಾವಾಣಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಜೊತೆಗೆ (ನಿಂತವರು) ಮೊದಲ ರನ್ನರ್‌ಅಪ್ ವಿಹಾನ್ ಮಹೇಶ್ವರಿ, ಇಶಾನ್ ಕಾಳೆ, ಪ್ರಥಮ ಸ್ಥಾನ ಪಡೆದ ತ್ರಿವಿಕ್ರಂ ಕೇಶವನ್, ವಿಷ್ಣು ಶ್ರೀಉರುಗಣೇಶ್, ಎರಡನೇ ರನ್ನರ್ ಅಪ್ ಆದ ಆರ್ಯ ರಾಘವೇಂದ್ರ, ಗೌತಮ್ ಕೃಷ್ಣಮೂರ್ತಿ. ಸಮಾಧಾನಕರ ಪ್ರದರ್ಶನ ನೀಡಿದ ರೋಹನ್ ಎಂ., ಋತ್ವಿಕ್ ಸಿ.ಎನ್., ಪರೀಕ್ಷೀತ್ ರಾಮ್, ಋತ್ವಿಕ್ ರಾಜೀವ್ ಭಾರಧ್ವಾಜ್, ಉಜ್ವಲ್ ಕೃಷ್ಣ, ಸುಮುಧ ಕೆ.ಜಿ.



ಪ್ರಾಥಮಿಕ ಸುತ್ತಿನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಿದ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಪ್ರಜಾವಾಣಿ ಚಿತ್ರಗಳು



ಬೆಂಗಳೂರು ವಲಯ ಮಟ್ಟದ ಪ್ರಜಾವಾಣಿ ರಸಪ್ರಶ್ನೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿ. ರಮೇಶ್ ಅವರಿಗೆ ರವೀಂದ್ರ ಭಟ್ಟ ಸ್ಮರಣಿಕೆ ನೀಡಿದರು. ದೀಪ್ತಿ ಉಪಸ್ಥಿತರಿದ್ದರು.

ಬುದ್ಧಿಮತ್ತೆಯ ಬೆಳವಣಿಗೆ: ಕುಲಪತಿ ರಮೇಶ್

ರಸಪ್ರಶ್ನೆ ಎಂಬುದು ಪ್ರಶ್ನೆಗೆ ಉತ್ತರ ನೀಡುವುದಕ್ಕಷ್ಟೇ ಸೀಮಿತವಾಗಿಲ್ಲ. ಅದು ಬುದ್ಧಿಮತ್ತೆಯನ್ನು ಬೆಳೆಸಲು ಅನುಕೂಲವಾಗುವ ಪ್ರಕ್ರಿಯೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ತಿಳಿಸಿದರು.

'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಅಡಗಿರುವ ಶಕ್ತಿ, ಬುದ್ಧಿವಂತಿಕೆ ಹೊರಬರಬೇಕಿದ್ದರೆ ಅನೇಕ ಪ್ರಯತ್ನಗಳು ಬೇಕಾಗುತ್ತವೆ. 'ಪ್ರಜಾವಾಣಿ'ಯು ರಸಪ್ರಶ್ನೆ ಸ್ಪರ್ಧೆ ಮೂಲಕ ಮಕ್ಕಳ ಜ್ಞಾನಮಟ್ಟವನ್ನು ಹೆಚ್ಚಿಸುತ್ತಿದೆ ಎಂದು ಶ್ಲಾಘಿಸಿದರು.

ಇಂಥ ಕಾರ್ಯಕ್ರಮಗಳು ವಿಶ್ಲೇಷಣಾತ್ಮಕ ಚಿಂತನೆ, ನಿರ್ಧಾರ ಕೈಗೊಳ್ಳುವ ಶಕ್ತಿ ಮತ್ತು ಸಮರ್ಥ ವ್ಯಕ್ತಿತ್ವ ಬೆಳೆಸಲು ಸಹಕಾರಿಯಾಗಿರುತ್ತದೆ. ಯೋಚನಾ ಶಕ್ತಿಯನ್ನು ಹೆಚ್ಚಿಸುವುದರಿಂದ, ನಿಮ್ಮನ್ನು ಕ್ರಿಯಾಶೀಲರನ್ನಾಗಿ ಮಾಡುವುದರಿಂದ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದು ಹೇಳಿದರು.

ಕೃತಕ ಬುದ್ಧಿಮತ್ತೆ ಮತ್ತು ಮೊಬೈಲ್‌ಗಳಿಗೆ ದಾಸರಾಗಬಾರದು. ನಮ್ಮ ಜ್ಞಾನ ಹೆಚ್ಚಿಸಲಷ್ಟೇ ಅವು ಬಳಕೆಯಾಗಬೇಕು ಎಂದು ಸಲಹೆ ನೀಡಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಸನ್‌ಭೀಮ್ ವೆಂಚರ್ಸ್ ಉಪಾಧ್ಯಕ್ಷೆ (ಮಾರ್ಕೆಟಿಂಗ್) ದೀಪ್ತಿ ಭಾಗವಹಿಸಿದ್ದರು.

ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಪ್ರಸ್ತುತಪಡಿಸಿದ ಈ ಕಾರ್ಯಕ್ರಮದಲ್ಲಿ ಬ್ಯಾಂಕಿಂಗ್ ಪಾರ್ಟ್‌ನರ್ 'ಎಸ್‌ಬಿಐ'', ರೀಫ್ರೆಶ್‌ಮೆಂಟ್ ಪಾರ್ಟ್‌ನರ್ 'ಮೊಗು ಮೊಗು, ಸ್ಪೆಷಲ್ ಪಾರ್ಟ್‌ನರ್ ಭೀಮ, ನ್ಯೂಟ್ರಿಷನ್ ಪಾರ್ಟ್‌ನರ್ 'ನಂದಿನಿ' ಸಹಕರಿಸಿದವು. ಪೂರ್ವಿಕಾ, ವಿಐಪಿಎಸ್, ಟ್ಯಾಲೆಂಟ್ ಸ್ಪ್ರಿಂಟ್, ಐಸಿಎಸ್ ಮಹೇಶ್ ಪಿಯು ಕಾಲೇಜು, ಸೂಪರ್ ಬ್ರೈನ್, ಮಾರ್ಗದರ್ಶಿ, ದಿ ಟೀಮ್ ಅಕಾಡೆಮಿ, ಐಬಿಎಂಆರ್, ಮಂಗಳೂರು ಪಿಯು ಕಾಲೇಜು, ಶಾರದಾ ವಿದ್ಯಾಮಂದಿರ ಸಹಯೋಗ ನೀಡಿದ್ದವು. ಏಷ್ಯಾನೆಟ್ ಸುವರ್ಣ ನ್ಯೂಸ್ ಟಿವಿ ಸಹಯೋಗವನ್ನು ನೀಡಿತು.



ಬೆಂಗಳೂರು ವಲಯ ಮಟ್ಟದ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆಯಲ್ಲಿ ಟೈಬ್ರೇಕರ್ ಮೂಲಕ ಗೆದ್ದಾಗ ತ್ರಿವಿಕ್ರಮ್, ವಿಷ್ಣು ಅವರ ಮುಖದಲ್ಲಿ ಆಶ್ಚರ್ಯ–ಖುಷಿ ಒಮ್ಮೆಲೆ ಹೊಮ್ಮಿದ ಕ್ಷಣ

'ಸೋಲುವ ಭಯ ಉಂಟಾಗಿತ್ತು'

ಮೊದಲಿನಿಂದಲೂ ನಾವು ಚೆನ್ನಾಗಿ ಉತ್ತರ ನೀಡುತ್ತಾ ಬಂದಿದ್ದೆವು. ಆದರೆ, ಅಂತಿಮ ಸುತ್ತಿನಲ್ಲಿ ಅಂಕಗಳು ಸರಿ ಸಮವಾದಾಗ ಟೈ ಬ್ರೇಕರ್‌ನಲ್ಲಿ ಸೋಲುವ ಭೀತಿ ಕಾಡಿತ್ತು. ಭಯ ಮೆಟ್ಟಿ ಗೆದ್ದಿರುವುದಕ್ಕೆ ಖುಷಿಯಾಗಿದೆ. ಇಂಥ ಕಾರ್ಯಕ್ರಮವನ್ನು ಆಯೋಜಿಸಿದ್ದ ಪ್ರಜಾವಾಣಿಗೆ ಧನ್ಯವಾದಗಳು ಎಂದು ಶಿಶುಗೃಹ ಸೀನಿಯರ್ ಸ್ಕೂಲನ್ ತ್ರಿವಿಕ್ರಂ ಕೇಶವನ್, ವಿಷ್ಣು ಶ್ರೀಉರುಗಣೇಶ್ ಪ್ರತಿಕ್ರಿಯಿಸಿದರು.

'ಅವಕಾಶ ತಪ್ಪಿ ಹೋಯಿತು'

ಆರಂಭದಲ್ಲಿ ನಾವು ಅಂಕ ಗಳಿಸುವಲ್ಲಿ ವಿಫಲರಾದರೂ ಕೊನೆಗೆ ಮೊದಲ ಸ್ಥಾನಕ್ಕೆ ಬಂದೆವು. ಇನ್ನೊಂದು ತಂಡವೂ ಅಷ್ಟೇ ಅಂಕ ಗಳಿಸಿದ್ದರಿಂದ ಟೈಬ್ರೇಕರ್‌ಗೆ ಹೋಗಬೇಕಾಯಿತು. ಅಲ್ಲಿ ಕೇಳಿದ ಪ್ರಶ್ನೆ ಸುಲಭದ್ದಾಗಿತ್ತು. ಆದರೆ, ನಮಗಿಂತ ಮೊದಲು ಅವರು ಬಝರ್ ಒತ್ತಿದರು. ಉತ್ತರಿಸುವ ಅದೃಷ್ಟ ನಮಗೆ ಸಿಗಲಿಲ್ಲ. ನಮಗೇನು ಅದರಿಂದ ಬೇಸರವಾಗಿಲ್ಲ ಎಂದು ಕೋರಮಂಗಲ ಎನ್‌ಪಿಎಸ್‌ನ ವಿಹಾನ್ ಮಹೇಶ್ವರಿ ಮತ್ತು ಇಶಾನ್ ಕಾಳೆ ತಿಳಿಸಿದರು.

ಚಿಟಿಕೆ ಸುದ್ದಿ

ಗ್ರೀನ್ ಕಾರಿಡಾರ್‌ನಲ್ಲಿ ಹೃದಯ ರವಾನೆ

ಕೆ.ಆರ್.ಪುರ: ಜೀವ ರಕ್ಷಣೆಯ ಮಹತ್ವದ ಕಾರ್ಯಾಚರಣೆಯಾಗಿ ದೊಡ್ಡನೆಕ್ಕುಂದಿಯ ಕಿಮ್ಸ್ ಆಸ್ಪತ್ರೆಯಿಂದ ವೈಟ್‌ಫೀಲ್ಡ್‌ನ ಆಸ್ಟರ್ ಆಸ್ಪತ್ರೆಗೆ 'ಗ್ರೀನ್ ಕಾರಿಡಾರ್'ನಲ್ಲಿ ಹೃದಯವನ್ನು ರವಾನಿಸಲಾಯಿತು.

ದೊಡ್ಡನೆಕ್ಕುಂದಿಯ ಕಿಮ್ಸ್ ಆಸ್ಪತ್ರೆಯಿಂದ ಬಿ.ನಾರಾಯಣಪುರ, ಸಿಂಗಯ್ಯನಪಾಳ್ಯ, ಗರುಡಾಚಾರ್‌ಪಾಳ್ಯ, ಹೂಡಿ ವೃತ್ತ, ರಾಜಪಾಳ್ಯ ಮಾರ್ಗವಾಗಿ ವಾಹನ ಸಾಗಿತು. ಒಟ್ಟು ಏಳು ಕಿಮೀ ದೂರವನ್ನು ಏಳು ನಿಮಿಷಗಳಲ್ಲಿ ಕ್ರಮಿಸಿತು. ಮಹದೇವಪುರ ಸಂಚಾರ ಪೊಲೀಸರು ಸಹಕಾರ ನೀಡಿದರು.

ವೈದ್ಯರು, ಪೊಲೀಸರ ಸಮನ್ವಯದಿಂದ ಹೃದಯವನ್ನು ನಿಗದಿತ ಸಮಯದಲ್ಲಿ ಆಸ್ಪತ್ರೆಗೆ ತಲುಪಿಸಲಾಗಿದೆ.

ಪತ್ರಿಕಾ ವಿತರಕರ ಒಕ್ಕೂಟಕ್ಕೆ ಪ್ರಮೋದ್ ಅಧ್ಯಕ್ಷ

ನೆಲಮಂಗಲ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ತಾಲ್ಲೂಕು ಅಧ್ಯಕ್ಷರಾಗಿ ಆರ್.ಪ್ರಮೋದ್ ಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರಾಮಚಂದ್ರಬಾಬು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಆರ್.ಪ್ರಮೋದ್ ಕುಮಾರ್

ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ ನೂತನ ಪದಾಧಿಕಾರಿಗಳಿಗೆ ಅಭಿನಂದಿಸಿ, ಸಮಸ್ಯೆಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ವಿತರಕರು ಸಂಘಟಿತರಾಗಬೇಕು ಎಂದರು.

ಗೌರವಾಧ್ಯಕ್ಷ–ಬೈಲಪ್ಪ, ಉಪಾಧ್ಯಕ್ಷ–ಶಿವಕುಮಾರ್, ಖಜಾಂಚಿ– ರವೀಶ್, ಸಲಹೆಗಾರ– ಮಹೇಶ್, ನಿರ್ದೇಶಕರಾಗಿ ನಾಗರಾಜು, ರಾಮಣ್ಣ, ಅನ್ವರ್‌ಬೇಗ್, ಅಶೋಕ್, ರಾಘವೇಂದ್ರ, ಮರಿಯಪ್ಪ, ಅನಂತರಾಮು, ಚಿಕ್ಕರಾಜು, ವಿಜಯ್ ವೀಳ್ಯದೆಲೆ, ನಾರಾಯಣ್, ನಂದ ಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಪ್ರಶಾಂತ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಸಂಗಮ್ ಸುರೇಶ್, ಕಾರ್ಯದರ್ಶಿ ಸುರೇಶ್, ತುಮಕೂರು ಜಿಲ್ಲಾಧ್ಯಕ್ಷ ಚಲುವರಾಜು (ರಘು), ಜಿಲ್ಲಾ ನಿರ್ದೇಶಕ ಆನಂದ್ ಜೈನ್, ವಕೀಲ ದಿಲೀಪ್‌ಕುಮಾರ್ ಉಪಸ್ಥಿತರಿದ್ದರು.



ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸೋಮವಾರ ವಿಜಯ ಸೌಹಾರ್ದ ಬ್ಯಾಂಕ್‌ನ 68ನೇ ಶಾಖೆಯ ಉದ್ಘಾಟನೆ ಸಮಾರಂಭದಲ್ಲಿ ಮಾಜಿ ಸಚಿವ ಮುರುಗೇಶ ಆರ್.ನಿರಾಣಿ, ಸಂಸದ ಬಸವರಾಜ ಬೊಮ್ಮಾಯಿ ಮತ್ತು ಹರಿಹರ ಪಂಚಮಸಾಲಿ ಪೀಠದ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ಮತ್ತು ಬ್ಯಾಂಕ್ ನಿರ್ದೇಶಕರು ಪಾಲ್ಗೊಂಡಿದ್ದರು

'ಜಿಬಿಎ ಕಾಯ್ದೆ ಸಂವಿಧಾನಕ್ಕೆ ವಿರುದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ಮಸೂದೆ ಸಂವಿಧಾನ ವಿರೋಧಿಯಾಗಿದೆ. ಈ ಕೂಡಲೇ ಇದನ್ನು ವಾಪಸ್ ಪಡೆಯಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಅವರು ಒತ್ತಾಯಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಾಂಗ್ರೆಸ್‌ಗೆ ರಾಜಕೀಯ ಲಾಭ ಆಗುವ ರೀತಿಯಲ್ಲಿ ವಾರ್ಡ್ ವಿಂಗಡಣೆ ಮಾಡಲಾಗಿದೆ. ಈ ವಿಂಗಡಣೆಯು ಸಾಕಷ್ಟು ನ್ಯೂನತೆಗಳಿಂದ ಕೂಡಿದೆ. ಬೆಂಗಳೂರು ಅಭಿವೃದ್ಧಿಗೆ ಮಾರಕವಾಗಿರುತ್ತದೆ ಎಂದು ಆರೋಪಿಸಿದರು.

ಚುನಾವಣೆ ನಡೆಸಲು ಹೊಸ ವಾರ್ಡ್‌ಗಳಿಗೆ ಕಾರ್ಪೊರೇಟರ್‌ಗಳನ್ನು ನಾಮನಿರ್ದೇಶನ ಮಾಡಲು ಸಂವಿಧಾನವು ಸರ್ಕಾರಕ್ಕೆ ಅವಕಾಶ ನೀಡುವುದಿಲ್ಲ. 74ನೇ ತಿದ್ದುಪಡಿ ಕಾಯ್ದೆ, 1992ರಿಂದ ಸ್ಥಾಪಿಸಲ್ಪಟ್ಟ ಪುರಸಭೆಯನ್ನು ನಿಯಂತ್ರಿಸುವ ಮೂಲಭೂತ ತತ್ವವೆಂದರೆ ಎಲ್ಲಾ ವಾರ್ಡ್ ಪ್ರತಿನಿಧಿಗಳಿಗೆ ನೇರ ಚುನಾವಣೆಗೆ ಸ್ಪರ್ಧಿಸುವ ಅವಕಾಶ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

'ಮರ ಕಡಿಯಲು ಅನುಮತಿ ಇಲ್ಲ'

ಕಂಟೋನ್ಮೆಂಟ್: ಜೆಸಿಬಿಯಿಂದ ಸಣ್ಣ ಮರಗಳ ತೆರವು: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿಲ್ಲ' ಎಂದು ಹೈಗ್ರೌಂಡ್ಸ್ ಪೊಲೀಸರು ತಿಳಿಸಿದ್ದಾರೆ.

ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳ ಪ್ರದೇಶವನ್ನು ಜೀವ ವೈವಿಧ್ಯ ಪಾರಂಪರಿಕ ತಾಣ ಎಂದು ಹೊರಡಿಸಿದ್ದ ಅಧಿಸೂಚನೆಯನ್ನು ಅರಣ್ಯ ಇಲಾಖೆ ವಾಪಸ್ ಪಡೆದ ನಂತರ, ಜೆಸಿಬಿಗಳು ಮರಗಳನ್ನು ತೆರವು ಮಾಡುತ್ತಿವೆ ಎಂದು ಹೇಳಲಾಗಿದೆ.

ಕಾಲೊನಿಯಲ್ಲಿ ಜೆಸಿಬಿ ಬಂದಿರುವುದನ್ನು ಗಮನಿಸಿದ ಪರಿಸರ ಕಾರ್ಯಕರ್ತರು, 'ನಮ್ಮನ್ನು ಒಳಗೆ ಬಿಡುತ್ತಿಲ್ಲ. ದಯವಿಟ್ಟು ಇಲ್ಲೇನಾಗುತ್ತಿದೆ ಎಂಬುದರ ಮಾಹಿತಿ ನೀಡಿ' ಎಂದು ಹೈಗ್ರೌಂಡ್ಸ್ ಪೊಲೀಸರ ಮೊರೆ ಹೋಗಿದ್ದರು. ಸ್ಥಳಕ್ಕೆ ಬಂದು ಪರಿಶೀಲಿಸಿ, ಮರ ಕಡಿಯಲು ಅನುಮತಿ ನೀಡಿಲ್ಲ. ಸಣ್ಣ ಮರ ತೆರವು ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು ಎಂದು ಪರಿಸರ ಕಾರ್ಯಕರ್ತರು ಹೇಳಿದರು.

ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ 8.61 ಎಕರೆ ಪ್ರದೇಶವನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' ಎಂದು ಘೋಷಿಸಿ, 2025ರ ಸೆಪ್ಟೆಂಬರ್ 10ರಂದು ಅಧಿಸೂಚಿಸಲಾಗಿತ್ತು. ಈ ಆದೇಶವನ್ನು ಯಾವುದೇ ಕಾರಣ ನೀಡದೆ ಡಿ.6ರಂದು ಅರಣ್ಯ ಇಲಾಖೆಯು ಹಿಂಪಡೆದಿದೆ.



ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿರುವ ಜೆಸಿಬಿ ಯಂತ್ರ

ಕಾನೂನು ತೊಡಕು: 'ರೈಲು ಭೂ ಅಭಿವೃದ್ಧಿ ಪ್ರಾಧಿಕಾರ (ಆರ್‌ಎಲ್‌ಡಿಎ) 8.61 ಎಕರೆ ಭೂಮಿಯನ್ನು 60 ವರ್ಷಕ್ಕೆ ಬಾಗ್ಮನೆ ಟೆಕ್ಸ್‌ವರ್ಥ್ ಅವರಿಗೆ ಗುತ್ತಿಗೆಗೆ ನೀಡಿದೆ. ಅವರು ವಾಣಿಜ್ಯ ಸಂಕೀರ್ಣ ನಿರ್ಮಿಸಲು 368 ಮರಗಳನ್ನು ಕಡಿಯಲು ಮುಂದಾದಾಗ 'ಪರಿಸರಕ್ಕಾಗಿ ನಾವು' ಸಂಘಟನೆ ಸೇರಿದಂತೆ ಪರಿಸರ ಕಾರ್ಯಕರ್ತರು ಹೋರಾಟ ನಡೆಸಿದರು. ಇದಕ್ಕೆ ಸ್ಪಂದಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಜೀವವೈವಿಧ್ಯ ಮಂಡಳಿಯಿಂದ ಪ್ರದೇಶವನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' ಎಂದು ಘೋಷಿಸಿದ್ದರು.

ಆರ್‌ಎಲ್‌ಡಿಎ ಅವರು ಅರಣ್ಯ ಇಲಾಖೆಗೆ ಪತ್ರ ಬರೆದು, 'ರೈಲ್ವೆ ಕಾಯ್ದೆಯ ಪ್ರಕಾರ, ರೈಲ್ವೆ ಭೂಮಿಯನ್ನು ರಾಜ್ಯ ಸರ್ಕಾರ ಪಡೆಯಲು ಅಥವಾ ಅದನ್ನು ಸಂರಕ್ಷಿಸುವಂತೆ ಅಧಿಸೂಚನೆ ಮಾಡಲು ಬರುವುದಿಲ್ಲ. ರೈಲ್ವೆ ಯೋಜನೆಗಳಿಗೆ ಇಲ್ಲಿ ಕಟ್ಟಡ ನಿರ್ಮಾಣ ಅಗತ್ಯವಾಗಿದ್ದು, ಯೋಜನೆ ಮುಂದುವರಿಯಬೇಕಾಗಿದೆ. ಜೀವವೈವಿಧ್ಯ ಪಾರಂಪರಿಕ ತಾಣ ಎಂದು ನೀವು ಘೋಷಿಸಲು ಬರುವುದಿಲ್ಲ ಎಂದು ರೈಲ್ವೆ ಕಾಯ್ದೆಯನ್ನು ಉಲ್ಲೇಖಿಸಿದ್ದರು.

'ಇದರಿಂದ ವಿಚಲಿತರಾದ ಅರಣ್ಯ ಇಲಾಖೆ ಅಧಿಕಾರಿಗಳು, ಯಾವುದೇ ವಿವರಣೆ ನೀಡದೆ, ಅರಣ್ಯ ಸಚಿವರಿಗೆ ಮಾಹಿತಿ ನೀಡದೆ 'ಜೀವವೈವಿಧ್ಯ ಪಾರಂಪರಿಕ ತಾಣ'ದ ಅಧಿಸೂಚನೆ ವಾಪಸ್ ಪಡೆದಿದ್ದಾರೆ. 'ರೈಲ್ವೆ ಸಚಿವಾಲಯದ ಜತೆ ಮಾತುಕತೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ' ಎಂದೂ ಹೇಳದೆ ಎಲ್ಲ ಹಾದಿಗಳೂ ಮುಚ್ಚಿದ ಹಾಗೆ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ವರ್ತಿಸಿದ್ದಾರೆ' ಎಂದು ಪರಿಸರ ಕಾರ್ಯಕರ್ತರು ದೂರಿದ್ದಾರೆ.

'371 ಮರಗಳನ್ನು ಕಡಿತ ಮಾಡದೆ ಸ್ಥಳಾಂತರ ಮಾಡಲು ಪ್ರಯತ್ನಿಸಲಾಗುತ್ತದೆ ಎಂದು ಆರ್‌ಎಲ್‌ಡಿಎ ಪತ್ರದಲ್ಲಿ ತಿಳಿಸಿದೆ. ಆದರೆ, ಅದನ್ನು ಸ್ಥಳಾಂತರ ಮಾಡುವುದು ಸಾಧ್ಯವಿಲ್ಲ. ಅರಣ್ಯ ಸಚಿವರು ರೈಲ್ವೆ ಸಚಿವರು ಹಾಗೂ ಸಚಿವಾಲಯದೊಂದಿಗೆ ಮಾತುಕತೆ ನಡೆಸಿ, 371 ಮರಗಳನ್ನು ಉಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಆಗ್ರಹಿಸಿದರು.

'ಅರಣ್ಯ ಇಲಾಖೆಯ ಅಧಿಕಾರಿಗಳು ಏನೂ ಗೊತ್ತಿಲ್ಲದೆ ಅಧಿಸೂಚನೆ ಮಾಡಿದ್ದಾರೆ ಎಂಬುದು ಸುಳ್ಳು. ರಾಜಕೀಯ, ರಿಯಲ್ ಎಸ್ಟೇಟ್ ಮಾಫಿಯಾಗೆ ಮಣಿದು ವರ್ತಿಸುತ್ತಿದ್ದಾರೆ. ಸಚಿವರು, ಸಿ.ಎಂ ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.



'ಲುಮಿನೆಸೆನ್ಸ್' – ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಬೆಳ್ಳಿ ಪಯಣ ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು

ಕ್ರಿಸ್ತು ಜಯಂತಿ ವಿ.ವಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್ತು ಜಯಂತಿ ಕಾಲೇಜು 'ಡೀಮ್ಡ್ ಟು ಬಿ ವಿಶ್ವ ವಿದ್ಯಾಲಯ'ವಾಗಿ ಕಾರ್ಯಾರಂಭಿಸಿದೆ.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯವು 'ಕ್ರಿಸ್ತು ಜಯಂತಿ ಡೀಮ್ಡ್ ಟುಬಿ ವಿಶ್ವವಿದ್ಯಾಲಯಕ್ಕೆ' ಅನುಮೋದನೆ ನೀಡಿರುವುದರಿಂದ, ಅದರ ಐತಿಹಾಸಿಕ ಮೈಲಿಗಲ್ಲಿನ ಸ್ಮರಣೆಗಾಗಿ ಸೋಮವಾರ 'ಉದ್ಘಾಟನಾ ಸಮಾರಂಭ' ಆಯೋಜಿಸಲಾಗಿತ್ತು.

'ವಿಶ್ವವಿದ್ಯಾಲಯದ ಲೋಗೊ ಬಿಡುಗಡೆ ಮಾಡಿ ಮಾತನಾಡಿದ ದಿ ಹಿಂದೂ ಪತ್ರಿಕೆಯ ಮಾಜಿ ಸಂಪಾದಕ ಎನ್. ರಾಮ್, ಗುಣಮಟ್ಟದ ಶಿಕ್ಷಣ ನೀಡಲು ಮತ್ತು ಸಮಾಜದ ಎಲ್ಲಾ ವರ್ಗದ ಜನರಿಗೆ ಶಿಕ್ಷಣ ಲಭ್ಯವಾಗುವಂತೆ ಮಾಡಲು ವಿಶ್ವವಿದ್ಯಾಲಯ ಕೈಗೊಂಡಿರುವ ಕಾರ್ಯಗಳನ್ನು ಶ್ಲಾಘಿಸಿದರು.

ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಜೋಶಿ ಮ್ಯಾಥ್ಯೂ ರಚಿಸಿರುವ 'ಲುಮಿನೆಸೆನ್ಸ್' – ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಬೆಳ್ಳಿ ಪಯಣ ಎಂಬ ಕೃತಿಯನ್ನು ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಕುಲಪತಿ ಅಗಸ್ಟೀನ್ ಜಾರ್ಜ್ ಬಿಡುಗಡೆ ಮಾಡಿದರು.

ಕಾರ್ಮೆಲೈಟ್ಸ್ ಆಫ್ ಮೇರಿ ಇಮ್ಮಾಕ್ಯುಲೇಟ್ (ಸಿಎಂಐ) ಸಭೆಯ ಪ್ರಿಯರ್ ಜನರಲ್ ಥಾಮಸ್ ಚಾಥಂಪರಂಪಿಲ್ ಅವರು, ವಿದ್ಯಾರ್ಥಿಗಳಿಗೆ ಅಂತರ್ಗತ ಮತ್ತು ಸಮಗ್ರ ಜೀವನ ಶಿಕ್ಷಣವನ್ನು ಬೆಳೆಸುವಲ್ಲಿ ವಿಶ್ವವಿದ್ಯಾನಿಲಯದ ಪಾತ್ರದ ಬಗ್ಗೆ ಒತ್ತಿಹೇಳಿದರು.

ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಕುಲಾಧಿಪತಿ ಅಬ್ರಹಾಂ ವೆಟ್ಟಿಯಂಕಲ್ ಭಾಗವಹಿಸಿದ್ದರು. ಸಂಸ್ಥೆಯ ಎಲ್ಲಾ ಮಾಜಿ ಪ್ರಾಂಶುಪಾಲರು ಮತ್ತು ಸಿಎಂಐ ಸಭೆಯ ಮಿಷನರಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.

ನಗರದಲ್ಲಿ ಇಂದು

ವಿಜಯ ದಿನದ ಸ್ಮರಣೆ: ಅತಿಥಿಗಳು: ತೇಜಿಂದರ್ ಸಿಂಗ್, ಜೆ.ಕೆ. ಗೇರಾ, ವಿ.ಟಿ. ಮ್ಯಾಥ್ಯೂ, ಕೆ.ವಿ. ಶರತ್ ಚಂದ್ರ, ಎಂ.ಎಸ್. ಲೋಲಾಕ್ಷ, ಆಯೋಜನೆ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ರಾಷ್ಟ್ರೀಯ ಸೈನಿಕ ಸ್ಮಾರಕ ಮ್ಯಾನೇಜ್‌ಮೆಂಟ್ ಟ್ರಸ್ಟ್ ಸ್ಥಳ: ರಾಷ್ಟ್ರೀಯ ಸೈನಿಕ ಸ್ಮಾರಕ, ಬೆಳಿಗ್ಗೆ 9

'ಕುರುಕ್ಷೇತ್ರ' ನಾಟಕ ಪ್ರದರ್ಶನ: ಉದ್ಘಾಟನೆ: ಉದಯಚಂದ್ರ, ಅಧ್ಯಕ್ಷತೆ: ಪ್ರವೀಣ್ ರೆಡ್ಡಿ, ಅತಿಥಿಗಳು: ರವಿಶಂಕರ್, ಶ್ರೀಕಾಂತ್ ಮೂರ್ತಿ, ಆಯೋಜನೆ: ಸಿಂಧು ಭೈರವಿ ಕಲಾ ತಂಡ ಟ್ರಸ್ಟ್, ಸ್ಥಳ: ಹಿರಿಯ ನಾಗರಿಕ ಉದ್ಯಾನ, ಬಯಲು ರಂಗಮಂದಿರ, ಹೆಬ್ಬಾಳ, ಬೆಳಿಗ್ಗೆ 10

'ಡಾ.ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಆಧುನಿಕ ಚಿಂತನೆಗಳು' ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಬಿ. ರಮೇಶ್, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಎಸ್. ಮರಿಸ್ವಾಮಿ, ಸಾಬೀರ್ ಅಹಮದ್ ಮುಲ್ಲಾ, ಅಪ್ಪಗೆರೆ ತಿಮ್ಮರಾಜು, ಎಚ್. ವಿಶ್ವನಾಥ್, ಕೆ. ಷರೀಫಾ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಜಸ್ಟೀಸ್ ಗೋಪಾಲಗೌಡ ಅವರ 75 ವರ್ಷಗಳ ಸಂಭ್ರಮಾಚರಣೆ: ಉದ್ಘಾಟನೆ: ವಿಭು ಬಖ್ರು, ವಕೀಲ ವಾಹಿನಿಯ ವಿಶೇಷ ಸಂಚಿಕೆ ಬಿಡುಗಡೆ: ವಿವೇಕ್ ಎಸ್. ಸುಬ್ಬಾರೆಡ್ಡಿ, ಅಧ್ಯಕ್ಷತೆ: ಉದಯ್ ಹೊಳ್ಳ, ಆಯೋಜನೆ: ವಕೀಲರ ವಾಹಿನಿ, ಸ್ಥಳ: ಪ್ಯಾಟರ್ನ್ ಚೀಫ್ ಹಾಲ್, ಹೈಕೋರ್ಟ್‌ನ ಆವರಣ, ಸಂಜೆ 4.30



ವಿಭು ಬಖ್ರು

'ವಿ.ಸೀ. ಕಾವ್ಯ ಅವಲೋಕನ' ಉಪನ್ಯಾಸ: ಸಂಗಮೇಶ ಎಸ್. ಗಣಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಆರ್. ವೆಂಕಟಸುಬ್ಬಯ್ಯ ಅವರ 'ಇಳಿವಯಸ್ಸಿನ ಸಂಜೆ', ಬಿ.ಪಿ. ರಾಮಯ್ಯ ಅವರ 'ಮಾರ ಮತ್ತು ಇತರ ಕಥೆಗಳು' ಪುಸ್ತಕಗಳ ಬಿಡುಗಡೆ: ಡಾ. ವಸುಂಧರ ಭೂಪತಿ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಉಪಸ್ಥಿತಿ: ಮಲ್ಲೇಪುರಂ ಜಿ. ವೆಂಕಟೇಶ್, ಆರ್. ರಾಮಚಂದ್ರ, ಸತ್ಯಮಂಗಲ ಮಹದೇವ, ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30


'ತಿರುಪ್ಪಾವೈ' ಉಪನ್ಯಾಸ: ಕೆ.ವಿ. ಪದ್ಮಾವತಿ, ಆಯೋಜನೆ ಮತ್ತು ಸ್ಥಳ: ಸೀತಾರಾಮಾಂಜನೇಯ ಸ್ವಾಮಿ ದೇವಸ್ಥಾನ, ಕೆಂಪೇಗೌಡನಗರ, ಸಂಜೆ 5.30

'ನಮ್ಮೊಳಗೊಬ್ಬ ಗಾಂಧಿ' ನಾಟಕ ಪ್ರದರ್ಶನ: ರಚನೆ: ಡಿ.ಎಸ್. ಚೌಗಲೆ, ನಿರ್ದೇಶನ: ಚಿದಂಬರ ರಾವ್ ಜಂಬೆ, ಆಯೋಜನೆ: ರಂಗಾಯಣ ಶಿವಮೊಗ್ಗ, ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ, ಸ್ಥಳ: ಕಲಾಗ್ರಾಮ, ಸಂಜೆ 7

ಮಾರ್ಗಶೀರ್ಷೋತ್ಸವ–2025: ನಾಮಸಂಕೀರ್ತನೆ: ಉಡ್ಯೆಯಲೂರು ಕಲ್ಯಾಣರಾಮನ್ ಭಾಗವತಾರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,046
ಇಂದಿನ ಅಂತ್ಯ:	26,027
ದಿನದ ಕನಿಷ್ಠ:	25,904
	▼19

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹690
12 ಕ್ಕೆ	₹96
ಮೈಸೂರು: 100 ಕ್ಕೆ	₹690

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹422-733
ದ್ವಿತಳಿ (ಬಿ.ವಿ)	₹502-877

ಮುದ್ರೆಮನೆ ಕಾಫಿ

ಎಪಿ	₹28600
ಎಸಿ	₹15680
ಆರ್‌ಪಿ	₹18900
ಆರ್‌ಸಿ	₹10325

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1490 (1495)
ಪಾಮೋಲಿನ್	₹1250 (1245)

ಆಂಧ್ರದಲ್ಲಿ ಪೆಟ್ರೋಲ್, ಡೀಸೆಲ್ ದುಬಾರಿ, ಅಂಡಮಾನ್‌ನಲ್ಲಿ ಅಗ್ಗ



ನವದೆಹಲಿ (ಪಿಟಿಐ): ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಆಂಧ್ರಪ್ರದೇಶದಲ್ಲಿ ಅತಿ ಹೆಚ್ಚು. ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಅತಿ ಕಡಿಮೆ. ಕೇಂದ್ರ ಸರ್ಕಾರ ಸೋಮವಾರ ರಾಜ್ಯಸಭೆಗೆ ನೀಡಿರುವ ಉತ್ತರವೊಂದರಲ್ಲಿ ಈ ಮಾಹಿತಿ ಇದೆ.

ಆಂಧ್ರಪ್ರದೇಶವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅತಿಹೆಚ್ಚು ಪ್ರಮಾಣದಲ್ಲಿ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ವಿಧಿಸುತ್ತದೆ. ಇದು ಅಲ್ಲಿನ ದುಬಾರಿ ಬೆಲೆಗೆ ಕಾರಣ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಹೇಳಿದ್ದಾರೆ.

ಆಂಧ್ರಪ್ರದೇಶದ ರಾಜಧಾನಿ ಅಮರಾವತಿಯಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹109.74, ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಅದು ₹82.46 ಎಂದು ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್‌ನ ಅಂತಿಮ ಮಾರಾಟ ಬೆಲೆಯು ಕೇಂದ್ರ ಸರ್ಕಾರ ನಿಗದಿಪಡಿಸಿದ ಎಕ್ಸೈಸ್ ಸುಂಕ ಹಾಗೂ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶದ ಸರ್ಕಾರ ನಿಗದಿಮಾಡಿದ ವ್ಯಾಟ್ ಪ್ರಮಾಣವನ್ನು ಒಳಗೊಂಡಿರುತ್ತದೆ. ಹೀಗಾಗಿ, ಸರಕು ಸಾಗಣೆ ಮತ್ತು ಸ್ಥಳೀಯ ತೆರಿಗೆಯಿಂದಾಗಿ ರಾಜ್ಯದಿಂದ ರಾಜ್ಯಕ್ಕೆ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ವ್ಯತ್ಯಾಸವಿರುತ್ತದೆ ಎಂದು ಹೇಳಿದ್ದಾರೆ.

ಆಂಧ್ರಪ್ರದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹29.06 ವ್ಯಾಟ್ ವಿಧಿಸಲಾಗುತ್ತದೆ. ಇದು ದೇಶದಲ್ಲಿ ಅತ್ಯಧಿಕ. ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಪೆಟ್ರೋಲ್ ಮೇಲಿನ ವ್ಯಾಟ್ ಕೇವಲ ₹0.82 ಮಾತ್ರ ಇದೆ. ಪ್ರತಿ ಲೀಟರ್ ಡೀಸೆಲ್ ಬೆಲೆಯು ಆಂಧ್ರಪ್ರದೇಶದಲ್ಲಿ ₹97.57, ವ್ಯಾಟ್ ₹21.56 ಇದೆ. ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಡೀಸೆಲ್ ಬೆಲೆ ₹78.05, ವ್ಯಾಟ್ ₹0.77ರಷ್ಟು ಇದೆ.

‘ಸಕ್ಕರೆ ಮಾರಾಟ ದರ ಹೆಚ್ಚಿಸಿ’

ಕೇಂದ್ರ ಸರ್ಕಾರಕ್ಕೆ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮನವಿ



ನವದೆಹಲಿ (ಪಿಟಿಐ): ಪ್ರಸಕ್ತ ಹಂಗಾಮಿನಲ್ಲಿ ದೇಶದಲ್ಲಿ ಸಕ್ಕರೆ ಉತ್ಪಾದನೆಯು ಶೇಕಡ 28.33ರಷ್ಟು ಹೆಚ್ಚಳ ಕಂಡು 77.90 ಲಕ್ಷ ಟನ್‌ಗೆ ತಲುಪಿರುವ ಕಾರಣದಿಂದ ಸಕ್ಕರೆಯ ಕನಿಷ್ಠ ಮಾರಾಟ ದರವನ್ನು ಹೆಚ್ಚು ಮಾಡಬೇಕು ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿವೆ.

ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಕೆ.ಜಿ.ಗೆ ₹41ಕ್ಕೆ ಹೆಚ್ಚಿಸಲು ಸರ್ಕಾರ ಒಪ್ಪಿಗೆ ನೀಡಬೇಕು. ಹೆಚ್ಚುವರಿಯಾಗಿ 5 ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ಎಥೆನಾಲ್ ಉತ್ಪಾದನೆಗೆ ಬಳಸಲು ಅವಕಾಶ ನೀಡಬೇಕು ಎಂದು ಅವು ಕೋರಿವೆ.

ಮಾರುಕಟ್ಟೆಯಲ್ಲಿ ಸಕ್ಕರೆ ದರ ಇಳಿಕೆ ಹಾಗೂ ವೆಚ್ಚಗಳ ಹೆಚ್ಚಳವು ರೈತರಿಗೆ ನೀಡಬೇಕಿರುವ ಮೊತ್ತದ ಮೇಲೆ ಪರಿಣಾಮ ಉಂಟುಮಾಡುತ್ತಿವೆ ಎಂದು ಅವು ಎಚ್ಚರಿಸಿವೆ.

ಪ್ರಸಕ್ತ ಹಂಗಾಮು ಆರಂಭವಾದ ನಂತರದಲ್ಲಿ ಸಕ್ಕರೆ ಕಾರ್ಖಾನೆಗಳು ಸಗಟು ವಹಿವಾಟುದಾರರಿಗೆ ಮಾರಾಟ ಮಾಡುವ ಸಕ್ಕರೆಯ ಬೆಲೆಯು ಪ್ರತಿ ಟನ್‌ಗೆ ₹2,300ರಷ್ಟು ಕುಸಿದಿದೆ. ಈಗ ಅದು ಟನ್‌ಗೆ ₹37,700ರಷ್ಟು ಇದೆ ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟವು (ಎನ್‌ಎಫ್‌ಸಿಎಸ್‌ಎಫ್) ಹೇಳಿದೆ.

ಡಿಸೆಂಬರ್ 15ರವರೆಗಿನ ದತ್ತಾಂಶದ ಪ್ರಕಾರ ದೇಶದ ಒಟ್ಟು 479 ಸಕ್ಕರೆ ಕಾರ್ಖಾನೆಗಳು ಒಟ್ಟು 77.90 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಗಿದ್ದ 60.70 ಲಕ್ಷ ಟನ್ ಸಕ್ಕರೆ ಉತ್ಪಾದನೆಗಿಂತ ಹೆಚ್ಚು ಎಂದು ಎನ್‌ಎಫ್‌ಸಿಎಸ್‌ಎಫ್ ನೀಡಿರುವ ದತ್ತಾಂಶಗಳು ಹೇಳುತ್ತಿವೆ.

ಕಬ್ಬು ಅರೆಯುವಿಕೆಯು ಈ ಹಂಗಾಮಿನಲ್ಲಿ ಶೇ 25.6ರಷ್ಟು ಹೆಚ್ಚಾಗಿ 900.75 ಲಕ್ಷ ಟನ್‌ಗೆ ಹೆಚ್ಚಾಗಿದೆ ಎಂದು ಒಕ್ಕೂಟವು ಹೇಳಿಕೆಯಲ್ಲಿ ತಿಳಿಸಿದೆ.

ದೇಶದಲ್ಲಿ ಅತಿಹೆಚ್ಚು ಸಕ್ಕರೆ ಉತ್ಪಾದಿಸುವ ರಾಜ್ಯವಾದ ಮಹಾರಾಷ್ಟ್ರದಲ್ಲಿ ಉತ್ಪಾದನೆಯು ದುಪ್ಪಟ್ಟಾಗಿದೆ. ಕರ್ನಾಟಕದಲ್ಲಿ ಹಿಂದಿನ ವರ್ಷದ ಇದೇ ಅವಧಿಯಲ್ಲಿ ಉತ್ಪಾದನೆಯು 13.50 ಲಕ್ಷ ಟನ್ ಇದ್ದಿದ್ದು ಈ ಬಾರಿ 15.50 ಲಕ್ಷ ಟನ್ ಆಗಿದೆ.

ಪ್ರಸಕ್ತ ಹಂಗಾಮಿನಲ್ಲಿ ಒಟ್ಟು 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರವು ಅನುಮತಿ ನೀಡಿದೆ. ಆದರೆ ಈ ಕ್ರಮವೊಂದೇ ಸಕ್ಕರೆ ಕಾರ್ಖಾನೆಗಳ ನಗದು ಬಿಕ್ಕಟ್ಟನ್ನು ಪರಿಹರಿಸುವುದಿಲ್ಲ ಎಂದು ಹೇಳಿದೆ.

ಮುಖ್ಯಾಂಶಗಳು

- ಸಕ್ಕರೆ ಮಾರಾಟ ದರವನ್ನು ಕೆ.ಜಿಗೆ ₹41ಕ್ಕೆ ಹೆಚ್ಚಿಸುವಂತೆ ಮನವಿ
- ಪ್ರಸಕ್ತ ಸಕ್ಕರೆ ಹಂಗಾಮಿನಲ್ಲಿ 77.90 ಲಕ್ಷ ಟನ್ ಸಕ್ಕರೆ ಉತ್ಪಾದನೆ
- ದೇಶದಲ್ಲಿ 479 ಸಕ್ಕರೆ ಕಾರ್ಖಾನೆಗಳ ಕಾರ್ಯಾಚರಣೆ

ಸುದ್ದಿ 2 ನಿಮಿಷ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಸಗಟು ಹಣದುಬ್ಬರ ದರವು (ಡಬ್ಲ್ಯುಪಿಐ) ನವೆಂಬರ್ ತಿಂಗಳಿನಲ್ಲಿ ಶೇ (–)0.32ರಷ್ಟಕ್ಕೆ ಏರಿಕೆ ಕಂಡಿದೆ ಎಂದು ಕೇಂದ್ರ ಕೈಗಾರಿಕಾ ಸಚಿವಾಲಯ ಸೋಮವಾರ ತಿಳಿಸಿದೆ.

ದ್ವಿದಳ ಧಾನ್ಯಗಳು ಮತ್ತು ತರಕಾರಿಗಳ ಬೆಲೆಯಲ್ಲಿನ ಏರಿಕೆಯು ಸಗಟು ಹಣದುಬ್ಬರ ಹೆಚ್ಚಳಕ್ಕೆ ಕಾರಣ ಎಂದು ಅದು ತಿಳಿಸಿದೆ. ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರ ಶೇ (–)1.21ರಷ್ಟಿತ್ತು, ಕಳೆದ ವರ್ಷದ ನವೆಂಬರ್‌ನಲ್ಲಿ ಇದು ಶೇ 2.16ರಷ್ಟಿತ್ತು.

‘ಆಹಾರ ಪದಾರ್ಥಗಳು, ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ, ನೈಸರ್ಗಿಕ ಅನಿಲ, ವಿದ್ಯುತ್, ಮೂಲ ಲೋಹಗಳ ಉತ್ಪಾದನಾ ವೆಚ್ಚದಲ್ಲಿನ ಇಳಿಕೆಯಿಂದ ಸಗಟು ಹಣದುಬ್ಬರವು ನವೆಂಬರ್‌ನಲ್ಲಿ ಋಣಾತ್ಮಕ ದರದಲ್ಲಿದೆ’ ಎಂದು ತಿಳಿಸಿದೆ.

ಅಕ್ಟೋಬರ್‌ನಲ್ಲಿ ಆಹಾರ ಪದಾರ್ಥಗಳ ಬೆಲೆ ಇಳಿಕೆಯು ಶೇ 8.31ರಷ್ಟಿತ್ತು. ನವೆಂಬರ್‌ನಲ್ಲಿ ಶೇ 4.16ರಷ್ಟಿದೆ. ತರಕಾರಿಗಳ ಸಗಟು ಬೆಲೆ ಇಳಿಕೆಯು ಶೇ 20.23ರಷ್ಟಾಗಿದೆ. ಇದು ಅಕ್ಟೋಬರ್‌ನಲ್ಲಿ ಶೇ 34.97ರಷ್ಟಿತ್ತು.

ದ್ವಿದಳ ಧಾನ್ಯಗಳ ಬೆಲೆ ಇಳಿಕೆಯು ಶೇ 15.21ರಷ್ಟು, ಆಲೂಗೆಡ್ಡೆ ಮತ್ತು ಈರುಳ್ಳಿ ಸಗಟು ದರ ಇಳಿಕೆವು ಕ್ರಮವಾಗಿ ಶೇ 36.14ರಷ್ಟು ಮತ್ತು ಶೇ 64.70ರಷ್ಟು ಆಗಿದೆ.

ತಯಾರಿಸಿದ ಸರಕುಗಳ ಹಣದುಬ್ಬರ ಶೇ 1.54ರಿಂದ ಶೇ 1.33ಕ್ಕೆ ಇಳಿದಿದೆ. ಇಂಧನ ಮತ್ತು ವಿದ್ಯುತ್ ಸಗಟು ದರ ಇಳಿಕೆಯು ಶೇ 2.55ರಿಂದ ಶೇ 2.27ಕ್ಕೆ ಬಂದಿದೆ ಎಂದು ತಿಳಿಸಿದೆ.



ನವೆಂಬರ್ ತಿಂಗಳ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.71ರಷ್ಟು ಆಗಿದೆ.

ವ್ಯಾಪಾರ ಮಾತುಕತೆಯಲ್ಲಿ ಪ್ರಗತಿ

ನವದೆಹಲಿ (ಪಿಟಿಐ): ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಚೌಕಟ್ಟು ಹೇಗಿರಬೇಕು ಎಂಬುದನ್ನು ಅಂತಿಮಗೊಳಿಸುವ ಹಂತವನ್ನು ಅಮೆರಿಕ ಮತ್ತು ಭಾರತ ತಲುಪಿವೆ ಎಂದು ಕೇಂದ್ರ ಸರ್ಕಾರದ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಸೋಮವಾರ ತಿಳಿಸಿದ್ದಾರೆ.

ಅಮೆರಿಕದ ಉಪ ವ್ಯಾಪಾರ ಪ್ರತಿನಿಧಿ ರಿಕ್ ಸ್ವಿಟ್ಜರ್ ಅವರು ವ್ಯಾಪಾರ ಮಾತುಕತೆಗಾಗಿ ಕಳೆದ ವಾರ ಭಾರತಕ್ಕೆ ಬಂದಿದ್ದರು. ‘ವ್ಯಾಪಾರ ಒಪ್ಪಂದದ ಚೌಕಟ್ಟಿನ ವಿಚಾರವಾಗಿ ನಾವು ಬಹಳ ಮುಂದೆ ಬಂದಿದ್ದೇವೆ. ಅದು ಅಲ್ಪಾವಧಿಯಲ್ಲೇ ಸಾಧ್ಯವಾಗಬಹುದು. ಆದರೆ ಅದಕ್ಕೆ ಸಮಯಮಿತಿ ವಿಧಿಸಲು ನಾನು ಬಯಸುವುದಿಲ್ಲ’ ಎಂದು ಅಗರ್ವಾಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮಾತುಕತೆ ಪೂರ್ಣಗೊಂಡು, ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದವೊಂದು ಜಾರಿಗೆ ಬರುವುದನ್ನು ಭಾರತದ ರಫ್ತುದಾರರು ಕಾತರದಿಂದ ಕಾಯುತ್ತಿದ್ದಾರೆ. ಅಮೆರಿಕವು ಭಾರತದ ಸರಕುಗಳ ಮೇಲೆ ಒಟ್ಟು ಶೇ 50ರಷ್ಟು ಸುಂಕ ವಿಧಿಸಿರುವುದರಿಂದಾಗಿ ರಫ್ತು ವಲಯಕ್ಕೆ ತೊಂದರೆ ಆಗಿದೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	40099-47009
ಚಿಪ್ಪು	25869-34899
ಕೋಕ	12569-32019
ಫ್ಯಾಕ್ಟರಿ	6569-23629
ಹೊಸಚಾಲಿ	33569-38533
ಪುತ್ತೂರು	
ಕೋಕ	20000-35000
ಹೊಸತು	26000-41500
ಸಾಗರ	
ಬಿಳಿಗೋಟು	18299-35555
ಚಾಲಿ	33500-42509
ಕೋಕ	12799-32989
ಕೆಂಪುಗೋಟು	27129-38699
ರಾಶಿ	44270-60570
ಸಿಪ್ಪೆಗೋಟು	8599-23601
ಶಿರಸಿ	
ಬೆಟ್ಟೆ	38009-51269
ಬಿಳಿಗೋಟು	28199-38189
ಚಾಲಿ	41099-48899
ಕೆಂಪುಗೋಟು	22222-35099
ರಾಶಿ	49979-58061
ಯಲ್ಲಾಪುರ	
ಆಪಿ	60601-79421
ಬಿಳಿಗೋಟು	13612-34773
ಚಾಲಿ	32129-47489
ಕೋಕ	12969-26869
ಕೆಂಪುಗೋಟು	22601-34913
ರಾಶಿ	45129-62421
ತಟ್ಟಿಬೆಟ್ಟೆ	40669-55659

ಪುಟಿದೆದ್ದ ರಫ್ತು ವಹಿವಾಟು



ನವದೆಹಲಿ (ಪಿಟಿಐ): ನವೆಂಬರ್‌ನಲ್ಲಿ ದೇಶದ ರಫ್ತು ಪ್ರಮಾಣವು ಪುಟಿದೆದ್ದಿದ್ದು, ಶೇಕಡ 19.37ರಷ್ಟು ಏರಿಕೆ ಕಂಡಿದೆ. ಇದು ಆರು ತಿಂಗಳ ಗರಿಷ್ಠ ಮಟ್ಟ. ನವೆಂಬರ್‌ನಲ್ಲಿ ಒಟ್ಟು ₹3.45 ಲಕ್ಷ ಕೋಟಿಯಷ್ಟು ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ.

ನವೆಂಬರ್‌ನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಎಂಜಿನಿಯರಿಂಗ್ ಉತ್ಪನ್ನಗಳು ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗಿವೆ.

ನವೆಂಬರ್‌ನಲ್ಲಿ ಆಮದು ಪ್ರಮಾಣವು ಶೇ 1.88ರಷ್ಟು ಕಡಿಮೆ ಆಗಿದ್ದು ₹5.68 ಲಕ್ಷ ಕೋಟಿಗೆ ತಲುಪಿದೆ. ಚಿನ್ನ, ಕಚ್ಚಾ ತೈಲ, ಕಲ್ಲಿದ್ದಲು ಮತ್ತು ಕಲ್ಲಿದ್ದಲ ಕಿಟ್ಟದ ಆಮದು ಕಡಿಮೆ ಆಗಿದ್ದುದು ಇದಕ್ಕೆ ಕಾರಣ.

ನವೆಂಬರ್‌ನಲ್ಲಿ ರಫ್ತು ಮಾಡಲಾಗಿರುವ ಸರಕುಗಳ ಒಟ್ಟು ಮೌಲ್ಯವು ಮೇ ತಿಂಗಳ ನಂತರದ ಗರಿಷ್ಠವಾಗಿದೆ. ಚಿನ್ನದ ಆಮದು ನವೆಂಬರ್‌ನಲ್ಲಿ ಶೇ 59.15ರಷ್ಟು ಕಡಿಮೆ ಆಗಿದೆ. ಕಚ್ಚಾ ತೈಲದ ಆಮದು ಶೇ 11.27ರಷ್ಟು ತಗ್ಗಿದೆ.

ಆಮದು ಕಡಿಮೆ ಆಗಿರುವ ಕಾರಣದಿಂದಾಗಿ ದೇಶದ ವ್ಯಾಪಾರ ಕೊರತೆ ಅಂತರವು ಕೂಡ ನವೆಂಬರ್‌ನಲ್ಲಿ ಕಡಿಮೆ ಆಗಿದೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ್ದರೂ ರಫ್ತು ಪ್ರಮಾಣ ಹೆಚ್ಚಾಗಿದೆ. ‘ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್, ರಾಸಾಯನಿಕಗಳು, ಮುತ್ತು ಮತ್ತು ಆಭರಣಗಳ ರಫ್ತು ಹೆಚ್ಚಾಗಿದ್ದುದು ಒಟ್ಟು ರಫ್ತಿನ ಪ್ರಮಾಣ ಏರಿಕೆ ಕಾಣಲು ನೆರವಾಗಿದೆ’ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದ್ದಾರೆ.

ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ಭಾರತದ ಸರಕುಗಳು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗಿರುವ ದೇಶಗಳ ಸಾಲಿನಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿ ಇದೆ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್.ಸಿ. ರಲ್ಹಾನ್ ಹೇಳಿದ್ದಾರೆ.

ಚಿನ್ನದ ದರ ₹4 ಸಾವಿರ ಜಿಗಿತ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರವು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹4 ಸಾವಿರದಷ್ಟು ಜಿಗಿತವಾಗಿ, ₹1,37,600ರಂತೆ ಮಾರಾಟವಾಗಿದೆ.

ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಇದುವರೆಗೆ ಚಿನ್ನದ ದರ ₹58,650ರಷ್ಟು (ಶೇ 74.3ರಷ್ಟು) ಹೆಚ್ಚಳವಾಗಿದೆ. ಕಳೆದ ವರ್ಷದ ಡಿಸೆಂಬರ್ 31ರಂದು 10 ಗ್ರಾಂ ಚಿನ್ನದ ದರವು ₹78,950 ಇತ್ತು.

ಸೋಮವಾರ ಬೆಳ್ಳಿ ದರವು ಯಥಾಸ್ಥಿತಿಯಲ್ಲಿತ್ತು. ಕೆ.ಜಿ ಬೆಳ್ಳಿ ಬೆಲೆ ₹1,99,500 ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಳವಾಗಿದೆ. ಹೀಗಾಗಿ, ದೇಶದಲ್ಲೂ ಹಳದಿ ಲೋಹದ ಬೆಲೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ) 15-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1435)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,32,600 (1,31,450)
ಬೆಳ್ಳಿ ಕೆ.ಜಿಗೆ	1,93,400 (1,88,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹2000-3500
ಮಧ್ಯಮ	₹1000-2500
ಸಣ್ಣ	₹500-1000

ನಿರಾಶ್ರಿತರ ಮೇಲೆ ಥಾಯ್ಲೆಂಡ್ ಬಾಂಬ್: ಕಾಂಬೋಡಿಯಾ

ಮೊಂಗ್ಕೋಲ್ ಬೋರೆ (ಕಾಂಬೋಡಿಯಾ): ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವೆ ನಡೆಯುತ್ತಿರುವ ಭಾರಿ ಯುದ್ಧ ಸೋಮವಾರ ಎರಡನೇ ವಾರಕ್ಕೆ ಪ್ರವೇಶಿಸಿದೆ. ಗಡಿಯ ಅಪಾಯಕಾರಿ ಪ್ರದೇಶದಿಂದ ಸ್ಥಳಾಂತರಗೊಂಡ ಜನರು ಆಶ್ರಯ ಪಡೆದ ತಾಣಗಳ ಮೇಲೆಯೂ ಥಾಯ್ಲೆಂಡ್ ತೀವ್ರ ಬಾಂಬ್ ದಾಳಿ ನಡೆಸುತ್ತಿದೆ ಎಂದು ಕಾಂಬೋಡಿಯಾ ಹೇಳಿದೆ.

‘ಒಡ್ಡರ್ ಮೀಂಚೆ ಪ್ರಾಂತ್ಯದ ಚೋಂಗ್ ಕಲ್ ಜಿಲ್ಲೆ ಮತ್ತು ಸೀಯೆಮ್ ರೀಪ್ ಪ್ರಾಂತ್ಯದ ಸ್ರೇಯಿ ಸ್ನಾಮ್ ಜಿಲ್ಲೆಯ ಗಡಿ ಪ್ರದೇಶಗಳಿಂದ ಸ್ಥಳಾಂತರಗೊಂಡ ಜನರ ನಿರಾಶ್ರಿತ ಶಿಬಿರಗಳ ಬಳಿ ಸೋಮವಾರ ಬೆಳಿಗ್ಗೆ 10 ಗಂಟೆಯ ನಂತರ ಥಾಯ್‌ನ ಎಫ್–16 ಯುದ್ಧ-ವಿಮಾನಗಳು ಎರಡು ಬಾಂಬ್‌ಗಳನ್ನು ಹಾಕಿವೆ’ ಎಂದು ಕಾಂಬೋಡಿಯಾದ ರಕ್ಷಣಾ ಮತ್ತು ಮಾಹಿತಿ ಸಚಿವಾಲಯ ಮಾಹಿತಿ ನೀಡಿದೆ.

ಕಾಂಬೋಡಿಯಾ ಪ್ರದೇಶದ ಒಳಗೆ 70 ಕಿ.ಮೀ.ಗಿಂತ ಹೆಚ್ಚು ದೂರದಲ್ಲಿರುವ ಸ್ರೇಯಿ ಸ್ನಾಮ್‌ನಲ್ಲಿ ನಡೆದ ಬಾಂಬ್ ದಾಳಿಯು ಸೇತುವೆಯನ್ನು ಗುರಿಯಾಗಿ-ಸಿಕೊಂಡಿತ್ತು ಎಂದು ಕಾಂಬೋಡಿಯಾ ಅಧಿಕಾರಿಗಳು ತಿಳಿಸಿದ್ದಾರೆ. ಆದಾಗ್ಯೂ, ಈ ಬಗ್ಗೆ ಥಾಯ್ ಅಧಿಕಾರಿಗಳು ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಜಿಎಸ್‌ಟಿ ಪರಿಷ್ಕರಣೆ, ಸಾಲಕ್ಕೆ ಹೆಚ್ಚಿದ ಬೇಡಿಕೆ: ಸಿಬಿಲ್

ಮುಂಬೈ (ಪಿಟಿಐ): ಜಿಎಸ್‌ಟಿ ದರ ಪರಿಷ್ಕರಣೆಯ ನಂತರದಲ್ಲಿ ದೇಶದಲ್ಲಿ ಜನರಿಂದ ಸಾಲಕ್ಕೆ ಕೋರಿಕೆ ಬರುತ್ತಿರುವುದು ಹೆಚ್ಚಾಗಿದೆ ಎಂದು ಟ್ರಾನ್ಸ್‌ಯೂನಿಯನ್ ಸಿಬಿಲ್ ಕಂಪನಿ ಹೇಳಿದೆ. ಯುವ ವರ್ಗದವರು ಸಾಲ ಪಡೆಯುವಲ್ಲಿ ಹೆಚ್ಚಿನ ಮಟ್ಟದ ಎಚ್ಚರಿಕೆ ತೋರುತ್ತಿದ್ದಾರೆ ಎಂದು ಅದು ಹೇಳಿದೆ.

ಆಸ್ತಿಯನ್ನು ಅಡಮಾನವನ್ನಾಗಿ ಇರಿಸಿ ಪಡೆದ ಸಣ್ಣ ಸಾಲ ಹಾಗೂ ದ್ವಿಚಕ್ರ ವಾಹನ ಸಾಲಗಳ ಮರುಪಾವತಿ ಆಗದೆ ಇರುವ ಪ್ರಮಾಣವು ಸೆಪ್ಟೆಂಬರ್ ನಂತರದಲ್ಲಿ ಹೆಚ್ಚಾಗಿದೆ ಎಂದು ತಿಳಿಸಿದೆ.

‘ಜನರು ವಾಹನ ಖರೀದಿಸಲು ಹಾಗೂ ಗ್ರಾಹಕ ಬಳಕೆ ಉತ್ಪನ್ನಗಳನ್ನು ಖರೀದಿಸಲು ಸಾಲಕ್ಕೆ ಕೋರಿಕೆ ಸಲ್ಲಿಸುತ್ತಿರುವುದು ಜಿಎಸ್‌ಟಿ ದರ ಪರಿಷ್ಕರಣೆಯ ನಂತರದಲ್ಲಿ ಹೆಚ್ಚಾಗಿದೆ’ ಎಂದು ಕಂಪನಿಯ ವರದಿಯು ಹೇಳಿದೆ.

ಸಾಲಕ್ಕೆ ಕೋರಿಕೆ ಸಲ್ಲಿಸುತ್ತಿರುವವರ ಪೈಕಿ 26–35 ವರ್ಷ ವಯಸ್ಸಿನ ನಡುವಿನವರ ಪ್ರಮಾಣವು ಹಿಂದಿನ ಎರಡು ಹಣಕಾಸು ವರ್ಷಗಳ ಎರಡನೆಯ ತ್ರೈಮಾಸಿಕದಲ್ಲಿ ಶೇ 40ರಷ್ಟು ಇದ್ದಿದ್ದು, ಈ ಬಾರಿ ಶೇ 38ಕ್ಕೆ ಇಳಿಕೆಯಾಗಿದೆ.

25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಕೂಡ ಸಾಲಕ್ಕೆ ಕೋರಿಕೆ ಸಲ್ಲಿಸುವುದು ಕಡಿಮೆ ಆಗಿದೆ. ಹಿಂದಿನ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ಈ ವರ್ಗದವರಿಂದ ಬಂದ ಕೋರಿಕೆ ಪ್ರಮಾಣ ಶೇ 20ರಷ್ಟು ಇತ್ತು. ಈ ಬಾರಿ ಅದು ಶೇ 19ಕ್ಕೆ ಇಳಿದಿದೆ.

ಆದರೆ 36–55 ವರ್ಷ ವಯಸ್ಸಿನವರು ಸಾಲಕ್ಕೆ ಕೋರಿಕೆ ಸಲ್ಲಿಸುವ ಪ್ರಮಾಣವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಹೆಚ್ಚಳ ಕಂಡಿದೆ.

‘ಜಿಎಸ್‌ಟಿ ದರ ಪರಿಷ್ಕರಣೆಯು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಬಹಳ ಅಗತ್ಯವಾಗಿದ್ದ ಕ್ರಮ. ಈ ಕ್ರಮದ ಧನಾತ್ಮಕ ಪರಿಣಾಮಗಳು ಗ್ರಾಹಕರ ವಿಶ್ವಾಸದಲ್ಲಿ ಕಂಡುಬಂದಿರುವ ಸುಧಾರಣೆ ಹಾಗೂ ಸಾಲಕ್ಕೆ ಬಂದಿರುವ ಹೆಚ್ಚಿನ ಬೇಡಿಕೆಯ ರೂಪದಲ್ಲಿ ಕಾಣಿಸುತ್ತಿವೆ’ ಎಂದು ಟ್ರಾನ್ಸ್‌ಯೂನಿಯನ್ ಸಿಬಿಲ್ ಕಂಪನಿಯ ಸಿಇಒ ಭವೇಶ್ ಜೈನ್ ಹೇಳಿದ್ದಾರೆ.



ಜೋರ್ಡನ್‌ನ ಅಮ್ಮಾನ್‌ಗೆ ಬಂದಿಳಿದ ಪ್ರಧಾನಿ ಮೋದಿಯನ್ನು ಜೋರ್ಡನ್ ಪ್ರಧಾನಿ ಜಾಫರ್ ಹಸನ್ ಸಾಂಪ್ರದಾಯಿಕವಾಗಿ ಸ್ವಾಗತಿಸಿದರು –ಪಿಟಿಐ ಚಿತ್ರ

ಜೋರ್ಡನ್‌ಗೆ ಬಂದಿಳಿದ ಮೋದಿ

ಅಮ್ಮಾನ್ (ಪಿಟಿಐ): ಮೂರು ದೇಶಗಳ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, ಮೊದಲ ಹಂತದಲ್ಲಿ ಜೋರ್ಡನ್‌ನ ಅಮ್ಮಾನ್‌ಗೆ ಸೋಮವಾರ ಬಂದಿಳಿದರು. ಈ ಪ್ರವಾಸವು ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ಹೆಚ್ಚಿಸುತ್ತದೆ ಎಂದು ಅವರು ಹೇಳಿದ್ದಾರೆ.

ಉಭಯ ದೇಶಗಳ ನಡುವಿನ ನಿಕಟ ಸಂಬಂಧದ ಸಂಕೇತವಾಗಿ ವಿಮಾನ ನಿಲ್ದಾಣದಲ್ಲಿ ಜೋರ್ಡನ್ ಪ್ರಧಾನಿ ಜಾಫರ್ ಹಸನ್ ಅವರು ಆತ್ಮೀಯವಾಗಿ ಬರಮಾಡಿಕೊಂಡು, ಸಾಂಪ್ರದಾಯಿಕ ಸ್ವಾಗತ ನೀಡಿದರು.

ಎರಡೂ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧದ 75 ವರ್ಷಾಚರಣೆಯ ಸಂದರ್ಭ ಇದಾಗಿದೆ.

ಖರ್ಗೆ, ರಾಹುಲ್ ಕ್ಷಮೆಗೆ ಪಟ್ಟು

ಒಂದನೇ ಪುಟದಿಂದ...

ಅವರ ಮಾತಿಗೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

‘ಪ್ರಧಾನಿ ಅವರಿಗೆ ಬೆದರಿಕೆ ಹಾಕಿರುವುದಕ್ಕೆ ಕಾಂಗ್ರೆಸ್ ಕ್ಷಮೆ-ಯಾಚಿಸಬೇಕು’ ಎಂದು ರಿಜಿಜು ಒತ್ತಾಯಿಸಿದರು. ಈ ವೇಳೆ ಗದ್ದಲ ಉಂಟಾದ ಕಾರಣ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಿದರು. ಕಲಾಪ ಮತ್ತೆ ಶುರುವಾದಾಗ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಪ್ರತಿಭಟನೆ ನಡೆಸಿ, ಗೃಹ ಸಚಿವ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿದರು.

ಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿಯ ದಿಲೀಪ್ ಸೈಕಿಯಾ, ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡುವುದಾಗಿ ವಿಪಕ್ಷಗಳ ಸದಸ್ಯರಿಗೆ ಭರವಸೆ ನೀಡಿದರು. ಆದರೆ ಗದ್ದಲ ಮುಂದುವರಿದ ಕಾರಣ ಕಲಾಪವನ್ನು 2ಕ್ಕೆ ಮುಂದೂಡಲಾಯಿತು. ಮಧ್ಯಾಹ್ನದ ಬಳಿಕ ಕಲಾಪ ಸುಗಮವಾಗಿ ನಡೆಯಿತು.

> **ಕಾಂಗ್ರೆಸ್‌ನಲ್ಲಿ ಮಾನವೀಯತೆ ಉಳಿದಿದ್ದರೆ ಮತ್ತು ಅದರ ನಾಯಕರು ದೇಶದ ಜನರನ್ನು ಗೌರವಿಸುವುದಾದರೆ, ತಕ್ಷಣವೇ ಸಂಸತ್ತಿನ ಉಭಯ ಸದನಗಳಲ್ಲಿ ಕ್ಷಮೆಯಾಚಿಸಬೇಕು**
> **ಕಿರಣ್ ರಿಜಿಜು,** ಸಂಸದೀಯ ವ್ಯವಹಾರಗಳ ಸಚಿವ

‘ಕಾಂಗ್ರೆಸ್‌ನ ಮನಃಸ್ಥಿತಿ ತೋರಿಸುತ್ತದೆ’

ರಾಜ್ಯಸಭೆಯಲ್ಲಿ ಸದನದ ನಾಯಕ ಜೆ.ಪಿ. ನಡ್ಡಾ ಅವರು ಬೆಳಿಗ್ಗೆ 11ಕ್ಕೆ ಈ ವಿಷಯ ಪ್ರಸ್ತಾಪಿಸಿದಾಗಲೂ ಗದ್ದಲ ಉಂಟಾಯಿತು. ‘ಪ್ರಧಾನಿ ಅವರಿಗೆ ಬೆದರಿಕೆ ಒಡ್ಡಿರುವುದು ಕಾಂಗ್ರೆಸ್‌ನ ಚಿಂತನೆ ಮತ್ತು ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ’ ಎಂದು ನಡ್ಡಾ ಟೀಕಿಸಿದರು.

‘ಪ್ರಧಾನಿ ವಿರುದ್ಧ ಇಂತಹ ಘೋಷಣೆಗಳನ್ನು ಕೂಗುವುದು ಮತ್ತು ಅವರ ಸಾವನ್ನು ಬಯಸುವುದನ್ನು ಒಪ್ಪಲಾಗದು’ ಎಂದರು. ಸದನದಲ್ಲಿ ಹಾಜರಿದ್ದ ಮಲ್ಲಿಕಾರ್ಜುನ ಖರ್ಗೆ ಮತ್ತು ಸೋನಿಯಾ ಗಾಂಧಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಲಾಯಿತು. ಆ ಬಳಿಕ ಕಲಾಪ ಯಾವುದೇ ಅಡ್ಡಿಯಿಲ್ಲದೆ ನಡೆಯಿತು.

‘ದುರದೃಷ್ಟಕರ ಘಟನೆ’

‘ಪ್ರಧಾನಿ ಮೋದಿ ಅವರ ಸಮಾಧಿಯನ್ನು ತೋಡುವುದಾಗಿ ಕಾಂಗ್ರೆಸ್ ಕಾರ್ಯಕರ್ತರು ಬಹಿರಂಗವಾಗಿ ಘೋಷಿಸಿರುವುದು ಅತ್ಯಂತ ದುರದೃಷ್ಟಕರ ಘಟನೆ’ ಎಂದು ಸಚಿವ ಕಿರಣ್ ರಿಜಿಜು ಹೇಳಿದರು.

ಸೋಮವಾರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜಕೀಯ ನಾಯಕರು ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪರಸ್ಪರ ಟೀಕಿಸುತ್ತಾರೆ-ಯಾದರೂ, ಸಾರ್ವಜನಿಕವಾಗಿ ಅವರು ಪರಸ್ಪರರ ಒಳಿತನ್ನು ಬಯಸುತ್ತಾರೆ’ ಎಂದರು.

‘ನಾವು ಒಬ್ಬರನ್ನೊಬ್ಬರು ಸೈದ್ಧಾಂತಿಕವಾಗಿ ವಿರೋಧಿಸುತ್ತೇವೆ. ಆದರೆ ಪರಸ್ಪರರನ್ನು ಕೊಲ್ಲುವ ಬಗ್ಗೆ ಎಂದಿಗೂ ಯೋಚಿಸುವುದಿಲ್ಲ ಹಾಗೂ ಅದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಇದು ಯಾವ ರೀತಿಯ ಮನಃಸ್ಥಿತಿ? ಕೆಲವರು ರಾಜಕೀಯ ಪ್ರತಿಸ್ಪರ್ಧಿಗಳನ್ನು ಕೊಲ್ಲುವುದಾಗಿ ಬಹಿರಂಗವಾಗಿ ಬೆದರಿಕೆ ಹಾಕುತ್ತಿರುವು-ದಕ್ಕೆ ಏನನ್ನೋಣ’ ಎಂದು ಪ್ರಶ್ನಿಸಿದರು.

ಜೋಯಾಲುಕ್ಕಾಸ್‌ನಿಂದ ‘ದಿ ಸೀಸನ್ ಆಫ್ ಗಿಫ್ಟಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ಕಂಪನಿಯು ‘ದಿ ಸೀಸನ್ ಆಫ್ ಗಿಫ್ಟಿಂಗ್’ ಹೆಸರಿನಲ್ಲಿ ವರ್ಷಾಂತ್ಯದ ಕೊಡುಗೆ ಪ್ರಕಟಿಸಿದೆ. ಈ ಕೊಡುಗೆಯು ಡಿಸೆಂಬರ್ 12ರಿಂದ ಆರಂಭವಾಗಿದ್ದು, ಜನವರಿ 4ರವರೆಗೆ ಇರಲಿದೆ.

ಕೊಡುಗೆ ಅಂಗವಾಗಿ ಗ್ರಾಹಕರು ಹಳೆಯ ಚಿನ್ನದ ವಿನಿಮಯದಲ್ಲಿ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹250 ಪಡೆಯಬಹುದು. ವಜ್ರ ಮತ್ತು ಕತ್ತರಿಸದ ವಜ್ರಗಳ ಮೌಲ್ಯದ ಮೇಲೆ ಶೇ 25ರಷ್ಟು ರಿಯಾಯಿತಿ ಇರುತ್ತದೆ ಎಂದು ಜೋಯಾಲುಕ್ಕಾಸ್ ತಿಳಿಸಿದೆ.

‘ದೇಶದಲ್ಲಿನ ಎಲ್ಲಾ ಜೋಯಾಲು ಕ್ಕಾಸ್ ಮಳಿಗೆಗಳಲ್ಲಿ ಈ ಕೊಡುಗೆ ಲಭ್ಯವಿದೆ. ಗ್ರಾಹಕರು ಜೋಯಾಲುಕ್ಕಾಸ್ ಮಳಿಗೆಗೆ ಭೇಟಿ ನೀಡಿ ಕೊಡುಗೆಯನ್ನು ಪಡೆಯಬಹುದು’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಹೇಳಿದ್ದಾರೆ.

‘ಹನುಕ್ಕಾ ಯಹೂದಿ ಹಬ್ಬ’ದಲ್ಲಿ ನಡೆದ ದುರಂತ ಪ್ರಕರಣ

‘ಪಾಕ್‌ನ ತಂದೆ–ಮಗನಿಂದ ಗುಂಡಿನ ದಾಳಿ’

ಸಿಡ್ನಿ (ಎಪಿ): ಇಲ್ಲಿನ ಪ್ರವಾಸಿ ತಾಣ ಬೋಂಡಿ ಬೀಚ್‌ನ ‘ಹನುಕ್ಕಾ ಯಹೂದಿ ಹಬ್ಬ’ದ ಪ್ರಾರಂಭೋತ್ಸವದಲ್ಲಿ ಭಾನುವಾರ ಗುಂಡಿನ ದಾಳಿ ನಡೆಸಿದ್ದು ಪಾಕಿಸ್ತಾನ ಮೂಲದ ಅಪ್ಪ ಹಾಗೂ ಮಗ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

‘ಯಹೂದಿ ವಿರೋಧಿ ಭಯೋತ್ಪಾದನೆ ಕೃತ್ಯವು ದೇಶದ ಹೃದಯಕ್ಕೆ ಅಪ್ಪಳಿಸಿದೆ’ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್ ಖಂಡನೆ ವ್ಯಕ್ತಪಡಿಸಿದ್ದಾರೆ.

ಕಠಿಣವಾದ ಬಂದೂಕು ನಿಯಮ ಹೊಂದಿದ ಹೊರತಾಗಿಯೂ ಆಸ್ಟ್ರೇಲಿ-ಯಾದಲ್ಲಿ ಕಳೆದ ಮೂರು ದಶಕಗಳಲ್ಲಿಯೇ ನಡೆದ ಭಾರಿ ಪ್ರಮಾಣದ ಭಯೋತ್ಪಾದಕ ದಾಳಿ ಇದಾಗಿದೆ.

‘50 ವರ್ಷ ವಯಸ್ಸಿನ ದಾಳಿಕೋರ ಸಾಜಿದ್ ಅಕ್ರಮ್ ಪೊಲೀಸರು ನಡೆಸಿದ ಗುಂಡಿನ ದಾಳಿಗೆ ಬಲಿಯಾಗಿದ್ದಾನೆ. 24 ವರ್ಷದ ಅವರ ಮಗ ನವೀದ್ ಅಕ್ರಮ್ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ನ್ಯೂ ಸೌತ್ ವೇಲ್ಸ್‌ನ ಪೊಲೀಸ್ ಆಯುಕ್ತ ಮಲ್ ಲ್ಯಾಲಿಯೊನ್ ತಿಳಿಸಿದ್ದಾರೆ.

‘ದಾಳಿಕೋರರ ಪೈಕಿ ಒಬ್ಬರ ಬಗ್ಗೆ ಭದ್ರತಾ ಪಡೆಗಳಿಗೆ ಮಾಹಿತಿಯಿದ್ದರೂ, ದಾಳಿ ನಡೆಯುವ ಯಾವುದೇ ಮುನ್ಸೂಚನೆ ಇರಲಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

42 ಮಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ: ‘ಭಾನುವಾರ ನಡೆದ ದಾಳಿಯಲ್ಲಿ ಮೃತಪಟ್ಟವರಲ್ಲಿ 10 ವರ್ಷದಿಂದ 87 ವರ್ಷದವರೆಗಿನವರಿದ್ದಾರೆ. ಉಳಿದಂತೆ 42 ಮಂದಿಯನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ, ಚಿಕಿತ್ಸೆ ಮುಂದುವರಿಸಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದೆ’ ಎಂದು ನ್ಯೂ ಸೌತ್ ವೇಲ್ಸ್‌ನ ಮುಖ್ಯಸ್ಥ (ಪ್ರೀಮಿಯರ್) ಕ್ರಿಸ್ ಮಿನ್ಸ್ ತಿಳಿಸಿದ್ದಾರೆ.

‘ನಾವು ಭಾನುವಾರ ನೋಡಿದ್ದು ಪೂರ್ಣ ಪ್ರಮಾಣದ ದುಷ್ಟ ಕೃತ್ಯ. ಯೆಹೂದಿ ವಿರೋಧಿ, ಭಯೋತ್ಪಾದಕ ಕೃತ್ಯವಾಗಿದೆ’ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್ ಹೇಳಿದ್ದಾರೆ.

ಹಣ್ಣಿನ ಮಾರಾಟಗಾರ: ‘ಮೃತ ದಾಳಿಕೋರ ಸಾಜಿದ್ ಪಾಕಿಸ್ತಾನ ಮೂಲದ ವ್ಯಕ್ತಿ. 1998ರಲ್ಲಿ ವಿದ್ಯಾರ್ಥಿ ವೀಸಾದ ಮೂಲಕ ಇಲ್ಲಿಗೆ ಬಂದಿದ್ದ. ಅವನ ಮಗ ಆಸ್ಟ್ರೇಲಿಯಾದಲ್ಲಿ ಜನಿಸಿದ್ದ’ ಎಂದು ಆಸ್ಟ್ರೇಲಿಯಾದ ಗೃಹ ಸಚಿವ ಟೋನಿ ಬುರ್ಕೆ ತಿಳಿಸಿದ್ದಾರೆ.

‘ಸಾಜೀದ್ ಹಣ್ಣಿನ ವ್ಯಾಪಾರಿಯಾಗಿದ್ದು, ಅವನ ಮಗ ಇಟ್ಟಿಗೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಕಂಪನಿಯು ದಿವಾಳಿಯಾದ ನಂತರ, ಎರಡು ತಿಂಗಳ ನಂತರ ಆತನನ್ನು ಕೆಲಸದಿಂದಲೇ ವಜಾಗೊಳಿಸಲಾಗಿತ್ತು. ಕಳೆದ 10 ವರ್ಷಗಳಿಂದಲೂ ಸಾಜಿದ್ ಬಂದೂಕು ಲೈಸೆನ್ಸ್ ಹೊಂದಿದ್ದ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಂದೂಕು ಕಾಯ್ದೆ: ಕಠಿಣ ನಿಯಮ ಪ್ರಸ್ತಾಪ

ಸಿಡ್ನಿ (ಎಪಿ): ‘ಸಾಮೂಹಿಕ ಗುಂಡಿನ ದಾಳಿಯ ಬಳಿಕ ದೇಶದಲ್ಲಿ ಬಂದೂಕು ನಿಯಮಗಳನ್ನು ಮತ್ತಷ್ಟು ಕಠಿಣಗೊಳಿಸಲಾಗುವುದು’ ಎಂದು ಪ್ರಧಾನಿ ಆಂಥೊನಿ ಅಲ್ಬನೀಸ್ ತಿಳಿಸಿದ್ದಾರೆ.

‘ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ಕಠಿಣ ಬಂದೂಕು ಕಾಯ್ದೆಯನ್ನು ಜಾರಿಗೆ ತರಲಾಗುವುದು. ಜನರ ಪರಿಸ್ಥಿತಿಗಳು ಬದಲಾಗುತ್ತಿವೆ. ಜನರು ಕ್ರಮೇಣ ಮೂಲಭೂತವಾದಿಗಳಾಗಬಹುದು. ಹೀಗಾಗಿ ಬಂದೂಕು ಪರವಾನಗಿ ಶಾಶ್ವತವಾಗಿ ಇರಬಾರದು’ ಎಂದು ಹೇಳಿದ್ದಾರೆ.

‘ಕೆಲವು ಕಾನೂನುಗಳು ಕಾಮನ್‌ವೆಲ್ತ್‌ಗೆ ಒಳಪಟ್ಟರೆ, ಉಳಿದವುಗಳು ರಾಜ್ಯಗಳಲ್ಲಿ ಜಾರಿಯಾಗಲಿವೆ’ ಎಂದು ಆಂಥೊನಿ ವಿವರಿಸಿದ್ದಾರೆ.

ಬಂದೂಕು ಕಾನೂನಿನಲ್ಲಿನ ಬದಲಾವಣೆಗಳ ಕುರಿತಂತೆ ಸೋಮವಾರ ನಡೆದ ರಾಷ್ಟ್ರೀಯ ಸಂಪುಟ ಸಭೆಯಲ್ಲಿ ಮಂಡಿಸಲಾಗಿದೆ. ರಾಜ್ಯಗಳಲ್ಲಿಯೂ ಈ ಸಂಬಂಧ ಕಾನೂನು ಬದಲಾವಣೆಯಾಗುವ ಅಗತ್ಯವಿದೆ ಎಂದಿದ್ದಾರೆ.

1996ರಲ್ಲಿ ಪೋರ್ಟ್ ಅರ್ಥರ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ 35 ಮಂದಿ ಮೃತಪಟ್ಟ ಬಳಿಕ ಆಸ್ಟ್ರೇಲಿಯಾ ಸರ್ಕಾರವು ಬಂದೂಕು ನಿಯಮಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಜಾರಿಗೆ ತಂದಿತ್ತು.

ಲೂವ್ರಾ ಮ್ಯೂಸಿಯಂ: ಸಿಬ್ಬಂದಿ ಮುಷ್ಕರ

ಪ್ಯಾರಿಸ್ (ಎಪಿ): ಕೆಲಸದ ವಾತಾವರಣವನ್ನು ಉತ್ತಮ-ಪಡಿಸುವಂತೆ ಮತ್ತು ಇತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ಆಗ್ರಹಿಸಿ ಲೂವ್ರಾ ಮ್ಯೂಸಿಯಂನ ಸಿಬ್ಬಂದಿ ಮುಷ್ಕರ ನಡೆಸಲು ಸಭೆ ನಡೆಸಿದ್ದಾರೆ.

ಸೋಮವಾರ ನಡೆದ ಸಭೆಯಲ್ಲಿ 400 ಕಾರ್ಮಿಕರು ಮತ ಚಲಾಯಿಸಿ, ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದ್ದಾರೆ ಎಂದು ಸಿಎಫ್‌ಡಿಟಿ ಸಂಘಟನೆ ತಿಳಿಸಿದೆ.

ಕಾರ್ಮಿಕ ಸಂಘಟನೆ ಮತ್ತು ಸರ್ಕಾರಿ ಅಧಿಕಾರಿಗಳ ನಡುವೆ ಕಳೆದ ವಾರ ಈ ಕುರಿತು ಮಾತುಕತೆ ನಡೆದಿತ್ತು. ಇದಾದ ಬಳಿಕ ಮುಷ್ಕರಕ್ಕೆ ಮತ ಚಲಾಯಿಸಲಾಗಿದೆ. ಮುಷ್ಕರದಿಂದ ಮ್ಯೂಸಿಯಂಗೆ ಭೇಟಿ ನೀಡುವವರಿಗೆ ಅಡಚಣೆಯಾಗಿದೆ ಎಂದು ಸಿಎಫ್‌ಡಿಟಿ ಸಂಘಟನೆ ತಿಳಿಸಿದೆ.

ಗ್ರೀನ್, ವೆಂಕಟೇಶ್ ಮೇಲೆ ಫ್ರಾಂಚೈಸಿಗಳ ಕಣ್ಣು

- ಅಬುಧಾಬಿಯಲ್ಲಿ ಐಪಿಎಲ್ ಮಿನಿ ಹರಾಜು ಇಂದು
- ₹237.55 ಕೋಟಿಯಲ್ಲಿ ನಡೆಯಲಿದೆ 77 ಆಟಗಾರರ ಆಯ್ಕೆ

ಅಬುಧಾಬಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮಿನಿ ಹರಾಜು ಪ್ರಕ್ರಿಯೆ ಮಂಗಳವಾರ ಇಲ್ಲಿ ನಡೆಯಲಿದೆ. ಹತ್ತು ಫ್ರಾಂಚೈಸಿಗಳ ಪರ್ಸ್‌ನಲ್ಲಿ ಒಟ್ಟು ₹237.55 ಕೋಟಿ ಹಣವಿದ್ದು, ಅದರಲ್ಲಿ 77 ಆಟಗಾರರ ಖರೀದಿಗೆ ಕಸರತ್ತು ನಡೆಸಲಿವೆ.

ಮೂರು ಬಾರಿಯ ಪ್ರಶಸ್ತಿ ವಿಜೇತ ಕೋಲ್ಕತ್ತ ನೈಟ್ ರೈಡರ್ಸ್ (₹64.30) ಮತ್ತು ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ (₹43.40) ಫ್ರಾಂಚೈಸಿಗಳ ಥೈಲಿಯಲ್ಲಿ ಅತ್ಯಧಿಕ ಮೊತ್ತವಿದ್ದು, ತಾರಾ ಆಟಗಾರರ ಮೇಲೆ ಕಣ್ಣಿಟ್ಟಿವೆ.

ಕೋಲ್ಕತ್ತ ಫ್ರಾಂಚೈಸಿಯು 13 ಆಟಗಾರರನ್ನು ಆಯ್ಕೆ ಮಾಡಿ, ತಂಡವನ್ನು ಬಲಿಷ್ಠವಾಗಿ ಸಜ್ಜುಗೊಳಿಸುವ ಗುರಿ ಹೊಂದಿದೆ. ಆ ಫ್ರಾಂಚೈಸಿಗೆ ಸೂಪರ್ ಕಿಂಗ್ಸ್ ಮಾತ್ರ ಸವಾಲು ಹಾಕಬಹುದು. ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ಪರ್ಸ್‌ನಲ್ಲಿ ಕೇವಲ ₹2.75 ಕೋಟಿ ಮಾತ್ರ ಇದೆ. ಹೀಗಾಗಿ, ಬಿಡ್‌ನಲ್ಲಿ ಈ ತಂಡ ದೊಡ್ಡ ಪಾತ್ರ ವಹಿಸುವ ಸಾಧ್ಯತೆ ಕಡಿಮೆ.

ಕಳೆದ ಆವೃತ್ತಿಯಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅವರು ಬಿಡ್‌ನಲ್ಲಿ ಅತಿ ಹೆಚ್ಚು ಮೌಲ್ಯ ಪಡೆಯುವ ನಿರೀಕ್ಷೆಯಿದೆ. ಅಲ್ಲದೆ, ಭಾರತದ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್, ಇಂಗ್ಲೆಂಡ್‌ನ ಲಿಯಾಮ್ ಲಿವಿಂಗ್‌ಸ್ಟೋನ್‌ರಂತಹ ಆಟಗಾರರನ್ನು ತೆಕ್ಕೆಗೆ ಪಡೆಯಲು ಫ್ರಾಂಚೈಸಿಗಳು ತೀವ್ರ ಪೈಪೋಟಿ ನಡೆಸುವ ಸಾಧ್ಯತೆ ಇದೆ.

ವೇಗದ ಬೌಲಿಂಗ್ ಆಲ್‌ರೌಂಡರ್‌ಗಳು ಸಾಮಾನ್ಯವಾಗಿ ಐಪಿಎಲ್ ಬಿಡ್‌ನಲ್ಲಿ ಹೆಚ್ಚಿನ ಮೌಲ್ಯ ಪಡೆಯುತ್ತಾರೆ. ಆದ್ದರಿಂದ ಮೂಲಬೆಲೆ ತಲಾ ₹2 ಕೋಟಿ ಹೊಂದಿರುವ ಗ್ರೀನ್, ಅಯ್ಯರ್ ಅವರೊಂದಿಗೆ ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಅವರು ಈ ಬಾರಿ ಬಿಡ್ಡಿಂಗ್‌ನಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ.

ಐಪಿಎಲ್ ಅಂಕಿಅಂಶಗಳನ್ನು ನೋಡಿದರೆ 26 ವರ್ಷದ ಗ್ರೀನ್ ಅವರು 29 ಪಂದ್ಯಗಳಲ್ಲಿ 704 ರನ್ ಮತ್ತು 16 ವಿಕೆಟ್‌ಗಳನ್ನು ಪಡೆದಿದ್ದಾರೆ. ಎಲ್ಲ ಮಾದರಿಯ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾವನ್ನು ಪ್ರತಿನಿಧಿಸುತ್ತಿರುವ ಈ ಆಟಗಾರ ಬಿಡ್‌ನ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಕಳೆದ ವರ್ಷ ಮೆಗಾ ಹರಾಜಿನಲ್ಲಿ ₹23.75 ಕೋಟಿ ಮೊತ್ತಕ್ಕೆ ಕೋಲ್ಕತ್ತ ತಂಡದ ಪಾಲಾಗಿದ್ದ ವೆಂಕಟೇಶ್ ಅಯ್ಯರ್ ನಿರಾಸೆ ಮೂಡಿಸಿದ್ದರು.

ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್ ಅವರನ್ನೂ ಬಿಡುಗಡೆ ಮಾಡಿರುವುದರಿಂದ ಕೋಲ್ಕತ್ತ ತಂಡಕ್ಕೆ ಕನಿಷ್ಠ ಇಬ್ಬರು ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಮತ್ತು ಒಬ್ಬ ಆಲ್‌ರೌಂಡರ್ ಅಗತ್ಯವಿದೆ.

ಗರಿಷ್ಠ ಮಿತಿ ₹18 ಲಕ್ಷ: ಗ್ರೀನ್ ಅವರಿಗೆ ತಮ್ಮದೇ ದೇಶದ ವೇಗಿ ಮಿಚೆಲ್ ಸ್ಟಾರ್ಕ್ (₹24.75 ಕೋಟಿ) ಅವರನ್ನು ಹಿಂದಿಕ್ಕಿ ಐಪಿಎಲ್ ಹರಾಜಿನಲ್ಲಿ ಅತಿಹೆಚ್ಚು ಮೌಲ್ಯ ಪಡೆಯುವ ವಿದೇಶಿ ಆಟಗಾರನಾಗುವ ಅವಕಾಶ ಇದೆ. ಆದರೆ, ಹರಾಜಿನಲ್ಲಿ ಅವರ ಮೌಲ್ಯ ₹25 ಕೋಟಿ ತಲುಪಿದರೂ, ಹಾಲಿ ಋತುವಿನಲ್ಲಿ ಅವರ ವೇತನ ₹18 ಕೋಟಿ ಮಾತ್ರ ಆಗಿರುತ್ತದೆ.


ಐಪಿಎಲ್‌ನ 'ಗರಿಷ್ಠ ಶುಲ್ಕ' ನಿಯಮದ ಪ್ರಕಾರ ಮಿನಿ ಹರಾಜಿನಲ್ಲಿ ವಿದೇಶಿ ಆಟಗಾರನ ಗರಿಷ್ಠ ಮೌಲ್ಯ ₹18 ಕೋಟಿಯಾಗಿದೆ. ಕಳೆದ ವರ್ಷ ಮೆಗಾ ಹರಾಜಿನಲ್ಲಿ ₹27 ಕೋಟಿ ಪಡೆದಿದ್ದ ರಿಷಬ್ ಪಂತ್ ಅವರು ಐಪಿಎಲ್ ಇತಿಹಾಸದಲ್ಲಿ ಈವರೆಗಿನ ದುಬಾರಿ ಆಟಗಾರ ಎನಿಸಿದ್ದಾರೆ.

ಮಿನಿ ಹರಾಜಿನಲ್ಲಿ ರೈಟ್ ಟು ಮ್ಯಾಚ್ (ಆರ್‌ಟಿಎಂ) ಕಾರ್ಡ್ ಬಳಸಲು ಅವಕಾಶವಿರುವುದಿಲ್ಲ. ಹಾಗಾಗಿ, ಕೋಲ್ಕತ್ತ ಫ್ರಾಂಚೈಸಿ ವೆಂಕಟೇಶ್ ಅವರನ್ನು ಮರಳಿ ಪಡೆಯಲು ಬಯಸಿದರೆ ಬಿಡ್ಡಿಂಗ್ ವೇಳೆಯೇ ಪೈಪೋಟಿ ನಡೆಸಬೇಕಾಗುತ್ತದೆ.

ಲಿವಿಂಗ್‌ಸ್ಟೋನ್ ಅಲ್ಲದೇ ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಕ್ವಿಂಟನ್ ಡಿ ಕಾಕ್ ಅವರೂ ಉತ್ತಮ ಮೊತ್ತ ಪಡೆಯುವ ಸಾಧ್ಯತೆ ಇದೆ.

ಹೊಸ ಆಟಗಾರರಾದ ಪ್ರಶಾಂತ್ ವೀರ್ ಮತ್ತು ಮುಕುಲ್ ಚೌಧರಿ ಫ್ರಾಂಚೈಸಿಗಳನ್ನು ಆಕರ್ಷಿಸಲಿದ್ದಾರೆ. ಕಡಿಮೆ ಮೂಲಬೆಲೆ ಹೊಂದಿರುವ ಪೃಥ್ವಿ ಶಾ ಮತ್ತು ಸರ್ಫರಾಜ್ ಖಾನ್ (ತಲಾ ₹75 ಲಕ್ಷ) ಅವರಿಗೂ 'ಕೋಟಿಪತಿ'ಗಳಾಗುವ ಅವಕಾಶವಿದೆ.

ಆಟಗಾರರ ಬಿಡ್ ಪ್ರಕ್ರಿಯೆಗೆ 1,390 ಆಟಗಾರರು ನೋಂದಾಯಿಸಿದ್ದರು. ನಂತರ ಅದು 1005ಕ್ಕೆ ಇಳಿಯಿತು. ಅಂತಿಮ ಪಟ್ಟಿಯಲ್ಲಿ 359 ಆಟಗಾರರು ಉಳಿದಿದ್ದಾರೆ.



ಅಂಕಿ ಅಂಶ

359	ಬಿಡ್‌ನಲ್ಲಿರುವ ಒಟ್ಟು ಆಟಗಾರರು
246	ಭಾರತೀಯ ಆಟಗಾರರು
113	ವಿದೇಶಿ ಆಟಗಾರರು
114	ಬಿಡ್‌ನಲ್ಲಿರುವ ಕ್ಯಾಪ್ಡ್ ಆಟಗಾರರು
245	ಅನ್‌ಕ್ಯಾಪ್ಡ್ ಆಟಗಾರರು

ಹರಾಜು ಪ್ರಕ್ರಿಯೆ ಆರಂಭ: ಮಧ್ಯಾಹ್ನ 2.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್


ವೆಂಕಟೇಶ್ ಅಯ್ಯರ್


ಕ್ಯಾಮರಾನ್ ಗ್ರೀನ್
ಲಿಯಾಮ್ ಲಿವಿಂಗ್‌ಸ್ಟೋನ್
ಕ್ವಿಂಟನ್ ಡಿ ಕಾಕ್

₹ 2 ಕೋಟಿ ಮೂಲಬೆಲೆ ಹೊಂದಿರುವ ಆಟಗಾರರು

ವೆಂಕಟೇಶ್ ಅಯ್ಯರ್, ರವಿ ಬಿಷ್ಣೋಯಿ (ಭಾರತ); ಕ್ಯಾಮರಾನ್ ಗ್ರೀನ್, ಜೇಕ್ ಫ್ರೆಸರ್ ಮೆಕ್‌ಗುರ್ಕ್, ಸ್ಟೀವ್ ಸ್ಮಿತ್, ಸೀನ್ ಅಬಾಟ್, ಜೋಶ್ ಇಂಗ್ಲಿಸ್, ಕೂಪರ್ ಕಾನೋಲಿ (ಆಸ್ಟ್ರೇಲಿಯಾ); ಲಿಯಾಮ್ ಲಿವಿಂಗ್‌ಸ್ಟೋನ್, ಬೆನ್ ಡಕೆಟ್, ಜೆಮಿ ಸ್ಮಿತ್, ಗಸ್ ಅಟ್ಕಿನ್ಸನ್, ಟಾಮ್ ಬ್ಯಾಂಟನ್, ಲಿಯಾಮ್ ಡಾಸನ್, ಟಾಮ್ ಕರನ್, ಡೇನಿಯಲ್ ಲಾರೆನ್ಸ್ (ಇಂಗ್ಲೆಂಡ್); ಡೆವೊನ್ ಕಾನ್ವೆ, ಜೆಕಬ್ ಡಫಿ, ಮೈಕೆಲ್ ಬ್ರೇಸ್‌ವೆಲ್, ಡೇರಿಲ್ ಮಿಚೆಲ್, ಕೈಲ್ ಜೇಮಿಸನ್, ವಿಲಿಯಂ ಓ ರೂರ್ಕಿ, ಆ್ಯಡಂ ಮಿಲ್ನೆ (ನ್ಯೂಜಿಲೆಂಡ್), ಲುಂಗಿ ಎನ್‌ಗಿಡಿ, ಜೆರಾಲ್ಡ್ ಕೊಟ್ಜಿಯಾ, ಎನ್ರಿಚ್ ನಾಕಿಯಾ, ಡೇವಿಡ್ ಮಿಲ್ಲರ್ (ದಕ್ಷಿಣ ಆಫ್ರಿಕಾ), ವನಿಂದು ಹಸರಂಗ, ಮಥೀಷ ಪಥಿರಾಣ, ಮಹೀಶ್ ತೀಕ್ಷಣ (ಶ್ರೀಲಂಕಾ); ಅಕಿಲ್ ಹುಸೇನ್, ಶಾಯಿ ಹೋಪ್, ಅಲ್ಜರಿ ಜೋಸೆಫ್, ಜೇಸನ್ ಹೋಲ್ಡರ್ (ವೆಸ್ಟ್ ಇಂಡೀಸ್), ಮುಜೀಬ್ ಉರ್ ರೆಹಮಾನ್, ನವೀನ್ ಉಲ್ ಹಕ್ (ಅಫ್ಗಾನಿಸ್ತಾನ); ಮುಸ್ತಾಫಿಜುರ್ ರೆಹಮಾನ್ (ಬಾಂಗ್ಲಾದೇಶ)

ಅಣಕು ಹರಾಜು: ಗ್ರೀನ್‌ಗೆ ₹30.5 ಕೋಟಿ!

ಬೆಂಗಳೂರು: ಮಿನಿ ಹರಾಜಿಗೂ ಮುನ್ನ ಇಂಡಿಯನ್ ಪ್ರೀಮಿಯರ್ ಲೀಗ್‌ನ ಅಧಿಕೃತ ಪ್ರಸಾರಕ ಸಂಸ್ಥೆ ಸ್ಟಾರ್ ಸ್ಪೋರ್ಟ್ಸ್ ಅಣಕು ಹರಾಜನ್ನು ನಡೆಸಿತು. ಭಾರತ ತಂಡದ ಕೆಲ ಮಾಜಿ ಆಟಗಾರರು ಭಾಗವಹಿಸಿದ್ದರು. ಈ ವೇಳೆ ಕ್ಯಾಮರಾನ್ ಗ್ರೀನ್, ಸರ್ಫರಾಜ್ ಖಾನ್ ಭಾರೀ ಮೊತ್ತ ಪಡೆದರು.

ಗ್ರೀನ್ ಅವರನ್ನು ₹30.5 ಕೋಟಿ ಮೊತ್ತಕ್ಕೆ ಕೋಲ್ಕತ್ತ ತಂಡವು ಆಯ್ಕೆ ಮಾಡಿತು. ಕೋಲ್ಕತ್ತ ತಂಡದ ಪರ ರಾಬಿನ್ ಉತ್ತಪ್ಪ ಅವರು ಗ್ರೀನ್‌ಗಾಗಿ ಬಿಡ್ ಮಾಡಿದ್ದರು.

ಭಾರತದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಸರ್ಫರಾಜ್ ಖಾನ್ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ಅಣಕು ಹರಾಜಿನಲ್ಲಿ ಆಯ್ಕೆ ಮಾಡಿತು. ಸುರೇಶ್ ರೈನಾ ಚೆನ್ನೈ ತಂಡವನ್ನು ಪ್ರತಿನಿಧಿಸಿ ₹7 ಕೋಟಿಗೆ ಸರ್ಫರಾಜ್ ಅವರನ್ನು ಖರೀದಿಸಿದ್ದರು.

ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನು ₹19 ಕೋಟಿಗೆ ಲಖನೌ ತಂಡ ತೆಕ್ಕೆಗೆ ಹಾಕಿಕೊಂಡಿತು. ಇರ್ಫಾನ್ ಪಠಾಣ್ ಲಖನೌ ತಂಡದ ಪರ ಬಿಡ್ ಮಾಡಿದ್ದರು.


ಅಕ್ಷರ್ ಅಲಭ್ಯ; ಶಾಬಾಜ್ ಸೇರ್ಪಡೆ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಅನಾರೋಗ್ಯದ ಕಾರಣ ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯ ಉಳಿದ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಬಿಸಿಸಿಐ ಆಯ್ಕೆ ಸಮಿತಿ ಅವರ ಬದಲಿಗೆ ಶಾಬಾಜ್ ಅಹ್ಮದ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಅಕ್ಷರ್ ಅವರು ಧರ್ಮಶಾಲಾದಲ್ಲಿ ಭಾನುವಾರ ನಡೆದ ಮೂರನೇ ಟಿ20 ಪಂದ್ಯದಲ್ಲೂ ಆಡಿರಲಿಲ್ಲ. ಅವರ ಬದಲು ಕುಲದೀಪ್ ಯಾದವ್ ಅವರು ಆಡುವ 11ರ ತಂಡದಲ್ಲಿ ಅವಕಾಶ ಪಡೆದಿದ್ದರು. ಆ ಪಂದ್ಯ ಗೆದ್ದ ಭಾರತ ಸರಣಿಯಲ್ಲಿ 2–1 ಮುನ್ನಡೆ ಪಡೆದಿದೆ.

ಸರಣಿಯ ಕೊನೆಯ ಎರಡು ಪಂದ್ಯಗಳು ಲಖನೌ ಮತ್ತು ಅಹಮದಾಬಾದಿನಲ್ಲಿ ಕ್ರಮವಾಗಿ ಬುಧವಾರ ಮತ್ತು ಶುಕ್ರವಾರ ನಡೆಯಲಿವೆ.

'ಟೀಮ್ ಇಂಡಿಯಾದ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಅನಾರೋಗ್ಯದ ಕಾರಣ ಸರಣಿಯ ಉಳಿದ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಆದರೆ ಅವರು ತಂಡದ ಜೊತೆ ಲಖನೌಗೂ ಪಯಣಿಸಲಿದ್ದಾರೆ. ಅಲ್ಲಿ ಅವರ ಆರೋಗ್ಯದ ಬಗ್ಗೆ ಗಮನ ಇಡಲಾಗುವುದು. ಆಯ್ಕೆ ಸಮಿತಿಯು ಅವರ ಬದಲು ಶಾಬಾಜ್ ಅಹ್ಮದ್ ಅವರನ್ನು ಉಳಿದ ಎರಡು ಪಂದ್ಯಗಳಿಗೆ ಸೇರ್ಪಡೆ ಮಾಡಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಶಾಬಾಜ್ ಅಹ್ಮದ್

31 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ಶಾಬಾಜ್ ಅಹ್ಮದ್ ಅವರು ಎರಡು ಟಿ20 ಪಂದ್ಯ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಿದ್ದು ಒಟ್ಟು ಐದು ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು ಇತ್ತೀಚಿನ ರಣಜಿ ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದರು.

ಎನ್‌ಎಸ್‌ಎಫ್ ಮಾನ್ಯತೆ ಬಿಸಿಸಿಐ ಪಡೆದಿಲ್ಲ: ಸಚಿವ ಮಾಂಡವೀಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ರಾಷ್ಟ್ರೀಯ ಕ್ರೀಡಾ ಫೆಡರೇಷನ್ (ಎನ್‌ಎಸ್‌ಎಫ್) ಮಾನ್ಯತೆ ಪಡೆದಿಲ್ಲ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಸೋಮವಾರ ಲೋಕಸಭೆಗೆ ತಿಳಿಸಿದ್ದಾರೆ.


ಮನ್ಸುಖ್ ಮಾಂಡವೀಯ

ಕೋಲ್ಕತ್ತ ದಕ್ಷಿಣ ಕ್ಷೇತ್ರದ ತೃಣಮೂಲ ಕಾಂಗ್ರೆಸ್ ಸದಸ್ಯೆ ಮಾಲಾ ರಾಯ್ ಅವರ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದ್ದಾರೆ.

ಮಂಡಳಿಯು ದೀರ್ಘಕಾಲದಿಂದ ಎನ್‌ಎಸ್‌ಎಫ್ ಮಾನ್ಯತೆ ಪಡೆದಿಲ್ಲ. ಆದರೆ ಮುಂದಿನ ವರ್ಷ ನೂತನ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ ಜಾರಿಯಾದ ನಂತರ ಇದು ಬದಲಾಗುವ ನಿರೀಕ್ಷೆಯಿದೆ.

ಬಿಸಿಸಿಐ ಮತ್ತು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್)ನಂಥ ದೊಡ್ಡ ಸಂಸ್ಥೆಗಳ ಸುಗಮ ಕಾರ್ಯನಿರ್ವಹಣೆಗಾಗಿ ಸರ್ಕಾರ ಅವುಗಳನ್ನು ನಿಯಂತ್ರಣಕ್ಕೆ ಪಡೆಯುವ ಉದ್ದೇಶ ಹೊಂದಿದೆಯೇ ಎಂಬ ಸಂಸದೆ ಕೇಳಿದ್ದರು.

ಅಂಗೀಕಾರ ಪಡೆದ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಗೆ ಆಗಸ್ಟ್‌ನಲ್ಲಿ ಸಂಸತ್ತು ಅಂಗೀಕಾರ ನೀಡಿತ್ತು. ಇದರ ನಿಯಮಗಳ ಜಾರಿಗೆ ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದು. ಮುಂದಿನ ವರ್ಷದಿಂದ ಕಾಯ್ದೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗುವುದು ಎಂದು ಮಾಂಡವೀಯ ಭರವಸೆ ನೀಡಿದರು.

ಸರ್ಕಾರದ ಅನುದಾನದ ಮೇಲೆ ಅವಲಂಬನೆ ಹೊಂದಿಲ್ಲದ ಕಾರಣ ಬಿಸಿಸಿಐಯನ್ನು ಎನ್‌ಎಸ್‌ಎಫ್ ಎಂದು ಘೋಷಿಸಿರಲಿಲ್ಲ. ಆದರೆ ನೂತನ ಕಾಯ್ದೆ ಜಾರಿಗೆ ಬಂದ ಮೇಲೆ ಇದು ಕೂಡ ಎನ್‌ಎಸ್‌ಎಫ್ ಎಂದು ನೋಂದಾಯಿಸಿಕೊಳ್ಳಬೇಕಾಗುತ್ತದೆ. ಕ್ರಿಕೆಟ್ ಸಹ ಒಲಿಂಪಿಕ್ ಕ್ರೀಡೆಯಾಗಲಿರುವುದು ಇದಕ್ಕೆ ಕಾರಣ. 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡೆಗಳಲ್ಲಿ ಟಿ20 ಮಾದರಿಯ ಕ್ರಿಕೆಟ್ ಸೇರ್ಪಡೆಯಾಗಲಿದೆ.

ದ.ಆಫ್ರಿಕಾದ ಹಾರ್ಮರ್‌ಗೆ ಪುರುಷರ ವಿಭಾಗದ ಪ್ರಶಸ್ತಿ

ಶಫಾಲಿಗೆ ತಿಂಗಳ ಆಟಗಾರ್ತಿ ಗೌರವ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಅಮೋಘ ಆಟವಾಡಿದ್ದ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಅವರನ್ನು ಐಸಿಸಿ ನವೆಂಬರ್ ತಿಂಗಳ ಆಟಗಾರ್ತಿ ಗೌರವಕ್ಕೆ ಸೋಮವಾರ ಆಯ್ಕೆ ಮಾಡಲಾಗಿದೆ.

ಆರಂಭ ಆಟಗಾರ್ತಿ ಪ್ರತೀಕಾ ರಾವಲ್ ಗಾಯಗೊಂಡ ಪರಿಣಾಮ ತಂಡಕ್ಕೆ ಸೇರ್ಪಡೆ ಆಗಿದ್ದ ಶಫಾಲಿ ಅವರು ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 78 ಎಸೆತಗಳಲ್ಲಿ 87 ರನ್ ಬಾರಿಸಿದ್ದರು. ನವಿ ಮುಂಬೈನಲ್ಲಿ ನಡೆದ ಆ ಪಂದ್ಯವನ್ನು 52 ರನ್‌ಗಳಿಂದ ಗೆದ್ದ ಭಾರತ ಮೊದಲ ಬಾರಿ ವಿಶ್ವಕಪ್ ಗೆದ್ದು ಸಂಭ್ರಮಿಸಿತ್ತು.

ಸ್ಮೃತಿ ಮಂದಾನ ಜೊತೆ 104 ರನ್ ಸೇರಿಸಿ ಭಾರತ ದೊಡ್ಡ ಮೊತ್ತ ಗಳಿಸಲು ಅವರು ಅಡಿಪಾಯ ಹಾಕಿದ್ದರು.

21 ವರ್ಷದ ಶಫಾಲಿ ಜೊತೆ, ಥಾಯ್ಲೆಂಡ್‌ನ ತಿಪಟ್ಚಾ ಪುತ್ತವಾಂಗ್ ಮತ್ತು ಯುಎಇಯ ಇಶಾ ಓಝಾ ಸಹ ಈ ಪ್ರಶಸ್ತಿಗೆ ಪೈಪೋಟಿ ನಡೆಸಿದ್ದರು. ಶಫಾಲಿ ಮೊದಲ ಬಾರಿ ಈ 'ತಿಂಗಳ ಆಟಗಾರ್ತಿ' ಗೌರಕ್ಕೆ ಪಾತ್ರರಾಗಿದ್ದಾರೆ.

'ನನ್ನ ಮೊದಲ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ಅನುಭವ ನಾನು ನಿರೀಕ್ಷಿಸಿದ ರೀತಿ ನಡೆಯಲಿಲ್ಲ. ಆದರೆ ನಾನು ಹಾರೈಸಿದ್ದಕಿಂತ ಉತ್ತಮ ರೀತಿ ಕೊನೆಗೊಂಡಿತು' ಎಂದು ಶಫಾಲಿ ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಶಫಾಲಿ ವರ್ಮಾ

'ನವೆಂಬರ್ ತಿಂಗಳ ಆಟಗಾರ್ತಿಯಾಗಿ ನನ್ನನ್ನು ಹೆಸರಿಸಿರುವುದು ನಿಜವಾಗಿ ನನಗೊದಗಿದ ಗೌರವ. ತಂಡದ ಸಹ ಆಟಗಾರ್ತಿಯರು, ತರಬೇತುದಾರರು, ಕುಟುಂಬ ಮತ್ತು ನನ್ನನ್ನು ಈ ಪಯಣದಲ್ಲಿ ಬೆಂಬಲಿಸಿದ ಎಲ್ಲರಿಗೂ ಈ ಪ್ರಶಸ್ತಿ ಸಮರ್ಪಿಸುತ್ತೇನೆ. ನಾವು ತಂಡವಾಗಿ ಗೆಲ್ಲುತ್ತೇವೆ ಅಥವಾ ಸೋಲುತ್ತೇವೆ. ಪ್ರಶಸ್ತಿಯೂ ಅದೇ ರೀತಿ' ಎಂದು ಅವರು ಹೇಳಿದ್ದಾರೆ.

ಹಾರ್ಮರ್‌ಗೆ ಪ್ರಶಸ್ತಿ: ಭಾರತ ವಿರುದ್ಧ ದಕ್ಷಿಣ ಆಫ್ರಿಕಾ ತಂಡ 2–0 ಯಿಂದ ಟೆಸ್ಟ್ ಸರಣಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ ಸ್ಪಿನ್ ಬೌಲರ್ ಸಿಮೋನ್ ಹಾರ್ಮರ್ ಅವರು ಪುರುಷರ ವಿಭಾಗದ ಗೌರವಕ್ಕೆ ಪಾತ್ರರಾಗಿದ್ದಾರೆ.

ಆಫ್ ಸ್ಪಿನ್ನರ್ ಹಾರ್ಮರ್ ಈ ಗೌರವಕ್ಕೆ ನಡೆದ ಪೈಪೋಟಿಯಲ್ಲಿ ಬಾಂಗ್ಲಾದೇಶದ ತೈಜುಲ್ ಇಸ್ಲಾಂ, ಪಾಕಿಸ್ತಾನದ ಮೊಹಮ್ಮದ್ ನವಾಝ್ ಅವರನ್ನು ಹಿಂದೆಹಾಕಿದ್ದಾರೆ.


ಸಿಮೋನ್ ಹಾರ್ಮರ್

ಇದೇ ಮೊದಲ ಸಲ ಈ ಗೌರವಕ್ಕೆ ಆಯ್ಕೆಯಾಗಿರುವ 36 ವರ್ಷ ವಯಸ್ಸಿನ ಹಾರ್ಮರ್ 17 ವಿಕೆಟ್‌ಗಳನ್ನು ಬಾಚಿದ್ದರು. ಭಾರತದ ನೆಲದಲ್ಲಿ ದಕ್ಷಿಣ ಆಫ್ರಿಕಾ 25 ವರ್ಷಗಳಲ್ಲಿ ಮೊದಲ ಬಾರಿ ಟೆಸ್ಟ್ ಸರಣಿ ಗೆಲ್ಲಲು ಅವರ ಬೌಲಿಂಗ್ ಕಾರಣವಾಗಿತ್ತು.

ಮೊದಲ ಟೆಸ್ಟ್‌ನಲ್ಲಿ 30ಕ್ಕೆ4 ಮತ್ತು 21ಕ್ಕೆ4 ವಿಕೆಟ್ ಪಡೆದ ಅವರು, ಎರಡನೇ ಟೆಸ್ಟ್‌ನಲ್ಲಿ 64ಕ್ಕೆ3 ಮತ್ತು 37ಕ್ಕೆ6 ವಿಕೆಟ್ ಪಡೆದಿದ್ದರು. 8.94ರ ಸರಾಸರಿಯಲ್ಲಿ (1.91 ಇಕಾನಮಿ) ವಿಕೆಟ್‌ಗಳನ್ನು ಪಡೆದಿದ್ದರು.

ಟೆನಿಸ್: ಕ್ವಾರ್ಟರ್‌ಫೈನಲ್‌ಗೆ ಕಲಾ

ಬೆಂಗಳೂರು: ಅಗ್ರ ಶ್ರೇಯಾಂಕದ ಆಟಗಾರ್ತಿ ಜೆ.ಕೆ.ಕಲಾ ಅವರು ಸೋಮವಾರ ಆರಂಭಗೊಂಡ ಎಐಟಿಎ ಟಿಎಸ್–7 ರಾಷ್ಟ್ರೀಯ ಸರಣಿಯ ಟೆನಿಸ್ ಟೂರ್ನಿಯ (12 ವರ್ಷದೊಳಗಿನವರ) ಬಾಲಕಿಯರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸುಂಕದಕಟ್ಟೆಯ ಫೋಕಸ್ ಟೆನಿಸ್ ಮತ್ತು ಪಿಕಲ್‌ಬಾಲ್ ಅಕಾಡೆಮಿಯಲ್ಲಿ ನಡೆದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ತೆಲಂಗಾಣದ ಕಲಾ ಅವರು 6–1, 6–2ರಿಂದ ಕರ್ನಾಟಕದ ಧನ್ವಿಶ್ರೀ ಬೋಯಾ ಅವರನ್ನು ಸುಲಭವಾಗಿ ಮಣಿಸಿದರು. ಎರಡನೇ ಶ್ರೇಯಾಂಕದ ಆಟಗಾರ್ತಿ ರಚೆಲ್ ರಾಯುಡು 6–0, 7–6(7–5)ರಿಂದ ಪಿಯಾ ಕೆ. ವಿರುದ್ಧ ಗೆಲುವು ಸಾಧಿಸಿದರು.

ಮೂರನೇ ಶ್ರೇಯಾಂಕದ ಆಟಗಾರ್ತಿ ಧಾತ್ರಿ ಎಸ್.ಬಿ. 6–0, 6–0ಯಿಂದ ಹೈಫಾ ಅಫ್ರೋಜ್ ವಿರುದ್ಧ ನಿರಾಯಾಸ ಗೆಲುವು ಸಾಧಿಸಿ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಬಿ.ಹರಿಣಿ ಶ್ರೀ ಅವರೂ ಇದೇ ಅಂತರದಲ್ಲಿ ಅರೀನಾ ಸಾರಾ ಅವರನ್ನು ಸೋಲಿಸಿದರು.

ಬಾಲಕರ ವಿಭಾಗದ ಮೊದಲ ಸುತ್ತಿನಲ್ಲಿ ತಮಿಳುನಾಡಿನ ಅಗ್ರಶ್ರೇಯಾಂಕದ ಆಟಗಾರ ಶ್ರವಿನ್ ಆರ್. ಬೈ ಪಡೆದರು. ಅವರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಕನ್ನಡಿಗ ವೇದಾಂತ್ ಗೌಡ ಅವರ ಸವಾಲನ್ನು ಎದುರಿಸಲಿದ್ದಾರೆ. ಎರಡನೇ ಶ್ರೇಯಾಂಕದ ಆಟಗಾರ ದಾರ್ಶ್ ಮಲ್ಹಾನ್ 6–0, 6–1ರಿಂದ ಜೀವನ್ ವಿರುದ್ಧ ಗೆಲುವು ಸಾಧಿಸಿದರು.

ಶ್ರೇಯಾಂಕ ರಹಿತ ಆಟಗಾರ ಮೋಹಿತ್ ಪಿ. ಅವರು 6–0, 6–3ರಿಂದ ಎಂಟನೇ ಶ್ರೇಯಾಂಕದ ಪಂಡಿತ್ ದೇವ್ ಅವರಿಗೆ ಆಘಾತ ನೀಡಿದರು. ಮೂರನೇ ಶ್ರೇಯಾಂಕದ ಆಟಗಾರ ಆಹನ್ ಶಾ ಬೈ ಪಡೆದು 16ರ ಘಟ್ಟಕ್ಕೆ ಮುನ್ನಡೆದರು.

ಶೂಟಿಂಗ್: ಮನುಗೆ ಚಿನ್ನ, ದಿವ್ಯಾಗೆ ಬೆಳ್ಳಿ

ನವದೆಹಲಿ (ಪಿಟಿಐ): ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಮತ್ತು ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಕ್ರಮವಾಗಿ ಸೀನಿಯರ್ ಮತ್ತು ಜೂನಿಯರ್ ವಿಭಾಗದಲ್ಲಿ ಚಿನ್ನಕ್ಕೆ ಗುರಿಯಿಟ್ಟರು.

ಡಾ.ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಸೋಮವಾರ ನಡೆದ ಫೈನಲ್‌ನಲ್ಲಿ 36 ಅಂಕಗಳೊಂದಿಗೆ ಹರಿಯಾಣದ ಮನು ಅಗ್ರಸ್ಥಾನಿಯಾದರು. ಕರ್ನಾಟಕದ ಶೂಟರ್ ದಿವ್ಯಾ ಟಿ.ಎಸ್. 32 ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರು. ಹರಿಯಾಣದ ಅಂಜಲಿ ಚೌಧರಿ (28) ಕಂಚಿನ ಪದಕ ತಮ್ಮದಾಗಿಸಿಕೊಂಡರು. ಅರ್ಹತಾ ಸುತ್ತಿನಲ್ಲಿ ದಿವ್ಯಾ 587 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದರೆ, ಮನು (581) ನಾಲ್ಕನೇ ಸ್ಥಾನ ಗಳಿಸಿದರು. ಅಂಜಲಿ ಚೌಧರಿ (582) ಮತ್ತು ಅನ್ನು ರಾಜ್ ಸಿಂಗ್ (582) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.

2 ಪಂದ್ಯ ಆಡುವುದು ಕಡ್ಡಾಯ

ವಿಜಯ್ ಹಜಾರೆ ಟ್ರೋಫಿ ಏಕದಿನ: ಬಿಸಿಸಿಐ ತಾಕೀತು

ನವದೆಹಲಿ (ಪಿಟಿಐ): ಇದೇ ತಿಂಗಳ 24ರಿಂದ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಕನಿಷ್ಠ ಎರಡು ಪಂದ್ಯಗಳಲ್ಲಾದರೂ ಆಡಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ರಾಷ್ಟ್ರೀಯ ತಂಡದ ಹಾಲಿ ಆಟಗಾರರಿಗೆ ತಾಕೀತು ಮಾಡಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯ ಕೊನೆಯ ಪಂದ್ಯ ಅಹಮದಾಬಾದಿನಲ್ಲಿ (ಡಿ. 19ರಂದು) ನಡೆಯಲಿದೆ. ಭಾರತಕ್ಕೆ ಮುಂದಿನ ಟಿ20 ಸರಣಿ ನ್ಯೂಜಿಲೆಂಡ್ ವಿರುದ್ಧ ಜನವರಿ 11ರಿಂದ ನಿಗದಿಯಾಗಿದೆ. ಈ ಅವಧಿಯ ಮಧ್ಯೆ ಮೂರು ವಾರಗಳ ಬಿಡುವು ಇರುವ ಕಾರಣ ಸೀನಿಯರ್ ತಂಡದ ಆಟಗಾರರೆಲ್ಲಾ ದೇಶಿ ಕ್ರಿಕೆಟ್ ಆಡಬೇಕು ಎಂದು ಮಂಡಳಿ ಬಯಸಿದೆ.


ಭಾರತ ಕ್ರಿಕೆಟ್ ತಂಡದ ಆಟಗಾರರಾದ ವಿರಾಟ್ ಕೊಹ್ಲಿ, ಅರ್ಷದೀಪ್ ಸಿಂಗ್, ಶುಭಮನ್ ಗಿಲ್ ಹಾಗೂ ರೋಹಿತ್ ಶರ್ಮಾ — ಪಿಟಿಐ ಸಂಗ್ರಹ ಚಿತ್ರ


ಅನುಭವಿ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಟೂರ್ನಿಗೆ ಲಭ್ಯರಿರುವುದಾಗಿ ಈಗಾಗಲೇ ಮಾಹಿತಿ ನೀಡಿದ್ದಾರೆ. ಶುಭಮನ್ ಗಿಲ್, ಜಸ್‌ಪ್ರೀತ್ ಬೂಮ್ರಾ, ಕೆ.ಎಲ್.ರಾಹುಲ್, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್ ಸೇರಿದಂತೆ ಇತರ ಆಟಗಾರರಿಗೂ ತಮ್ಮ ತಮ್ಮ ತಂಡಗಳಿಗೆ ಕನಿಷ್ಠ ಎರಡು ಪಂದ್ಯಗಳನ್ನಾದರೂ ಆಡಬೇಕೆಂದು ಸೂಚಿಸಲಾಗಿದೆ.

ಈ ವರ್ಷದ ಆರಂಭದಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯಲ್ಲಿ ಹಿನ್ನಡೆ ಅನುಭವಿಸಿದ ನಂತರ ನಡೆದ ಪರಾಮರ್ಶೆ ಸಭೆಯಲ್ಲಿ ಕೈಗೊಳ್ಳಲಾದ ಶಿಫಾರಸುಗಳಲ್ಲಿ ಇದೂ ಒಂದಾಗಿದೆ. ದೇಶಿ ಕ್ರಿಕೆಟ್ ವಿವಿಧ ಮಾದರಿಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಲಾಗಿತ್ತು.

ಗಾಯದಿಂದ ಚೇತರಿಸಿಕೊಳ್ಳಲು ಶ್ರೇಯಸ್ ಅಯ್ಯರ್ ಅವರಿಗೆ ಸಮಯ ತಗಲುವ ಕಾರಣ ರಿಯಾಯಿತಿ ನೀಡಲಾಗಿದೆ.

ಬೂಮ್ರಾ ತವರಿಗೆ: ಕುಟುಂಬದ ಆಪ್ತ ಸದಸ್ಯರೊಬ್ಬರು ಆಸ್ಪತ್ರೆಗೆ ದಾಖಲಾಗಿರುವ ಕಾರಣ ಜಸ್‌ಪ್ರೀತ್ ಬೂಮ್ರಾ ಅವರು ಮೂರನೇ ಪಂದ್ಯದ ನಂತರ ಧರ್ಮಶಾಲಾದಿಂದ ತವರು ಮುಂಬೈಗೆ ಹಿಂತಿರುಗಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ಒಂದೇ ದಿನ ತಂಡ ಪ್ರಕಟ: ಐಸಿಸಿಯು ಟಿ20 ವಿಶ್ವಕಪ್‌ಗೆ ತಂಡವನ್ನು ಪ್ರಕಟಿಸಲು ಗಡುವು ವಿಧಿಸಿದೆ. ಹೀಗಾಗಿ ಭಾರತ ಆ ಟೂರ್ನಿಗೆ ಮತ್ತು ಅದಕ್ಕೆ ಮುನ್ನ ನ್ಯೂಜಿಲೆಂಡ್ ವಿರುದ್ಧ ನಡೆಯುವ ಏಕದಿನ ಸರಣಿಗೆ ಒಂದೇ ದಿನ ತಂಡಗಳನ್ನು ಪ್ರಕಟಿಸಲಿದೆ. ಜನವರಿ ಮೊದಲ ವಾರ ತಂಡಗಳನ್ನು ಪ್ರಕಟಿಸುವ ಸಾಧ್ಯತೆಯಿದೆ ಎಂದೂ ತಿಳಿಸಿವೆ.


ಬೆಂಗಳೂರಿನ ಜೆಐಎನ್ ಸ್ಪೋರ್ಟ್ಸ್‌ನಲ್ಲಿ ಮ್ಯಾಂಚೆಸ್ಟರ್ ಸಿಟಿ ಫುಟ್‌ಬಾಲ್ ಶಾಲೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ (ಎಡದಿಂದ) ಜೈನ್ ಸಮೂಹ ಸಂಸ್ಥೆಗಳ ಕ್ರೀಡಾ ನಿರ್ದೇಶಕ ಡಾ.ಶಂಕರ್, ದಿ ಸ್ಪೋರ್ಟ್ಸ್ ಸ್ಕೂಲ್‌ನ 'ಕ್ರಿಕೆಟ್ ಆಪರೇಷನ್ಸ್' ನಿರ್ದೇಶಕ ಆರ್. ಅನಂತ್, ಜೆಐಎನ್ ಸ್ಪೋರ್ಟ್ಸ್ ಫುಟ್ಬಾಲ್ ಕಾರ್ಯಕ್ರಮ ನಿರ್ದೇಶಕ ಟೆರ್ರಿ ಫೆಲಾನ್, ಜೆಜಿಐ ಗ್ರೂಪ್ ಅಧ್ಯಕ್ಷ ಚೆನರಾಜ್ ರಾಯ್‌ಚಂದ್, ಶರತ್ ಕಮಲ್, ಜಾರ್ಜಿನಾ ಬುಸ್ಕೆಟ್ಸ್, ಇಮ್ತಿಯಾಜ್ ಪಾಲ್ಗೊಂಡಿದ್ದರು

ಜೈನ್ ಸ್ಪೋರ್ಟ್ಸ್‌ನಲ್ಲಿ ಮ್ಯಾಂಚೆಸ್ಟರ್ ಸಿಟಿ ಫುಟ್‌ಬಾಲ್ ಶಾಲೆ ಆರಂಭ

ಬೆಂಗಳೂರು: ಜೈನ್ ಸಮೂಹ ಸಂಸ್ಥೆಗಳ (ಜೆಜಿಐ) ಒಡೆತನದ ಬೆಂಗಳೂರಿನ ಜೈನ್ ಗ್ಲೋಬಲ್ ಕ್ಯಾಂಪಸ್‌ನ ಜೆಐಎನ್ ಸ್ಪೋರ್ಟ್ಸ್‌ನಲ್ಲಿ ಮ್ಯಾಂಚೆಸ್ಟರ್ ಸಿಟಿ ಫುಟ್‌ಬಾಲ್ ಶಾಲೆಯನ್ನು ಸೋಮವಾರ ಆರಂಭಿಸಲಾಗಿದೆ.

ಮ್ಯಾಂಚೆಸ್ಟರ್ ಸಿಟಿ ಮತ್ತು ಜೆಐಎನ್ ಸ್ಪೋರ್ಟ್ಸ್‌ನ ಈ ಸಹಯೋಗವು ಉತ್ತಮ ಗುಣಮಟ್ಟದ ತರಬೇತಿ, ಶೈಕ್ಷಣಿಕ ಉತ್ಕೃಷ್ಟತೆ, ಅತ್ಯಾಧುನಿಕ ಮೂಲಸೌಕರ್ಯ ಮತ್ತು ಸಮಗ್ರ ವಿದ್ಯಾರ್ಥಿ- ಕ್ರೀಡಾಪಟುಗಳ ಅಭಿವೃದ್ಧಿಯ ಮೂಲಕ ಉದಯೋನ್ಮುಖ ಕ್ರೀಡಾ-ಪ್ರತಿಭೆಗಳನ್ನು ಪೋಷಿಸುವ ಗುರಿಯನ್ನು ಹೊಂದಲಾಗಿದೆ.

ಜೆಜಿಐ ಗ್ರೂಪ್ ಅಧ್ಯಕ್ಷ ಚೆನರಾಜ್ ರಾಯ್ ಚಂದ್ ಮಾತನಾಡಿ, 'ಮ್ಯಾಂಚೆಸ್ಟರ್ ಸಿಟಿಯೊಂದಿಗಿನ ಪಾಲುದಾರಿಕೆಯು ಭಾರತದ ಸಮಗ್ರ ಕ್ರೀಡಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ನಮ್ಮ ಪ್ರಯಾಣದಲ್ಲಿ ನಿರ್ಣಾಯಕ ಮೈಲಿಗಲ್ಲಾಗಿದೆ' ಎಂದು ಹೇಳಿದರು

ದೀಕ್ಷಾ ಕೈಚಳಕ ಕರ್ನಾಟಕಕ್ಕೆ ಜಯ

ಬೆಂಗಳೂರು: ಸ್ಪಿನ್ನರ್ ದೀಕ್ಷಾ ಹೊನ್ನುಶ್ರೀ (33ಕ್ಕೆ 4) ಅವರ ಕೈಚಳಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ 43 ರನ್‌ಗಳಿಂದ ಛತ್ತೀಸಗಢ ತಂಡವನ್ನು ಮಣಿಸಿತು.

ಹೈದರಾಬಾದ್‌ನ ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಎಲೀಟ್ ಗುಂಪಿನ ಪಂದ್ಯದಲ್ಲಿ ರಚಿತಾ ಹತ್ವಾರ್ ನೇತೃತ್ವದ ರಾಜ್ಯ ತಂಡ ಗೆಲುವಿನ ಓಟ ಮುಂದುವರಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಕಾಶ್ವಿ ಕಂಡಿಕುಪ್ಪ (64;77ಎ) ಅವರ ಅರ್ಧಶತಕದ ನೆರವಿನಿಂದ 48.4 ಓವರ್‌ಗಳಲ್ಲಿ 180 ರನ್ ಗಳಿಸಿ ಆಲೌಟ್ ಆಯಿತು.

ಗುರಿಯನ್ನು ಬೆನ್ನಟ್ಟಿದ ಛತ್ತೀಸಗಢ ತಂಡವನ್ನು 50 ಓವರ್‌ಗಳಲ್ಲಿ 9 ವಿಕೆಟ್‌ಗೆ 137 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 48.4 ಓವರ್‌ಗಳಲ್ಲಿ 180 (ಕಾಶ್ವಿ ಕಂಡಿಕುಪ್ಪ 64; ಮಹೆಕ್ ನರ್ವಾಸೆ 38ಕ್ಕೆ 2, ಶ್ರೇಯಾ ಶ್ರೀನಿವಾಸ್ 39ಕ್ಕೆ 2, ದೀಪ್ತಿಕಾ ಭಗತ್ 35ಕ್ಕೆ 2). ಛತ್ತೀಸಗಢ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 137 (ಯತಿ ಶರ್ಮಾ 34, ಭವಿಕಾ ಸಾಹು 36; ದೀಕ್ಷಾ ಹೊನ್ನುಶ್ರೀ 33ಕ್ಕೆ 4).



ಜಿಎಸ್ ದೆಹಲಿ ಏಸಸ್ ತಂಡದ ಆಟಗಾರರು ಮತ್ತು ಸಿಬ್ಬಂದಿ ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಟಿಪಿಎಲ್: ದೆಹಲಿ ಏಸಸ್ ಚಾಂಪಿಯನ್

ಅಹಮದಾಬಾದ್ (ಪಿಟಿಐ): ಜಿಎಸ್ ದೆಹಲಿ ಏಸಸ್ ತಂಡವು 7ನೇ ಆವೃತ್ತಿಯ ಟೆನಿಸ್ ಪ್ರೀಮಿಯರ್ ಲೀಗ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಇಲ್ಲಿನ ಗುಜರಾತ್ ವಿ.ವಿ. ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ 51–36ರಿಂದ ಯಶ್ ಮುಂಬೈ ಈಗಲ್ಸ್ ತಂಡವನ್ನು ಮಣಿಸಿದ ದೆಹಲಿ ತಂಡವು ಪದಾರ್ಪಣೆ ಮಾಡಿದ ಆವೃತ್ತಿಯಲ್ಲೇ ಪ್ರಶಸ್ತಿ ಗೆದ್ದು ಗಮನ ಸೆಳೆಯಿತು.

ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿದ ಬೆಲ್ಜಿಯಂನ ತಾರಾ ಆಟಗಾರ್ತಿ ಸೋಫಿಯಾ ಕಾಸ್ಟೂಲಸ್ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ 18–7ರಿಂದ ರಿಯಾ ಭಾಟಿಯಾ ಅವರನ್ನು ಸೋಲಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಕಾಸ್ಟೂಲಸ್–ಜೀವನ್ ನೆಡುಂಜೆಳಿಯನ್ ಜೋಡಿಯು 16–9ರಿಂದ ರಿಯಾ ಹಾಗೂ ನಿಕಿ ಪೂಣಚ್ಚ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಮುಂಬೈ ತಂಡದ ಡಮಿರ್ ಜೂಮೂರ್ ಅವರು 16–9ರಿಂದ ಬಿಲ್ಲಿ ಹ್ಯಾರಿಸ್ ವಿರುದ್ಧ ಗೆದ್ದರು. ಆದರೆ, ನಿರ್ಣಾಯಕವಾಗಿದ್ದ ಪುರುಷರ ಡಬಲ್ಸ್‌ನಲ್ಲಿ ದೆಹಲಿಯ ಹ್ಯಾರಿಸ್–ಜೀವನ್ ಜೋಡಿಯು 8–4ರಿಂದ ನಿಕಿ ಹಾಗೂ ಜೂಮೂರ್ ಜೋಡಿಯನ್ನು ಮಣಿಸಿ ತಮ್ಮ ತಂಡ ಚಾಂಪಿಯನ್ ಆಗಲು ನೆರವಾದರು.

ಮುಂಬೈ ಈಗಲ್ಸ್ ತಂಡವು ಸೆಮಿಫೈನಲ್‌ನಲ್ಲಿ 51–49ರಿಂದ ಎಸ್‌ಜಿ ಪೈಪರ್ಸ್ ಬೆಂಗಳೂರು ತಂಡದ ವಿರುದ್ಧ ಗೆಲುವು ಸಾಧಿಸಿತ್ತು.

ರಾಷ್ಟ್ರೀಯ ಕುಸ್ತಿ: ಶ್ವೇತಾಗೆ ಬೆಳ್ಳಿ ಪದಕ

ಬೆಂಗಳೂರು: ಕರ್ನಾಟಕದ ಶ್ವೇತಾ ಎಸ್. ಅಣ್ಣಿಕೆರೆ ಅವರು ಅಹಮದಾಬಾದಿನಲ್ಲಿ ಭಾನುವಾರ ಮುಕ್ತಾಯಗೊಂಡ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಕೆ.ಜಿ. ವಿಭಾಗ ದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.


ಶ್ವೇತಾ ಅಣ್ಣಿಕೆರೆ


ರೋಹನ್

ಹಳಿಯಾಳದ ಅರ್ಲವಾಡ ಗ್ರಾಮದ ಶ್ವೇತಾ ಅವರು ಫೈನಲ್‌ನಲ್ಲಿ ರೈಲ್ವೇಸ್‌ನ ಅಂತರರಾಷ್ಟ್ರೀಯ ಕುಸ್ತಿಪಟು, ಅಗ್ರಶ್ರೇಯಾಂಕದ ನೀಲಂ ಅವರಿಗೆ ಮಣಿದರು.

ಕರ್ನಾಟಕದ ಆಟಗಾರ್ತಿ ಸೆಮಿಫೈನಲ್‌ನಲ್ಲಿ ಮಹಾರಾಷ್ಟ್ರದ ಗೌರಿ ಪಾಟೀಲ್ ಅವರನ್ನು 2 ಪಾಯಿಂಟ್ ಗಳಿಂದ, ಕ್ವಾರ್ಟರ್‌ಫೈನಲ್‌ನಲ್ಲಿ ಹರಿಯಾಣದ ಮುಸ್ಕಾನ್ ಅವರನ್ನು 10–0ಯಿಂದ ಸೋಲಿಸಿದ್ದರು.

ಪುರುಷರ 70 ಕೆ.ಜಿ. ವಿಭಾಗದಲ್ಲಿ ರೈಲ್ವೇಸ್ ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ರೋಹನ್ ಎನ್.ಘೆವಡಿ ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹಳಿಯಾಳದ ರೋಹನ್ ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸರ್ವಿಸಸ್‌ನ ನವೀನ್ ಅವರನ್ನು 8–4 ಪಾಯಿಂಟ್‌ಗಳಿಂದ ಸೋಲಿಸಿದರು. ಹರಿಯಾಣದ ಅಭಿಮನ್ಯು ಚಿನ್ನದ ಪದಕ ಗೆದ್ದರೆ, ಉತ್ತರ ಪ್ರದೇಶದ ರವಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ದಮ್ಮಿಕಾ ರಣತುಂಗ ಬಂಧನ, ಬಿಡುಗಡೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಅರ್ಜುನ ರಣತುಂಗ ಅವರ ಹಿರಿಯ ಸಹೋದರ, ಮಾಜಿ ಕ್ರಿಕೆಟಿಗ ದಮ್ಮಿಕಾ ರಣತುಂಗ ಅವರನ್ನು ಶ್ರೀಲಂಕಾದ ಭ್ರಷ್ಟಾಚಾರ ನಿಗ್ರಹ ಆಯೋಗವು ಸೋಮವಾರ ಬಂಧಿಸಿದೆ. ಬಳಿಕ, ಜಾಮೀನಿನ ಮೇಲೆ ಅವರು ಬಿಡುಗಡೆಯಾಗಿದ್ದಾರೆ.

63 ವರ್ಷ ವಯಸ್ಸಿನ ದಮ್ಮಿಕಾ ಅವರು ಸರ್ಕಾರಿ ಒಡೆತನದ ಸಿಲೋನ್ ಪೆಟ್ರೋಲಿಯಂ ಕಾರ್ಪೊರೇಷನ್‌ನ (ಸಿಪಿಸಿ) ಅಧ್ಯಕ್ಷರಾಗಿದ್ದ ಅವಧಿಯಲ್ಲಿ (2017), ಕಚ್ಚಾ ತೈಲ ಖರೀದಿಯ ಟೆಂಡರ್‌ನಲ್ಲಿ ಅಕ್ರಮ ಎಸಗಿದ್ದಾರೆ ಎಂಬ ಆರೋಪದ ಮೇಲೆ ಅವರನ್ನು ಬಂಧಿಸಲಾಗಿತ್ತು. ಅರ್ಜುನ ಅವರು ಆ ಅವಧಿಯಲ್ಲಿ ಶ್ರೀಲಂಕಾದ ಪೆಟ್ರೋಲಿಯಂ ಖಾತೆ ಸಚಿವರಾಗಿದ್ದರು.

ದೆಹಲಿಯಲ್ಲಿ ಮೆಸ್ಸಿ ಅಭಿಮಾನಿಗಳ ಪುಳಕ



ಫುಟ್‌ಬಾಲ್ ಮಾಂತ್ರಿಕ ಲಯೊನೆಲ್ ಮೆಸ್ಸಿ ಅವರಿಗೆ ಐಸಿಸಿ ಅಧ್ಯಕ್ಷ ಜಯ್ ಶಾ ಟಿ20 ವಿಶ್ವಕಪ್‌ನಲ್ಲಿ ಭಾರತ–ಅಮೆರಿಕ ಉದ್ಘಾಟನಾ ಪಂದ್ಯದ ಟಿಕೆಟ್ ನೀಡಿದರು. ಲೂಯಿಸ್ ಸೊರೇಝ್, ರಾಡ್ರಿಗೊ ಡಿ ಪಾಲ್ ಅವರೂ ಪಾಲ್ಗೊಂಡರು.

ಅರ್ಜೆಂಟೀನಾದ ದಿಗ್ಗಜ ಫುಟ್‌ಬಾಲ್ ಆಟಗಾರನ 'ಗೋಟ್' ಪ್ರವಾಸ ಸುಖಾಂತ್ಯ

ನವದೆಹಲಿ (ಪಿಟಿಐ): ಕೋಲ್ಕತ್ತದಲ್ಲಿ ಗೊಂದಲ, ಅರಾಜಕತೆಯ ಸ್ಥಿತಿಯಲ್ಲಿ ಶುರುವಾದ ಫುಟ್‌ಬಾಲ್ ಮಾಂತ್ರಿಕ ಲಯೊನೆಲ್ ಮೆಸ್ಸಿ ಅವರ ಭಾರತದ 'ಗೋಟ್' ಪ್ರವಾಸವು ರಾಷ್ಟ್ರ ರಾಜಧಾನಿಯಲ್ಲಿ ಸಂಭ್ರಮದ ಅಂತ್ಯ ಕಂಡಿತು. ಫುಟ್‌ಬಾಲ್ ಅಂಗಳದಲ್ಲಿ ಮೋಡಿ ಮಾಡುವ ಆಟಗಾರನನ್ನು ಸೋಮವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸಹಸ್ರಾರು ಅಭಿಮಾನಿಗಳು ಕಣ್ತುಂಬಿಕೊಂಡರು.

ಬಹುನಿರೀಕ್ಷಿತ 'ಗೋಟ್' (greatest of all time) ಪ್ರವಾಸವು ಶನಿವಾರ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಆರಂಭ ಪಡೆದಿತ್ತು.

ಕೋಟ್ಲಾದ ಜೇಟ್ಲಿ ಕ್ರೀಡಾಂಗಣದಲ್ಲಿ ಕುತೂಹಲಭರಿತರಾಗಿ ಕಾಯುತ್ತಿದ್ದ ಅಭಿಮಾನಿಗಳು, ವಿಶ್ವ ಪ್ರಸಿದ್ಧ ಆಟಗಾರ ಆಗಮಿಸುತ್ತಿದ್ದಂತೆ ಪುಳಕಗೊಂಡರು. ಎರಡು ದಶಕಗಳಿಂದ ಫುಟ್‌ಬಾಲ್ ಅಂಗಣದಲ್ಲಿ ಮಿಂಚುಹರಿಸಿರುವ ಅರ್ಜೆಂಟೀನಾದ ಸ್ಟಾರ್ ಆಟಗಾರನ ಜೊತೆ ಸೆಲೆಬ್ರಿಟಿಗಳು, ಗಣ್ಯರೂ ಕ್ರೀಡಾಂಗಣದ ಒಳಗೆ ಬಂದರು.

ಕ್ರೀಡಾಂಗಣದೊಳಗೆ ಬಂದ ತಕ್ಷಣ ಅವರು ಮುಗುಳ್ನಗುತ್ತಾ ಒಂದು ಪ್ರದಕ್ಷಿಣೆ ಹಾಕಿದರು. ಈ ಸಂದರ್ಭದಲ್ಲಿ ನಂ. 10 ಸಂಖ್ಯೆಯ ಅರ್ಜೆಂಟೀನಾದ ನೀಲಿ, ಬಿಳಿ ಪೋಷಾಕನ್ನು ಧರಿಸಿದ್ದ ಬಹುಸಂಖ್ಯೆಯ ಪ್ರೇಕ್ಷಕರು ನಿರಂತರವಾಗಿ ಅವರ ಹೆಸರನ್ನು ಜಪಿಸಿದರು. ಮೆಸ್ಸಿ ಒಂದೆಡೆ ನಿಂತು ಪ್ರೇಕ್ಷಕರತ್ತ ಕೈಬೀಸಿದಾಗ ಹರ್ಷೋದ್ಗಾರಗಳು ಮೊಳಗಿದವು.

ಶನಿವಾರ ಕೋಲ್ಕತ್ತದ ಸಾಲ್ಟ್‌ಲೇಕ್ ಕ್ರೀಡಾಂಗಣದೊಳಗೆ ಬರುವಾಗ ರಾಜಕಾರಣಿಗಳು, ಅವರ ಹಿಂಬಾಲಕರು ಸುತ್ತುವರಿದ ಪರಿಣಾಮ ಮೆಸ್ಸಿ ಅವರ ದರ್ಶನವಾಗದೇ ಅಭಿಮಾನಿಗಳು ಆಕ್ರೋಶಗೊಂಡಿದ್ದರು. ಆದರೆ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು.

ಗುಲಾಬಿ ಬಣ್ಣದ ಟೀ ಶರ್ಟ್ ಮತ್ತು ಕಪ್ಪು ಪ್ಯಾಂಟು ಧರಿಸಿದ್ದ ಮೆಸ್ಸಿ ಅವರು ಇಂಟರ್ ಮಯಾಮಿ ಸಹ ಆಟಗಾರರಾದ ಲೂಯಿಸ್ ಸೊರೇಝ್ ಮತ್ತು ರಾಡ್ರಿಗೊ ಡಿ ಪಾಲ್ ಅವರೊಂದಿಗೆ ಆಡುವ ವೇಳೆ ಚೆಂಡನ್ನು ಕೆಲವು ಬಾರಿ ಸ್ಟ್ಯಾಂಡ್‌ನತ್ತ ಒದ್ದರು. ಸುಮಾರು 25,000 ಪ್ರೇಕ್ಷಕರು ಈ ವೇಳೆ ರೋಮಾಂಚನಗೊಂಡರು.

'ನಿಮ್ಮ ಪ್ರೀತಿ ಮತ್ತು ಬೆಂಬಲ ಪಡೆಯುವುದು ಸುಂದರ ಕ್ಷಣ. ಇದನ್ನು ನಿರೀಕ್ಷಿಸಿದ್ದೆ. ಆದರೆ ಅದನ್ನು ಸ್ವತಃ ಅನುಭವಿಸಿದ ಕ್ಷಣ ಅವಿಸ್ಮರಣೀಯ. ಖಂಡಿತ ಮತ್ತೊಮ್ಮೆ ಬರುವೆ' ಎಂದು ಪ್ರೇಕ್ಷಕರನ್ನು ಉದ್ದೇಶಿಸಿ ಸ್ಪ್ಯಾನಿಷ್ ಭಾಷೆಯಲ್ಲಿ ಮಾತನಾಡಿದರು.

ಅರ್ಧ ಗಂಟೆಯ ಕಾರ್ಯಕ್ರಮದ ನಂತರ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಐಸಿಸಿ ಅಧ್ಯಕ್ಷ ಜಯ್ ಶಾ, ದೆಹಲಿ ಜಿಲ್ಲಾ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರೋಹನ್ ಜೇಟ್ಲಿ, ಭಾರತ ಫುಟ್‌ಬಾಲ್ ದಿಗ್ಗಜ ಬೈಚುಂಗ್ ಭುಟಿಯಾ ಅವರಿಗೆ ಮೆಸ್ಸಿ ಅವರೊಂದಿಗೆ ಒಡನಾಡುವ ಅವಕಾಶ ದೊರೆಯಿತು.

ವಿಳಂಬವಾದ ಆಗಮನ: ಮೆಸ್ಸಿ ಅವರು ಬೆಳಿಗ್ಗೆ 10.45ಕ್ಕೆ ರಾಜಧಾನಿಗೆ ತಲುಪಬೇಕಾಗಿತ್ತು. ಆದರೆ ಪ್ರತಿಕೂಲ ಹವಾಮಾನದ ಕಾರಣ ಅವರು 2.30ಕ್ಕೆ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಅಲ್ಲಿಂದ ನೇರವಾಗಿ ಲೀಲಾ ಪ್ಯಾಲೇಸ್ ಹೋಟೆಲ್‌ಗೆ ತೆರಳಿದರು. ಅಲ್ಲಿ ಆಯ್ದ ಗಣ್ಯರೊಂದಿಗೆ 'ಮೀಟ್ ಆ್ಯಂಡ್ ಗ್ರೀಟ್' ಕಾರ್ಯಕ್ರಮದಲ್ಲಿ ಭಾಗಿಯಾದರು.



ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಪುಟಾಣಿಗಳೊಂದಿಗೆ ಆಡಿದ ಲಯೊನೆಲ್ ಮೆಸ್ಸಿ — ಪಿಟಿಐ ಚಿತ್ರ

ನನಸಾದ ಕನಸು; ಸುನಿಲ್ ಚೆಟ್ರಿ ಬಣ್ಣನೆ



ನವದೆಹಲಿ (ಪಿಟಿಐ): ಗೋಟ್ ಪ್ರವಾಸದ ವೇಳೆ ಫುಟ್‌ಬಾಲ್ ಸೂಪರ್‌ಸ್ಟಾರ್ ಲಯೊನೆಲ್ ಮೆಸ್ಸಿ ಅವರೊಂದಿಗೆ ಒಡನಾಡುವ ಅವಕಾಶ ದೊರಕಿದ್ದು 'ಕನಸು' ಎಂದು ಭಾರತ ತಂಡದ ದಿಗ್ಗಜ ಆಟಗಾರ ಸುನಿಲ್ ಚೆಟ್ರಿ ಬಣ್ಣಿಸಿದ್ದಾರೆ.

ಫುಟ್‌ಬಾಲ್ ಇತಿಹಾಸದಲ್ಲಿ 95 ಗೋಲುಗಳೊಡನೆ ನಾಲ್ಕನೇ ಅತ್ಯಧಿಕ ಸ್ಕೋರರ್ ಎನಿಸಿರುವ ಚೆಟ್ರಿ ಅವರು ಭಾನುವಾರ ಮುಂಬೈನಲ್ಲಿ ಚೆಟ್ರಿ ಅವರನ್ನು ಭೇಟಿಯಾಗಿದ್ದರು. 38 ವರ್ಷ ವಯಸ್ಸಿನ ಮೆಸ್ಸಿ ಇದುವರೆಗೆ 115 ಗೋಲು ಗಳಿಸಿದ್ದು ಎರಡನೇ ಸ್ಥಾನದಲ್ಲಿದ್ದಾರೆ.

ಕೊಡವ ಕೌಟುಂಬಿಕ ಹಾಕಿ: ಇದೇ 26ರಿಂದ ಚಾಂಪಿಯನ್ಸ್ ಟ್ರೋಫಿ

ಮಡಿಕೇರಿ: ಇದುವರೆಗಿನ ಕೊಡವ ಕೌಟುಂಬಿಕ ಹಾಕಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡಗಳಿಗಾಗಿ 'ಲೆವಿಷ್ಟಾ ಚಾಂಪಿಯನ್ಸ್ ಟ್ರೋಫಿ'ಯು ಇದೇ 26ರಿಂದ 30ರವರೆಗೆ ಇಲ್ಲಿನ ಮೂರ್ನಾಡು ಗ್ರಾಮದ ದಿವಂಗತ ಬಾಚೆಟ್ಟೀರ ಲಾಲೂಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆಯಲಿದೆ.

'ಕುಟ್ಟಪ್ಪ ಕುಟ್ಟಣಿ ಹಾಗೂ ಸೋದರ ಕಾಶಿ ಅವರಿಂದ ಕರಡದಲ್ಲಿ 1997ರಲ್ಲಿ ಕೊಡವ ಕೌಟುಂಬಿಕ ಹಾಕಿ ಟೂರ್ನಿ ಆರಂಭವಾಯಿತು. ಈವರೆಗೆ ಒಟ್ಟು 25 ಆವೃತ್ತಿಯ ಟೂರ್ನಿಗಳು ಜರುಗಿವೆ. ಅವುಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡಗಳಿಗೆ ಟ್ರೋಫಿ ನಡೆಯಲಿದೆ' ಎಂದು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ. ಬೋಪಣ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'13 ಕುಟುಂಬಗಳ ತಂಡಗಳು ಭಾಗಿಯಾಗಲಿವೆ. ಮೊದಲ ಬಹುಮಾನ ₹ 2 ಲಕ್ಷ, ದ್ವಿತೀಯ ₹1 ಲಕ್ಷ, ಸೆಮಿಫೈನಲ್‌ಗೆ ಅರ್ಹತೆ ಪಡೆದ ತಂಡಗಳಿಗೆ ₹ 50 ಸಾವಿರ, ಟೂರ್ನಿಯಲ್ಲಿ ಭಾಗವಹಿಸಿದ ಎಲ್ಲ ತಂಡಗಳಿಗೂ ₹ 25 ಸಾವಿರ ಬಹುಮಾನ ನೀಡಲಾಗುವುದು. ಕೊಡವ ಹಾಕಿ ಅಕಾಡೆಮಿ, ಹಾಕಿ ಕೂರ್ಗ್ ಸಂಸ್ಥೆ, ಎಂ.ಬಾಡಗ ಸ್ಪೋರ್ಟ್ಸ್ ರಿಕ್ರೀಯೇಷನ್ ಸಂಸ್ಥೆ ಹಾಗೂ ಮೂರ್ನಾಡು ವಿದ್ಯಾ ಸಂಸ್ಥೆಯ ಸಹಯೋಗದಲ್ಲಿ ಈ ಟೂರ್ನಿ ಆಯೋಜಿಸಲಾಗುತ್ತಿದೆ' ಎಂದರು.

ಗ್ಲೋಬಲ್ ಚೆಸ್ ಲೀಗ್ ಅಗ್ರಸ್ಥಾನಕ್ಕೆ ಮುಂಬಾ ಮಾಸ್ಟರ್ಸ್



ಮುಂಬೈ (ಪಿಟಿಐ): ಆತ್ಮವಿಶ್ವಾಸದಲ್ಲಿರುವ ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್ ತಂಡ, ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಸೋಮವಾರ ಅಮೋಘ ಪ್ರದರ್ಶನ ನೀಡಿ ಫೈಯರ್ಸ್ ಅಮೆರಿಕನ್ ಗ್ಯಾಂಬಿಟ್ಸ್ ತಂಡವನ್ನು 9–7 ರಿಂದ ಸೋಲಿಸಿತು. ಎರಡನೇ ಗೆಲುವಿನೊಡನೆ, ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ನೇತೃತ್ವದ ಮುಂಬಾ ಮಾಸ್ಟರ್ಸ್ ತಂಡ ಅಗ್ರಸ್ಥಾನಕ್ಕೇರಿತು.

ಗ್ಯಾಂಜೆಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡ ಇನ್ನೊಂದು ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು ಅಲ್ಪೈನ್ ಎಸ್‌ಜಿ ಪೈಪರ್ಸ್ ತಂಡವನ್ನು 13–7 ರಿಂದ ಸೋಲಿಸಿತು. ಇದು ಜಿಸಿಎಲ್ ಮೂರನೇ ಆವೃತ್ತಿಯಲ್ಲಿ ಗ್ಯಾಂಜೆಸ್ ತಂಡಕ್ಕೆ ಮೊದಲ ಜಯ.

ಆರಂಭದಲ್ಲಿ ಸ್ವಲ್ಪ ಒತ್ತಡ ಅನುಭವಿಸಿದ ಮುಂಬಾ ಮಾಸ್ಟರ್ಸ್ ತಂಡ ಕ್ರಮೇಣ ಚೇತರಿಸಿಕೊಂಡಿತು. ಅಮೆರಿಕದ ವೆಸ್ಲಿ ಸೊ ಅವರು ಗ್ಯಾಂಬಿಟ್ಸ್ ತಂಡದ ವ್ಲಾದಿಮಿರ್ ಆರ್ಟೆಮೀವ್ ಜೊತೆ ಡ್ರಾ ಮಾಡಿಕೊಂಡರು. ಕೋನೇರು ಹಂಪಿ ಸಹ ತಮ್ಮ ಪಂದ್ಯ ಡ್ರಾ ಮಾಡಿಕೊಂಡಾಗ ಸ್ಕೋರ್ 2–2 ಆಗಿತ್ತು. ಆದರೆ ಶಕ್ರಿಯಾರ್ ಮೆಮೆದ್ಯರೋವ್, ನಿಧಾನವಾಗಿ ವ್ಯೂಹರಚಿಸಿ ರಿಚರ್ಡ್ ರ್‍ಯಾಪೋರ್ಟ್ ಅವರನ್ನು ಸೋಲಿಸಿ ಮುಂಬೈ ತಂಡಕ್ಕೆ 5–2 ಮುನ್ನಡೆ ಒದಗಿಸಿದರು.

ಇರಾನ್ ಆಟಗಾರ ಬದ್ರಿಯಾ ದಾನೇಶ್ವರ್ ಅವರು ಹಾಲಿ ವಿಶ್ವ ರ್‍ಯಾಪಿಡ್ ಚಾಂಪಿಯನ್ ವೊಲೊಡರ್ ಮುರ್ಝಿನ್ ಅವರನ್ನು ಅಚ್ಚರಿಯ ಸೋಲುಣಿಸುವ ಮೂಲಕ ಪಂದ್ಯದಲ್ಲಿ ಮುಂಬೈ ನಿರ್ಣಾಯಕ ಮೇಲುಗೈ ಪಡೆಯಲು ಕಾರಣರಾದರು. ನಂತರ ಗ್ಯಾಂಬಿಟ್ಸ್ ತಂಡದ ಥಿಯೊಡ್ರ ಇಂಜಾಕ್ ಅವರು ದ್ರೋಣವಲ್ಲಿ ಹಾರಿಕ ಅವರ ಜೊತೆ ಡ್ರಾ ಮಾಡಿಕೊಂಡರು. ಹಿಕಾರು ನಕಾಮುರಾ ಅವರು ಮ್ಯಾಕ್ಸಿಂ ಲಗ್ರಾವ್ ಮೇಲೆ ಜಯಗಳಿಸಿದರೂ, ತಂಡ ಒಟ್ಟಾರೆ ಎರಡು ಪಾಯಿಂಟ್ ಹಿನ್ನಡೆ ಅನುಭವಿಸಿತು. ಮೆಮೆದ್ಯರೋವ್ ಪಂದ್ಯದ ಆಟಗಾರ ಎನಿಸಿದರು.

ಬೆಂಗಳೂರು, ಮೈಸೂರು ರೇಸ್ ರದ್ದು

ಬೆಂಗಳೂರು: ಇದೇ 17ರಂದು (ಬುಧವಾರ) ಮತ್ತು 19ರಂದು (ಶುಕ್ರವಾರ) ನಡೆಯಬೇಕಿದ್ದ ಮೈಸೂರು ಮತ್ತು ಬೆಂಗಳೂರು ರೇಸ್‌ಗಳನ್ನು ರದ್ದುಪಡಿಸಲಾಗಿದೆ.

ಮೈಸೂರು ಮತ್ತು ಬೆಂಗಳೂರು ರೇಸ್ ಕ್ಲಬ್‌ಗಳಲ್ಲಿ ಬೀಡುಬಿಟ್ಟಿರುವ ಕೆಲವು ಕುದುರೆಗಳಲ್ಲಿ 'ಗ್ಲ್ಯಾಂಡರ್ಸ್' ರೋಗದ ಸೋಂಕು ಕಾಣಿಸಿಕೊಂಡಿದೆ. ಹೀಗಾಗಿ, ಮುನ್ನೆಚ್ಚರಿಕಾ ಕ್ರಮವಾಗಿ ಮೈಸೂರು ಹಾಗೂ ಬೆಂಗಳೂರು ಟರ್ಫ್ ಕ್ಲಬ್‌ಗಳು ಈ ವಾರದ ರೇಸ್‌ಗಳನ್ನು ರದ್ದುಪಡಿಸಿವೆ ಎಂದು ಮೂಲಗಳು ತಿಳಿಸಿವೆ.